ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

25 ಫೆಬ್ರವರಿ 2015 ಪುಟ 20 ರೂ. 15/-

ಬಸವಣ್ಣನ ಆರ್ಥಿಕ ಪ್ರಜ್ಞೆ





ಕಾಲದ ಅಗತ್ಯ

ಆಟ ಅಂತ್ಯ




ಬೆಂಗಳೂರು ಮುಳುಗುತ್ತಿರುವ ಮಲ್ಲೇಶ್ವರಂ ಬ್ಯಾಂಕ್

ಮಂಡ್ಯ ಅಂಬಿಯ ದರ್ಪ v/s ಸ್ವಾಭಿಮಾನಿ ಬಡವರು

ಹುಬ್ಬಳ್ಳಿ ಅಬ್ಬೇಪಾರಿ ಶಾಸಕ ಅಬ್ಬಯ್ಯ

ಉತ್ತರಕನ್ನಡ ಮೂಢ ಶಾಸಕ ಸತೀಶ್ ಸೈಲ್!

ಆಪ್ ದೆಹಲಿಯಲ್ಲಿ ಮಾಡಿದ್ದನ್ನು ಕರ್ನಾಟಕದಲ್ಲಿ ಮಾಡಬಹು




ಇನ್ನೂ ದೆಹಲಿ ವಿಧಾನಸಭಾ ಫಲಿತಾಂಶ ಸಂಪೂರ್ಣ ಘೋಷಣೆಯಾಗಿರಲಿಲ್ಲ, ಆಮ್ ಆದ್ಮಿ ಪಕ್ಷಕ್ಕೆ ಹೆಚ್ಚಿನ ಮುನ್ನಡೆ ಸಿಕ್ಕಿದೆ ಎಂಬುದು ಮಾತ್ರ ಸ್ಪಷ್ಟವಾಗಿತ್ತು, ಆಗಲೇ ಈ ಚುನಾವಣಾ ಫಲಿತಾಂಶದ ಕುರಿತ ವಿಶ್ಲೇಷಣಾ ಲೇಖನಗಳು ಪ್ರಕಟವಾಗತೊಡಗಿದವು. ಆಮ್ ಆದ್ಮಿ ಪಕ್ಷದ ಮುಖಂಡ, ಮಾಜಿ ಪತ್ರಕರ್ತ ಅಷುತೋಷ್‌ರೇ ಅಂತಹದೊಂದು ಲೇಖನವನ್ನು ಬರೆದರು. ಟಿವಿ ಪ್ಯಾನೆಲ್ ಚರ್ಚೆಗಳೂ ಆ ಕಡೆ ಹೊರಳಿದ್ದವಾದರೂ, ಅವಕ್ಕೆ ಆ ಕ್ಷಣದ ಸೆನ್ಸೇಷನಲ್ ಸುದ್ದಿಗಳನ್ನು ಬಿತ್ತರಗೊಳಿಸುವುದೇ ಪ್ರಧಾನವಾಗಿದ್ದರಿಂದ, ವಿಶ್ಲೇಷಣೆಗಿಂತ ಆಹಾ... ಓಹೋ ಥರದ ಉದ್ಗಾರಗಳೇ ಹೆಚ್ಚಿದ್ದವು.

ಕಳೆದ ವರ್ಷ ಕಾಂಗ್ರೆಸ್ ಬೆಂಬಲದೊಂದಿಗೆ ಸರ್ಕಾರ ರಚಿಸುವಷ್ಟು ಸೀಟುಗಳನ್ನು ಪಡೆದುಕೊಂಡಾಗಲೂ ಆಪ್ ಬಗ್ಗೆ ಒಂದು ಬಗೆಯ ಕುತೂಹಲ, ಭರವಸೆ ಮತ್ತು ಬಯಕೆಯ ಕಣ್ಣುಗಳಿಂದ ಈ ದೇಶದಲ್ಲಿ ಬಹಳಷ್ಟು ಜನರು ನೋಡಿದ್ದರು. ಒಂದಲ್ಲ ಒಂದು ರೀತಿಯ ಪರ್ಯಾಯದ ಹುಡುಕಾಟದಲ್ಲಿದ್ದವರಲ್ಲೆಲ್ಲಾ ಈ ಬಯಕೆ ತಾಂಡವವಾಡಿತ್ತು, ಅಷ್ಟು ಕಡಿಮೆ ಅವಧಿಯಲ್ಲಿ ಆಪ್ ಹೇಗೆ ಚುನಾವಣೆಗಳಲ್ಲಿ ಗೆಲ್ಲಲು ಸಾಧ್ಯವಾಯಿತು ಎಂಬ ಬಗ್ಗೆ ಸಾಕಷ್ಟು ವಿಶ್ಲೇಷಣೆಗಳು ನಡೆದವು. ವಿಶೇಷವಾಗಿ ಪ್ರಗತಿಪರ ಆಲೋಚನೆಯುಳ್ಳವರ ಮಧ್ಯೆಯೂ ಚರ್ಚೆ, ವಿಶ್ಲೇಷಣೆಗಳು ಸಾಕಷ್ಟು ನಡೆದವು. ದೇಶದ ಎಲ್ಲಾ ಚಳವಳಿಗಾರರೂ, ಸುತ್ತಲಿನ ಬಳಗದಿಂದ, ನೀವ್ಯಾಕೆ ಆಮ್‌ಆದ್ಮಿ ಸೇರಬಾರದು ಎಂದೋ ಅಥವಾ ನೀವೇ ಆಮ್ ಆದ್ಮಿ ಥರದ ಚಳವಳಿ ಮಾಡಿ ಎಂದೋ ಸಲಹೆ ಕೇಳಿಕೊಂಡರು. ಆದರೆ ಅದಾದ ನಂತರದ ಕೆಲವೇ ತಿಂಗಳುಗಳಲ್ಲಿ ದೇಶದ 'ಮಹಾಜನತೆ' ಮೋದಿಯಲ್ಲಿ ಪರ್ಯಾಯ ಕಂಡುಕೊಂಡರು. ಲೋಕಸಭಾ ಚುನಾವಣೆಯಲ್ಲಿ ಆಪ್ ನಿರೀಕ್ಷಿತ ಯಶಸ್ಸು ಸಾಧಿಸಲಿಲ್ಲ, ಆಗ ಇಂತಹ ವಿಭಾಗದಲ್ಲಿ ಹಲವರು ಮೂಗು ಮುರಿದರು; ತಮ್ಮ ಹಿಂದಿನ ಆಲೋಚನೆ ಮತ್ತು ಬಯಕೆಗಳಿಗೆ ತಣ್ಣೀರು ಬಿತ್ತು ಎಂದು ಭಾವಿಸಿ, 'ಇವರೂ ಸರಿಯಿಲ್ಲ, ಆತುರಗಾರರು; ಸರ್ವಾಧಿಕಾರಿ' ಇತ್ಯಾದಿ ಬಯ್ದುಕೊಂಡರು. ಬಹಳ ನಿರೀಕ್ಷೆಯಿಟ್ಟುಕೊಂಡು ಆಪ್ ಸೇರಿದ್ದ ಕೆಲವು ಅವಕಾಶವಾದಿಗಳು ಪಕ್ಷ ಬಿಟ್ಟರು; ಇನ್ನು ಕೆಲವರು ಅವಕಾಶವಾದಿಗಳಲ್ಲ, ಆದರೆ ಆತುರಗಾರರು ನಿಷ್ಕ್ರಿಯರಾದರು.

ಈಗ ಮತ್ತೊಮ್ಮೆ ಆಪ್ ಗೆದ್ದಿದೆ; ಭಾರೀ ಬಹುಮತದಿಂದ ಗೆದ್ದಿದೆ. ಮತ್ತೆ ವಿಶ್ಲೇಷಣೆಗಳು ಶುರುವಾಗಿದೆ. ಆಶಾವಾದ ಹಿಗ್ಗಿದೆ. 'ಆಮ್‌ಆದ್ಮಿ ಪಕ್ಷ ಗೆಲುವು ಸಾಧಿಸುತ್ತಿದೆ; ನಾನು ನೆಗೆಯುತ್ತಿದ್ದೇನೆ' ಎಂದು ಸ್ನೇಹಿತರೊಬ್ಬರು ಸಂದೇಶ ಕಳಿಸಿದ್ದರು. ಇದಕ್ಕೆ ಆತುರ ಮಾತ್ರ ಕಾರಣವಲ್ಲ, 'ಪರ್ಯಾಯ ರಾಜಕಾರಣ ಯಶಸ್ವಿಯಾಗಲು ಸಾಧ್ಯ ಎಂಬುದನ್ನು ನಾವು ತೋರಿಸಿದ್ದೇವೆ; ಅದು ನಮ್ಮ ಹಿರಿಮೆಯೇ ಹೊರತು, ಚುನಾವಣಾ ತಂತ್ರಗಾರಿಕೆಯಲ್ಲ' ಎಂದು ಯೋಗೇಂದ್ರ ಯಾದವ್ ಮತ್ತು ಕೇಜ್ರೀವಾಲ್ ಒತ್ತಿ ಒತ್ತಿ ಹೇಳುತ್ತಿದ್ದಾರೆ. ಹೌದು ಹಲವರು ಒಪ್ಪುವ ಮಾದರಿ ಇದಾಗಿರದಿರಬಹುದು; ಆದರೂ ಆಪ್‌ನದ್ದು ಪರ್ಯಾಯ ರಾಜಕಾರಣವೇ. ಎಷ್ಟರಮಟ್ಟಿಗಿನ ಪರ್ಯಾಯ ಮತ್ತು ಯಾವ ರೀತಿಯ ಪರ್ಯಾಯ ಎಂಬುದರ ಕುರಿತು ಭಿನ್ನಾಭಿಪ್ರಾಯ ಇರಬಹುದು. ಮೋದಿಯ ನಾಗಾಲೋಟಕ್ಕೆ ಅಮಿತ್ ಷಾನ ಜೈತ್ರಯಾತ್ರೆಗೆ ಬ್ರೇಕ್ ಹಾಕಲು ಆಮ್‌ಆದ್ಮಿ ಪಕ್ಷ ಯಶಸ್ವಿಯಾಗಿದೆ. ಅದು ಈ ಹೊತ್ತಿನ ಅತ್ಯಂತ ಮಹತ್ವದ ಸಂಗತಿಯಾಗಿದೆ. ಅದು ಉಂಟು ಮಾಡಿರುವ ಸಮಾಧಾನ ಹಾಗೂ ಸಂತಸ ಭಾರೀ ದೊಡ್ಡದು. ಅದಕ್ಕಾಗಿ ಆಮ್‌ಆದ್ಮಿ ಪಕ್ಷದ ಇಡೀ ಗಣಕ್ಕೆ ನಮ್ಮೆಲ್ಲರ ಅಭಿನಂದನೆಗಳು ಸಲ್ಲಬೇಕು.

ಇನ್ನು ಉಳಿದಂತೆ, ಮುಂದಿನ ತಿಂಗಳುಗಳು ಹಾಗೂ ವರ್ಷಗಳು ಆಪ್‌ನ ಹಾಗೂ ಈ ಮಾದರಿಯ ಪರ್ಯಾಯ ರಾಜಕಾರಣದ ಭವಿಷ್ಯವನ್ನು ತೀರ್ಮಾನಿಸುತ್ತವೆ. ಅದರ ಬಗ್ಗೆ ಈಗಲೇ ಅನುಮಾನ ಇಟ್ಟುಕೊಳ್ಳುವುದು ಅಥವಾ ಷರಾ ಬರೆಯುವುದು ಅಥವಾ ಖಚಿತ ಭರವಸೆ ಹೊಂದುವುದು ಯಾವುದೂ ನಿಜವಾಗದೇ ಹೋಗಬಹುದು. ಇದು ಪರ್ಯಾಯ ರಾಜಕಾರಣದ ಅಲೆ(ಗಳನ್ನು) ಸೃಷ್ಟಿಸಲಿ ಎಂದು ಹಾರೈಸುವುದನ್ನು ಮಾತ್ರ ಮಾಡಬೇಕೆನ್ನಿಸುತ್ತದೆ.

ಅಂತಹುದನ್ನು ಕರ್ನಾಟಕದಲ್ಲಿ ಪುನರಾವರ್ತಿಸಬೇಕೆಂಬ ಚರ್ಚೆ ಈಗಾಗಲೇ ಶುರುವಾಗಿದೆ. ಪುಕ್ಕಟೆ ಸಲಹೆಗಳನ್ನು ನೀಡುವವರಿಂದ ಹಿಡಿದು, ಬನ್ನಿ ನಾವೂ ಮಾಡೋಣ ಎಂದು ಉತ್ಸಾಹ ತೋರುವವರತನಕ ವಿವಿಧ ಬಗೆಯ ಜನರು ಈ ಚರ್ಚೆಯಲ್ಲಿದ್ದಾರೆ.



ದೆಹಲಿಯ ಚುನಾವಣೆಯಲ್ಲಿ 54 ಕ್ಷೇತ್ರಗಳಲ್ಲಿ ಆಪ್‌ಗೆ ಬೆಂಬಲಿಸಿದ್ದ ಸಿಪಿಎಂ ಪಕ್ಷದ ನಾಯಕರು 'ತಾನು ನೀಡಿದ ಭರವಸೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಏನು ಮಾಡುತ್ತದೋ ನೋಡೋಣ' ಎಂದಿದ್ದಾರೆ. ಆಪ್ ಜನರಿಗೆ ಸಮಾಜವಾದದ ಭರವಸೆಯನ್ನೇನೂ ನೀಡಿಲ್ಲ, ಆದರೆ, ತಾನು ನೀಡಿರುವ ಭರವಸೆಗಳನ್ನಾದರೂ ಈಡೇರಿಸಲು ಸಾಧ್ಯವೇ? ಈ ಬಗ್ಗೆ ಮೋದಿ ಅಭಿಮಾನಿಗಳು ಈಗಾಗಲೇ ಕ್ಯಾಲ್ಕುಲೇಟರ್ ಇಟ್ಟುಕೊಂಡು ಲೆಕ್ಕಾಚಾರ ಆರಂಭಿಸಿದ್ದಾರೆ. ಅಂತಹದೊಂದು ಲೆಕ್ಕಾಚಾರ ಇಲ್ಲಿದೆ. 'ತಾನು ನೀಡಿದ ಭರವಸೆಗಳನ್ನು ಈಡೇರಿಸಲು ಆಪ್‌ಗೆ 1825 ದಿನಗಳಿವೆ. ಅಷ್ಟರಲ್ಲಿ ಅದು 500 ಹೊಸ ಶಾಲೆಗಳನ್ನು, 20 ಹೊಸ ಕಾಲೇಜುಗಳನ್ನು ತೆರೆಯಬೇಕು, 15 ಲಕ್ಷ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು, 2 ಲಕ್ಷ ಸಾರ್ವಜನಿಕ ಶೌಚಾಲಯಗಳನ್ನು ತೆರೆಯಬೇಕು. ಅದರರ್ಥ ಪ್ರತೀ 3.65 ದಿನಗಳಿಗೊಂದು ಶಾಲೆ, 91.25 ದಿನಗಳಿಗೊಂದು ಕಾಲೇಜು ತೆರೆಯಬೇಕು, ಪ್ರತೀ 2 ನಿಮಿಷಕ್ಕೊಂದು ಸಿಸಿಟಿವಿ ಅಳವಡಿಕೆ ಮಾಡಬೇಕು ಮತ್ತು ಪ್ರತೀ 13 ನಿಮಿಷಕ್ಕೊಂದು ಶೌಚಾಲಯ ತೆರೆಯಬೇಕು. ಇದನ್ನು ಮಾಡಲು ಬೇಕಾದ ಹಣ ಎಲ್ಲಿಂದ ದೊರೆಯುತ್ತದೆ: ಅದೂ ವಿದ್ಯುತ್ ದರವನ್ನು ಶೇ.50ರಷ್ಟು ಇಳಿಸಿ, ವ್ಯಾಟ್ ತೆರಿಗೆ ಇಳಿಸಿ, ಉಚಿತ ನೀರು ಮತ್ತು ವೈಫೈ ಕೊಟ್ಟು!?' ಎಂಬ ಪ್ರಶ್ನೆ ಅವರದ್ದು.

ಇಂತಹ ಪ್ರಶ್ನೆ ಹಾಕಿದ ನಾಲ್ಕೈದು ಗಂಟೆಗಳಲ್ಲಿ ಇನ್ನೊಂದು ಮಾತನ್ನೂ ಅವರೇ ಹೇಳುತ್ತಾರೆ. 'ಇದ್ಯಾವುದನ್ನೂ ಇವರು ಮಾಡುವುದಿಲ್ಲ, ಬದಲಿಗೆ ಶಾಲೆ ಯಾಕೆ ಆಗಿಲ್ಲ, ಕಾಲೇಜು ಯಾಕೆ ತೆರೆದಿಲ್ಲ, ವ್ಯಾಟ್ ತೆರಿಗೆ ಯಾಕೆ ಇಳಿದಿಲ್ಲ, ನೀರು ಮತ್ತು ವೈಫೈ ಯಾಕೆ ಸಿಕ್ಕಿಲ್ಲ ಎಂದು ಕೇಳಿದರೆ ಇವರು ಎಲ್ಲಕ್ಕೂ ಬಿಜೆಪಿ ಸರ್ಕಾರದತ್ತ ಬೆರಳು ಮಾಡಿ ತೋರಿಸುತ್ತಾರೆ ಅಷ್ಟೇ.' ಅಂದರೆ, ಈಗಾಗಲೇ ಕೇಂದ್ರ ಸರ್ಕಾರದ ಪರಿವಾರ ಕೇವಿಯಟ್ಟುಗಳನ್ನು ಹಾಕಿ ಕೂತಿದೆ. ಇದನ್ನು ಎದುರಿಸುವುದು ಆಮ್‌ಆದ್ಮಿ ಪಕ್ಷಕ್ಕೆ ಕಷ್ಟವೇನಲ್ಲ, ಅದಕ್ಕೆ ಪ್ರತ್ಯುತ್ತರವನ್ನು ಅವರು ಹೇಗೂ ನೀಡುತ್ತಾರೆ. ಪ್ರಶ್ನೆಯಿರುವುದು ಎಲ್ಲಿಂದ ಹಣ ತರಬೇಕೆಂಬ ಕುರಿತು ಆಮ್‌ಆದ್ಮಿ ಪಕ್ಷ ಮುಂದಿಡುವ 'ಆರ್ಥಿಕ ನೀತಿ' ಹೇಗಿರುತ್ತದೆಂಬುದರಲ್ಲಿ, ತನ್ನ ಮಧ್ಯಮವರ್ಗದ ಕಾರ್ಯಕರ್ತ ಗಣ ಹಾಗೂ ಬಡ ಮತ್ತು ಕೆಳ ಮಧ್ಯಮವರ್ಗದ ಮತದಾರ ನೆಲೆಯನ್ನು ಹೊಂದಿರುವ ಪಕ್ಷವು ಈ ಸದ್ಯ ಪರಸ್ಪರ ವಿರುದ್ಧವಾಗಿರುವ ಹಿತಾಸಕ್ತಿಗಳನ್ನು ಯಾವ ರೀತಿ ಅನುಸಂಧಾನ ಮಾಡಿ ಬಗೆಹರಿಸುತ್ತದೆಂಬುದರಲ್ಲಿ.

'ಅವರು ಯಾವ ರೀತಿ ಜಾರಿ ಮಾಡುತ್ತಾರೆಂಬುದನ್ನು ಕಾದು ನೋಡೋಣ' ಎಂದು ಭಿನ್ನ ಸೈದ್ಧಾಂತಿಕ ಧಾರೆಗಳ ವ್ಯಕ್ತಿಗಳು ಹೇಳುತ್ತಿರುವುದು ಇದೇ ಕಾರಣಕ್ಕೆ. ಇಂತಹ ಇನ್ನೂ ಹತ್ತು ಹಲವಾರು ವಿಧದ ಸೈದ್ಧಾಂತಿಕ ಪ್ರಶ್ನೆಗಳನ್ನು ಎಸೆಯುವುದು ಕಷ್ಟವೇನಲ್ಲ. ಅಂತಹ ವಿಶ್ಲೇಷಣೆಗಳನ್ನೂ (ಆಂತರಿಕ ಮತ್ತು ಬಹಿರಂಗ) ಸಾಕಷ್ಟು ಮಾಡಬಹುದು. ಅಂತಿಮವಾಗಿ ಆಪ್ ಪಕ್ಷವು ತನ್ನ ಸಮೂಹ ನೆಲೆಯ ಜೊತೆಗೆ ತನ್ನ ಸೈದ್ಧಾಂತಿಕ ನೆಲೆ ಯಾವುದೆಂಬುದನ್ನು ಯಾವ ರೀತಿ ಬಗೆಹರಿಸಿಕೊಳ್ಳುತ್ತದೆ ಎಂಬುದರ ಆಧಾರದ ಮೇಲೆ ಅದು ತೀರ್ಮಾನವಾಗುತ್ತದೆ. ನಿಜವಾದ ಅರ್ಥದಲ್ಲಿ ಬಡವರ ಪರ ನಿಲ್ಲುತ್ತಾ ಹೋದರೆ, ಸಮಾಜವಾದವನ್ನಲ್ಲದೇ ಬೇರೆ ಇನ್ಯಾವ ಸಿದ್ಧಾಂತವೂ ಅದರದ್ದಾಗುವುದು ಸಾಧ್ಯವಿಲ್ಲ. ಕಾಂಗ್ರೆಸ್ ಸಹ ಅರೆ ಬಲಪಂಥೀಯ ಪಕ್ಷ ಎಂದು ನಾವು ಕರೆಯುವುದಾದರೆ, ಈ ಹಿಂದೆ ಆಪ್ ಮಧ್ಯದಲ್ಲಿದ್ದ ಪಕ್ಷವಾಗಿತ್ತು (ಸೆಂಟ್ರಿಸ್ಟ್). ಸಂಸದೀಯ ರಾಜಕಾರಣದ ಅನಿವಾರ್ಯತೆಯ ಕಾರಣಕ್ಕೆ ಅದೀಗ ಅರೆ ಎಡಪಂಥೀಯ ಪಕ್ಷವಾಗಿದೆ.

ಕಾಂಗ್ರೆಸ್ಸನ್ನೇ ಅರೆ ಎಡಪಂಥೀಯ ಪಕ್ಷವೆಂದು ಕರೆಯುವ ಮಾಧ್ಯಮಗಳು, ಚುನಾವಣಾ ಕಾಲದಲ್ಲಿ ಆಪ್‌ಅನ್ನು ತೀವ್ರ ಎಡಪಂಥೀಯ ಪಕ್ಷವೆಂದು ಕರೆದವು. ಗೆಲುವಿಗೆ ಹತ್ತಿರ ಬರುತ್ತಿದ್ದಂತೆ, ಆಪ್‌ನ ಪ್ರಮುಖ ಕಾರ್ಯಕರ್ತೆ, ಸಿನಿತಾರೆ ಗುಲ್ ಪನಾಗ್ ಒಂದು ಮಾತು ಹೇಳಿದ್ದರು 'ನಾವು ಅಧಿಕಾರಕ್ಕೆ ಬಂದ ಮೇಲೆ ನಮ್ಮನ್ನು ತೀವ್ರ ಎಡಪಂಥೀಯ ಪಕ್ಷವೆಂದು ಕರೆದವರಿಗೆ, ನಮ್ಮ ನೀತಿಗಳನ್ನು ನೋಡಿ ನಾವು ಹಾಗಲ್ಲ ಎಂದು ಅರ್ಥವಾಗುತ್ತದೆ'. ಇದರರ್ಥವೇನು ಎಂಬ ಪ್ರಶ್ನೆಯನ್ನೂ, ಆಪ್‌ಗೆ ಈ ರೀತಿಯ ಸಿದ್ಧಾಂತವಿಲ್ಲ ಎಂಬ ಕುರಿತ ಪ್ರಶ್ನೆಯನ್ನೂ ಯೋಗೇಂದ್ರ ಯಾದವ್‌ರಿಗೆ ಟಿವಿ ನಿರೂಪಕರೊಬ್ಬರು ಕೇಳಿದರು. '20ನೇ ಶತಮಾನದಲ್ಲಿ ವಿವಿಧ ಸೈದ್ಧಾಂತಿಕ ವಿಭಾಗಗಳನ್ನು ಯಾವ ಪರಿಭಾಷೆಯಲ್ಲಿ ಕರೆಯಲಾಗುತ್ತಿತ್ತೋ, ಅಂತಹ ಯಾವುದೇ ಸೈದ್ಧಾಂತಿಕ ವಿಭಾಗಕ್ಕೂ ನಾವು ಸೇರಿದವರಲ್ಲ, ನಮ್ಮದು 21 ಶತಮಾನದ ಜನಪರ ತಾತ್ವಿಕತೆ' ಎಂದು ಅವರು ಉತ್ತರಿಸಿದರು. ಹಾಗೆಂದರೇನು ಎಂಬ ಚರ್ಚೆ ಮುಂದುವರೆಯಲಿಲ್ಲ; ಮುಂದುವರೆಯುವುದು ಯಾದವ್‌ರಿಗೂ ಬೇಕಿರಲಿಲ್ಲ.



ಇಂದು ಆಪ್ ಪಕ್ಷದಲ್ಲಿರುವ ವಿ
ಒಂದೇ ನಿರ್ದಿಷ್ಟ ಬಗೆಯ ತ
ತೋರುವುದಿಲ್ಲ.

ಕರ್ನಾಟಕದಲ್ಲಾಗಲೀ, ದೇಶದ
ಇಂದು ಆಪ್‌ನ ಜೊತೆ ಸೇರಿ
ಕೆಲಸ ಮಾಡದಿರಲು ಹಲವರಿ
ಇಲ್ಲೇ. ದೆಹಲಿಯಂತಹ ಒಂದು
state)ದಲ್ಲಿ ಸಾಧ್ಯವಾಗುವುದು,
ರಾಜ್ಯಗಳಲ್ಲಿ ಸಾಧ್ಯವಾಗುತ್ತದೆ ಎ
'ಸಾಧ್ಯವಾಗುತ್ತದೆ, ಅದು ಭಿನ್ನ ರೀ
ಕಾರ್ಯತಂತ್ರದಿಂದ' ಎಂಬ ಸಿದ್ಧ
ಅಲ್ಪಕಾಲದಲ್ಲೇ ದೊಡ್ಡ ಚುನಾವಣಾ
ಅಸ್ಸಾಂ ಗಣ ಪರಿಷತ್ ಮತ್ತು
ಪಕ್ಷಗಳು ಅಧಿಕಾರ ಹಿಡಿದಾಗ ಜನ
ನಂತರ ಅವೂ ಇತರ ಪಕ್ಷಗಳ ದಾರಿ
ಆಯಾ ರಾಜ್ಯಗಳ ಆಚೆ ಬೇರು ಬ
ಅಂತಹ ಸ್ಪಷ್ಟ ಅಜೆಂಡಾ ಹೊಂದಿ
ಪಕ್ಷ ನಿಧಾನಕ್ಕೆ ತನ್ನ ಭದ್ರನೆಲೆಯಲ್ಲೂ

ಮೋದಿಯ ಕೆಟ್ಟ ಕಾಲದಲ್ಲಿ
ಸಾಧಿಸಿರುವ ಆಮ್‌ಆದ್ಮಿಯ ಈ
ಘಳಿಗೆಯಲ್ಲಿ 'ದೆಹಲಿಗಿಂತ ಹೊರ
ಎಂದೋ ಅಥವಾ 'ಸಮಾಜವಾ
ರಾಜಕೀಯ ಗುಂಪನ್ನೂ ನಾವು ಒ
ಷರಾ ಬರೆಯುವುದು ಇದರ
ಸಾಧಿಸಿರುವುದು ಚುನಾವಣಾ ಗ
ಅದು ಪ್ರಜಾತಂತ್ರದ ಪ್ರಕ್ರಿಯೆಯ
ಪ್ರಯೋಗಗಳನ್ನೂ ಮಾಡುತ್ತಿದೆ.
ದೇಶದಲ್ಲಿ (ಸಂವಿಧಾನದ ಮುನ್ನುಡಿ
ಕಿತ್ತು ಹಾಕಲು ಬಯಸಿರುವ)
ಜಾತ್ಯತೀತತೆಯನ್ನು ನೆಲೆಗೊಳಿಸು
ಬ್ರಾಂಡ್‌ನ ಪ್ರಗತಿಪರರೂ ಸೇರಿ ವ
ಸಾಧ್ಯವಿದೆ. ಇದು ಆಪ್‌ಅನ್ನು ಹೊ
ಕೆಲಸವಲ್ಲ.

ಏಕೆಂದರೆ, ಆ ರೀತಿ ಮ
ಶತಮಾನದ ಚಳವಳಿಗಳು ಆಪ್‌ನ
ಕಲಿಯುವುದು ಸಾಕಷ್ಟಿದೆ. ಜನರ
ಜನರಿಂದ ಕಲಿಯುವುದು, ಜ
ಪ್ರಣಾಳಿಕೆಯನ್ನು ತಯಾರಿಸು
ಮುಟ್ಟುವ-ತಟ್ಟುವ ಭಾಷೆಗಳಲ್ಲಿ
ಇವು ಎಡಪಂಥೀಯರು ಸ
ಮಾತನಾಡಿಕೊಂಡು ಬಂದ ವಿಷ
ಆ ವಿಚಾರದಲ್ಲಿ ಎಡಪಂಥೀಯ
ಯಶಸ್ವಿಯಾಗಿದ್ದಾರೆ. 21ನೇ ಶತಮ
ಕೊನೆ ಬರುವಷ್ಟರಲ್ಲಿ ಹೊಸ ತಲೆ
ಬಹುಭಾಗವಿರುವ ಹೊಸ ತಲೆವ
ಅತ್ಯಂತ ಕಡಿಮೆ ಯಶಸ್ವಿಯಾಗಿ
ಯಶಸ್ವಿಯಾಗಿದೆ ಎನ್ನುವ ಕಾರಣ
ಹೆಚ್ಚು ಕಲಿಯುವುದಿದೆ ಎಂದು

ಬದಲಿಗೆ, ಹೊಸ ಕಾಲದಲ್ಲಿ
ಒಂದು ಪ್ರಯೋಗವನ್ನು ನಡೆಸಿದೆ.
ಯಶಸ್ವಿಯಾಗುವ ಯಾವುದೇ
ಅದರಿಂದ ಕಲಿಯಲು ಸಾಕಷ್ಟಿ
ವಿನಮ್ರತೆಯನ್ನೂ, ಉತ್ಸಾಹವನ
ಜೋಶ್‌ಅನ್ನೂ ನಾವೆಲ್ಲರೂ ತೋ
ಕುರ್ಚಿಯಲ್ಲಿ ಆಪ್‌ನ ಪ್ರಯೋಗವು
ಆದರೆ, ಈ ಪ್ರಯೋಗವು ಎಲ್ಲರ
21ನೇ ಶತಮಾನದ ಚಳವಳಿಗೆ ಬೇ
ಅದರಲ್ಲಿ ಇರುತ್ತವೆ.

ಹೊಸ ಸಾಧ್ಯತೆಯ ಕನಸನ್ನು ಬಿತ್ತಿದವರಿಗೆ ಸಲಾಂ!

ಹಲಿ ವಿಧಾನಸಭಾ ಚುನಾವಣೆಯ ಫಲಿತಾಂಶ ಳ್ಳುವ ಮುನ್ನ ದಿನ ಹುಬ್ಬಳ್ಳಿಗೆ ಹೊರಟಿದ್ದೆ. ಪುಟ್ಟ ರಾಜ್ಯವಾಗಿದ್ದರೂ ಎಲ್ಲೆಡೆ ಅಲ್ಲಿನ ಣೆಯ ಬಗ್ಗೆ ಅಪಾರ ಕುತೂಹಲವಿತ್ತು. ದಿನ ನಾನು ಕೋರ್ಟಿನಲ್ಲಿ ಗಿತ್ತಾದ್ದರಿಂದ ಮಿತ್ರರೊಬ್ಬರಿಗೆ ಎಸ್‌ಎಂಎಸ್ ನನ್ನನ್ನು ಅಪ್‌ಡೇಟ್ ಮಾಡುತ್ತಿರುವಂತೆ ಕೊಂಡಿದ್ದೆ.

ನಿದ್ದ ರೈಲು ಇನ್ನೇನು ಹೊರಡಬೇಕು, ಡೆ ಜನ ಘೋಷಣೆಗಳನ್ನು ಕೂಗುತ್ತಿದ್ದದ್ದು). ಆದರ ಹಿಂದಿನ ದಿನವೇ ೂರಿನಲ್ಲಿ ನಡೆದಿದ್ದ 'ವಿರಾಟ ಹಿಂದೂ ೇಶ'ದಲ್ಲಿ ಭಾಗವಹಿಸಲು ಬಂದಿದ್ದ ಚೆಡ್ಡಿ ಕರ್ತರು ಘೋಷಣೆಗಳನ್ನು ತ್ತಿರಬೇಕೆಂದು ಭಾವಿಸಿದ ನಾನು ಿಯ ಬಾಗಿಲಿಗೆ ಬಂದು ನೋಡಿದೆ. ಅಲ್ಲಿದ್ದದ್ದು ಕೇಸರಿ ತೊಟ್ಟಿದ್ದ ಹಿಂದೂ ುವಾದಿಗಳಲ್ಲ, ಬದಲಾಗಿ ಗಾಂಧಿ ಟೋಪಿ ರ್ದ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು. ುಮಾರು ಇಪ್ಪತ್ತು ಜನರಿದ್ದ ಆ ಕಯುವತಿಯರೆಲ್ಲ ಆಗತಾನೇ ಯಿಂದ ಹಿಂದಿರುಗಿದ್ದರು. ಎಲ್ಲರೂ ವಕರು, ವಿವಿಧ ಆಫೀಸುಗಳಲ್ಲಿ ಕೆಲಸ ಸುತ್ತಿರುವ ಸುಶಿಕ್ಷಿತ ಮಧ್ಯಮ ದವರು. ಅವರೆಲ್ಲರೂ ಸ್ವಯಂ ಇಚ್ಛೆಯಿಂದ ಗೆ ಹೋಗಿ ಅಲ್ಲಿ ಆಪ್ ಪರವಾಗಿ ರದಲ್ಲಿ ತೊಡಗಿದ್ದು ವಾಪಸ್ ಬೆಂಗಳೂರಿಗೆ ುದ್ದರು. ಅವರೆಲ್ಲ ಉತ್ಸಾಹದಿಂದ ರೈಲ್ವೆ ್‌ಫಾರ್ಮ್ ಮೇಲೆ 'ಪಾಂಚ್ ಸಾಲ್ ವಾಲ್' ಎಂಬ ಹಾಡನ್ನು ಹಾಡುತ್ತಾ ್ಸಿ ಮಾಡುತ್ತಿದ್ದರು.

ಆ ಯುವಕಯುವತಿಯರನ್ನು ಕಂಡು ನನ್ನಲ್ಲಿ ು ರೀತಿಯ ಆಶಾಭಾವನೆ ಮೂಡಿತು. ರೆಲ್ಲರೂ ಒಂದು ರೀತಿಯ ನೆಮ್ಮದಿಯ ವನಶೈಲಿಗೆ ಒಗ್ಗಿಕೊಂಡಿರುವವರು. ಆದರೂ ಹ ಯುವಕರು ಯಾವ ಸ್ವಾರ್ಥವೂ ದೆ, ತಮ್ಮ ಕೈಯಿಂದ ಹಣ ಹಾಕಿ, ಲಿಯಲ್ಲಿ ಕಂಡರಿಯದವರ ಮನೆಯಲ್ಲಿ ದ್ದು, ಹಗಲೂ-ರಾತ್ರಿ ಒಂದು ಪಕ್ಷದ ವಾಗಿ ದುಡಿದು ಬಂದದ್ದು ಒಂದು ಪರ್ಯಾಯ ಕೀಯ ವ್ಯವಸ್ಥೆಗೆ ನಮ್ಮ ದೇಶದ ಜನ ಬಲಿಸುತ್ತಿರುವುದಕ್ಕೆ ಸಾಕ್ಷಿಯಾಗಿತ್ತು.

ದೇಶದ ವಿವಿಧ ಕಡೆಗಳಿಂದ ಇಂತಹ ದಿರಾರು ಜನರ ಶ್ರಮದ ನೆರವಿನಿಂದಾಗಿ ಹಲಿಯಲ್ಲಿ ಆಪ್ ಗೆದ್ದರೂ ಇವರಿಗೆ ಅದರಿಂದ ೂ ಆಗುವುದಿಲ್ಲ, ಯಾಕೆಂದರೆ ಅಲ್ಲಿ ರವಿಂದ್ ಕೇಜ್ರಿವಾಲ್ ಅವರ ಸರ್ಕಾರ ೇನೇ ಮಾಡಿದರೂ ಇಲ್ಲಿಯವರಿಗೆ ೂಪೈಸೆಯ ಉಪಯೋಗವಿಲ್ಲ, ಆದ್ದರಿಂದಲೇ ಂತಹ ಅದೆಷ್ಟೋ ಜನ ಸ್ವಯಂಪ್ರೇರಣೆಯಿಂದ ಆಪ್ ರ ಕೆಲಸ ಮಾಡಿದ್ದು ಸಾಮಾನ್ಯ ಸಂಗತಿಯಲ್ಲ. ಗೆಯೇ ದೆಹಲಿಯಲ್ಲಿ ಆಪ್ ಗೆದ್ದದ್ದೂ ಬರೀ ಆ ಟ್ಟ ರಾಜ್ಯಕ್ಕೆ ಸೀಮಿತವಾಗಿರುವ ಫಲಿತಾಂಶವಲ್ಲ.

ಆ ಯುವಕರನ್ನು ಕಂಡು ಸಂತೋಷಗೊಂಡ ಸು ಸನ್ನ ಕೈಬೀಸಿ ಒಬ್ಬನನ್ನು ಕರೆದೆ. ಆತ ನಿದ್ದಲ್ಲಿಗೆ ಬಂದಾಗ "ನಾಳೆ ದೆಹಲಿಯಿಂದ ಂತೋಷ ನೀಡುವ ಸುದ್ದಿ ಬರಲೆಂದು ಆಶಿಸುತ್ತೇನೆ" ಂದೆ. ಆ ಹುಡುಗ ನನ್ನ ಕೈ ಕುಲುಕಿ "ಥ್ಯಾಂಕ್ಸ್ ೇಡಂ" ಅಂದ.

ಮಾರನೆ ದಿನ ಎದ್ದ ಕೂಡಲೇ ಟಿವಿ ಆನ್ ಾಡಿದೆ. ಸ್ವಲ್ಪ ಹೊತ್ತಿನಲ್ಲೇ ಇತರೆ ಪಕ್ಷಗಳನ್ನು ಆಪ್ ಂದಿಕ್ಕಿ ವೇಗವಾಗಿ ಮುಂದೆ ಸಾಗುತ್ತಿದ್ದದ್ದು ಷ್ಟವಾಯಿತು. ಕೋರ್ಟಿಗೆ ಹೋಗಿ ನನ್ನ ವಕೀಲರಾದ ಾವೇದ್ ಅವರಿಗೆ ಕಾದು ಕೂತೆ. ಆದರೆ ಕೋರ್ಟ್ ಲಾಪಗಳು ಶುರುವಾಗಿ ಅದೆಷ್ಟೋ ಹೊತ್ತಾದರೂ ಾವೇದ್ ಸುಳಿವೇ ಇಲ್ಲ, 'ಹತ್ತು ನಿಮಿಷಗಳಲ್ಲಿ ಂದೆ', 'ಐದು ನಿಮಿಷಗಳಲ್ಲಿ ಅಲ್ಲಿರುತ್ತೇನೆ' ಎಂದೆಲ್ಲ ಾವೇದ್ ಎಸ್‌ಎಂಎಸ್‌ಗಳನ್ನು ಕಳುಹಿಸುತ್ತಿದ್ದರೆ ಹೊರತು ಪ್ರತ್ಯಕ್ಷವಾಗಲೇ ಇಲ್ಲ, ಆಗ ಈ ಜಾವೇದ್ ಪ್ ಸದಸ್ಯ ಎಂದು ಗೊತ್ತಾಯಿತು. ಅವರ ಪಕ್ಷ ದೂರದ ದೆಹಲಿಯಲ್ಲಿ ದೇಶವೇ ಅಚ್ಚರಿ ಪಡುವಂತಹ ಜಯಭೇರಿಯನ್ನು ಬಾರಿಸುತ್ತಿರುವಾಗ ಅವರೆಲ್ಲಿ ಕೋರ್ಟಿಗೆ ಬರುತ್ತಾರೆ ಅನ್ನಿಸಿ ನಾನು ತಂಗಿದ್ದ ಹೋಟೆಲ್‌ಗೆ ಹೊರಟೆ. ಅಲ್ಲಿ ನನಗೊಂದು ಅಚ್ಚರಿ ಕಾದಿತ್ತು, ಆ ಹೋಟೆಲ್ ಎದುರಿಗೇ ಹಲವಾರು ಆಪ್ ಸದಸ್ಯರು (ಜಾವೇದ್ ಸೇರಿದಂತೆ!) ರಸ್ತೆ ಪಕ್ಕದಲ್ಲಿ ಪತ್ರಿಕಾಗೋಷ್ಠಿ ನಡೆಸುತ್ತಿದ್ದರಲ್ಲದೆ, ಜನಸಾಮಾನ್ಯರಿಗೆ ಲಡ್ಡುಗಳನ್ನು ಹಂಚುವ ಮೂಲಕ ಸಂಭ್ರಮವನ್ನು ಆಚರಿಸುತ್ತಿದ್ದರು. ನಾನು ಅವರೆಲ್ಲರಿಗೂ



'ಕಂಗ್ರಾಟ್ಸ್' ಹೇಳಿ ಸಿಹಿ ಹಂಚಿಕೊಳ್ಳುವ ಮೂಲಕ ಅವರ ಸಂಭ್ರಮದಲ್ಲಿ ಪಾಲುಗೊಂಡೆ. ಆಮೇಲೆ, ಕೊನೆಗೂ ನನ್ನ ಕೈಗಳಿಗೆ ಸಿಕ್ಕಿಬಿದ್ದಿದ್ದ ಜಾವೇದ್ ಅವರನ್ನು ಕರೆದುಕೊಂಡು ಹೋಗಿ ಕೋರ್ಟ್ ಕೆಲಸ ಮುಗಿಸಿಕೊಂಡು ಬಂದೆ ಅನ್ನಿ.

ಅಧಿಕಾರಕ್ಕೆ ಏರಿದ ನಂತರ ಆಪ್ ತಾನು ಜನರಿಗೆ ಕೊಟ್ಟಿರುವ ಆಶ್ವಾಸನೆಗಳಲ್ಲಿ ಎಷ್ಟನ್ನು ಈಡೇರಿಸುವಲ್ಲಿ ಯಶಸ್ವಿ ಆಗುತ್ತದೆ ಎಂದು ಕಾಲವೇ ತೋರಿಸುತ್ತಿದೆ. ಆದರೆ ಸದ್ಯಕ್ಕೆ ನನ್ನ ಪ್ರಕಾರ ಆಪ್ ಗೆಲುವು ಹಲವು ಕಾರಣಗಳಿಗೆ ಮುಖ್ಯವಾಗುತ್ತದೆ. ಒಂದೆಡೆ ಭ್ರಷ್ಟಾಚಾರದ ಗಂಗೋತ್ರಿಯಂತಾಗಿರುವ ಕಾಂಗ್ರೆಸ್‌ನ ಸಂಪೂರ್ಣ ತಿರಸ್ಕಾರ, ಇನ್ನೊಂದೆಡೆ ಆರೆಸ್ಸೆಸ್ ಎಂಬ ದುಷ್ಟಕೂಟದ ಕೋಮುವಾದಿ ಅಜೆಂಡಾಗೂ ತಡೆ, ಮತ್ತೊಂದೆಡೆ ಹಣವನ್ನೇ ಅವಲಂಬಿಸದೇ ಸಾಮಾನ್ಯ ಜನರನ್ನು ಸಂಘಟಿಸಿ ಅವರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಚುನಾವಣೆಗಳನ್ನು ಗೆಲ್ಲಬಹುದು ಎಂಬ ಆಶಾಭಾವ-ಈ ಎಲ್ಲ ಅಂಶಗಳನ್ನು ಆಪ್ ಗೆಲುವು ಸೂಚಿಸುತ್ತದೆ. ಅದರಲ್ಲೂ ನಮ್ಮ ದೇಶದಲ್ಲಿ 2013ರಿಂದ ಬೀಸುತ್ತಿದ್ದ 'ಮೋದಿ ಅಲೆ'ಗೆ ಕೊನೆಗೂ ಲಗಾಮು ಬಿದ್ದಿರುವುದಂತೂ ಜಾತ್ಯತೀತರಿಗೆ ಮತ್ತು ಪ್ರಜ್ಞಾವಂತರಿಗೆ ನೆಮ್ಮದಿ ನೀಡಿದೆ.

ಹೌದು, ನಮ್ಮ 'ಫಸ್ಟ್ ಪಾಸ್ಟ್ ದಿ ಪೋಸ್ಟ್' ವ್ಯವಸ್ಥೆಯಲ್ಲಿ ಯಾವ ಪಕ್ಷ ಎಷ್ಟು ಸೀಟುಗಳನ್ನು ಗೆದ್ದಿತು ಎಂಬುದು ಮುಖ್ಯವಾಗುತ್ತದೆಯೇ ಹೊರತು ಅವು ಪಡೆದ ಶೇಕಡಾವಾರು ಮತಗಳ ಎಣಿಕೆ ಅಲ್ಲ. ಇಲ್ಲೊಂದು ವಿಪರ್ಯಾಸವನ್ನು ಗಮನಿಸಿ. 2014ರ ಲೋಕಸಭೆ ಚುನಾವಣೆಯಲ್ಲಿ ಮೋದಿ ನೇತೃತ್ವದ ಬಿಜೆಪಿ ದೇಶಾದ್ಯಂತ ಕೇವಲ 31% ಮತಗಳನ್ನು ಪಡೆದಿದ್ದರೂ 282 ಸೀಟುಗಳನ್ನು ಗೆದ್ದಿತು. ಅಷ್ಟೇ ಅಲ್ಲ, ಇದೇ ಬಿಜೆಪಿ 2013ರ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಶೇ 33.07 ಮತಗಳನ್ನು ಪಡೆದಿದ್ದರಿಂದ 31 ಸೀಟುಗಳನ್ನು ಗೆದ್ದಿತ್ತು. ಈಗಿನ ಚುನಾವಣೆಯಲ್ಲಿ ಬಿಜೆಪಿ ಗಳಿಸಿದ ಮತಗಳಲ್ಲಿ ಶೇ .97 ಕಡಿಮೆ ಆಗಿದೆ ಅಷ್ಟೆ. ಆದರೆ ಅದರ ಪರಿಣಾಮ? ಕೇವಲ ಮೂರು ಸೀಟುಗಳು.

ಇಲ್ಲಿ ಮೋದಿ ಭಕ್ತರ ಗಮನಕ್ಕೆ ಒಂದು ಅಂಶವನ್ನು ತರುವುದು ಅಗತ್ಯವಾಗಿದೆ. ಕೇವಲ 31% ಮತಗಳನ್ನು ಪಡೆದದ್ದು 'ಮೋದಿಯ ವಿಜಯ' ಎಂಬುದಾದರೆ ಅದಕ್ಕಿಂತಲೂ ಹೆಚ್ಚಿಗೆ (ಶೇ. 54.3) ಮತಗಳನ್ನು ಅರವಿಂದ್ ಕೇಜ್ರಿವಾಲ್ ಪಡೆದದ್ದು ದೊಡ್ಡ ಸಾಧನೆ ಮಾತ್ರವಲ್ಲ, ನಿಜವಾದ ಅರ್ಥದಲ್ಲಿ ಬಹುಸಂಖ್ಯಾತರ ಬೆಂಬಲ ಅಲ್ಲವೇ?!

ಅದೆಲ್ಲ ಬದಿಗಿರಲಿ, ದೆಹಲಿಯಲ್ಲಿ ಬಿಜೆಪಿ ಮಣ್ಣು ಮುಕ್ಕಿರುವುದಕ್ಕೆ ಕಾರಣ ಮೋದಿ ಮತ್ತು ಆತನ ಚೇಲಾ ಅಮಿತ್ ಶಾನ ಸರ್ವಾಧಿಕಾರಿ ಧೋರಣೆ ಎಂದು ಹೆಚ್ಚಿನ ಮಾಧ್ಯಮಗಳು ಅಭಿಪ್ರಾಯಪಟ್ಟಿವೆ. ಹಾಗಂತ ಬಿಜೆಪಿಯ ಹಿರಿಯ ನಾಯಕರೂ ಖಾಸಗಿಯಾಗಿ ಹಿಡಿಶಾಪ ಹಾಕುತ್ತಿದ್ದಾರೆ. ಸ್ವತಃ ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿಯಾಗಿದ್ದ ಕಿರಣ್ ಬೇಡಿ "ನಾನು ಸೋಲಲಿಲ್ಲ, ಬಿಜೆಪಿ ಸೋತಿತು" ಎಂದು ಸಾರಿದ್ದಾರೆ. ಆದರೆ ಮೋದಿ ಭಕ್ತರು ಮಾತ್ರ ತಮ್ಮ ಆರಾಧ್ಯ ದೈವ ಸೋತಿಲ್ಲ ಎಂದೇ ವಾದಿಸುತ್ತಿರುವುದು ಮಜವಾಗಿದೆ.

ಮೋದಿ ಭಕ್ತರೇ ನಡೆಸುವ 'ನಿಟಿ ಸೆಂಟ್ರಲ್' ಎಂಬ ವೆಬ್‌ಸೈಟ್‌ನಲ್ಲಿ ಬಿಜೆಪಿ ಸೋಲಿಗೆ ಮಾಧ್ಯಮಗಳೇ ಹೊಣೆ ಎಂದು ದೂರಲಾಗಿದೆ. "ಎಲ್ಲಕ್ಕೂ ಮೋದಿಯನ್ನೇ ಹೊಣೆ ಮಾಡುವುದು ಎಷ್ಟು ಸರಿ? ಅದ್ಯಾರೋ ಚರ್ಚ್‌ಗಳ ಮೇಲೆ ದಾಳಿ ಮಾಡಿದರೆ ಅದಕ್ಕೆ ಬಿಜೆಪಿ ಕಾರಣ ಎನ್ನುತ್ತವೆ ಮಾಧ್ಯಮಗಳು. ಯಾರೋ ತಲೆ ಕೆಟ್ಟವರು ಹಿಂದೂ ಮಹಿಳೆಯರು ಹತ್ತು ಮಕ್ಕಳನ್ನು ಹೆರಬೇಕು ಎಂದು ಹೇಳಿದ್ದಕ್ಕೂ ಬಿಜೆಪಿಯನ್ನೇ ಗುರಿಮಾಡಲಾಗುತ್ತದೆ. ಇನ್ನು ಯಾರೋ ಗೋಡ್ಸೆಯನ್ನು ಮೆಚ್ಚಿದ್ದರ ವಿರುದ್ಧ ಯಾಕೆ ಮೋದಿ ಚಕಾರವೆತ್ತುತ್ತಿಲ್ಲ ಎಂದು ಪ್ರಶ್ನಿಸುತ್ತಾರೆ. ಘರ್ ವಾಪಸಿ ಎಂದು ಮರು ಮತಾಂತರಕ್ಕೂ ಮೋದಿಗೂ ಸಂಬಂಧ ಕಲ್ಪಿಸಲಾಗುತ್ತದೆ. ಇಂತಹ ವಿದ್ಯಮಾನಗಳಿಗೆ ಮೋದಿ ಅಥವಾ ಬಿಜೆಪಿ ಹೇಗೆ ಕಾರಣವಾಗುತ್ತಾರೆ?" ಎಂದು ಒಬ್ಬ ನಿಟಿ ಸೆಂಟ್ರಲ್ 'ಪಂಡಿತ' ಪ್ರಶ್ನಿಸಿದ್ದಾನೆ. ಆ ಗಾಂಪನಿಗೆ ಈ ಎಲ್ಲದಕ್ಕೂ ಆರೆಸ್ಸೆಸ್ ಕೃಪಾಪೋಷಿತ ಕೋಮುವಾದಿ ಹಿಂದೂತ್ವವಾದಿಗಳು ಕಾರಣ ಎಂಬುದಾಗಲೀ, ಅವರೆಲ್ಲರ ಪ್ರತಿನಿಧಿ ಮೋದಿ ಎಂಬುದಾಗಲಿ ಕಾಣಿಸುವುದಿಲ್ಲ.


ಅದೇನೇ ಇರಲಿ, ದೆಹಲಿಯ ಆಮ್ ಆದ್ಮಿಗಳು ಜಾತಿ, ವರ್ಗ, ಧರ್ಮ, ಇತ್ಯಾದಿಗಳನ್ನೆಲ್ಲ ಮೂಲೆಗುಂಪು ಮಾಡಿ ಜನಸಾಮಾನ್ಯರ ಪರ ದನಿ ಎತ್ತಿದ ಆಪ್ ಪಕ್ಷವನ್ನು ಗೆಲ್ಲಿಸಿದ್ದಾರೆ. ಅಂತಹ ಪ್ರಕ್ರಿಯೆಯೊಂದು ನಮ್ಮ ದೇಶದಲ್ಲಿ ನಡೆಯುವ ಸಾಧ್ಯತೆಗಳು ಕಡಿಮೆ ಇದ್ದರೂ ಹೊಸ ಕನಸ್ಸುಗಳನ್ನು ದೆಹಲಿಯ ಮತದಾರರು ದೇಶಾದ್ಯಂತ ಬಿತ್ತಿದ್ದಾರೆ.

ದೆಹಲಿಯ ಜನರಿಗೂ, ಕೇಜ್ರಿವಾಲ್ ನೇತೃತ್ವದ ಆಪ್ ಪಕ್ಷಕ್ಕೂ, ನಿಸ್ವಾರ್ಥವಾಗಿ ಆ ಪಕ್ಷಕ್ಕಾಗಿ ದುಡಿದು ಇಂತಹ ವಿಜಯವನ್ನು ಸಾಧ್ಯವಾಗಿಸಿದ ಸಾವಿರಾರು ಕಾರ್ಯಕರ್ತರಿಗೂ ದೊಡ್ಡ ಸಲಾಂ! ■



• ಗೌರಿ ಲಂಕೇಶ್
editorlankesh@gmail.com

ಮಂಡ್ಯ: ಅಂಬಿಯ ದರ್ಪ ಮತ್ತು ಸ್ವಾಭಿಮಾನಿ ಸ್ಲಂ



ಅಂಬರೀಶ್ ಎಂಬ ರಾಜಕಾರಣಿಯ ನಾಲಗೆಗೂ, ಮಿದುಳಿಗೂ ಲಿಂಕ್ ತಪ್ಪಿ ಅದ್ಯಾವ ಕಾಲವೋ ಆಗಿ ಹೋಗಿದೆ. ತಾವಿರುವ ಸಚಿವ ಸ್ಥಾನದ ಘನತೆಯನ್ನೂ ಲೆಕ್ಕಿಸದೆ ಬಾಯಿಗೆ ಬಂದಿದ್ದನ್ನು ಒದರಿ ಅವಾಂತರ ಮೇಲೆ ಳೆದುಕೊಳ್ಳುವುದು ಅಂಬರೀಶ್‌ರ ಪ್ರವೃತ್ತಿಯಾದಂತಾಗಿದೆ. 'ನಾನು ಸಾವಿರ ಹುಡುಗೀರ್ನ ಬೇಕಾದ್ರೂ ಇಟ್ಕೋತೀನಿ', 'ಈ ವಯಸ್ನಲ್ಲಿ ಮೊಬೈಲ್ ನೋಡಿ ಮಾಡೋಕೆ ಇನ್ನೇನ್ ಉಳ್ದಿದೆ'... ಇವೆಲ್ಲಾ ಅವರ ಬಾಯಿಂದ ಉದುರಿ ಅವಾಂತರ ಸೃಷ್ಟಿಸಿದ ಲೇಟೆಸ್ಟ್ ಆಣಿಮುತ್ತುಗಳು. ಇದೀಗ ಅಂತಹುದೇ ಮತ್ತೊಂದು ವಿವಾದವನ್ನು ಸುತ್ತಿಕೊಂಡಿದ್ದಾರೆ. ಈ ಸಲ ಅವರ ವಕ್ರೋಕ್ತಿ ಕೆರಳಿಸಿರೋದು ಅಂಬಿಗೆ ಮತ ಹಾಕಿದ್ದ ಮಂಡ್ಯದ ಸ್ಲಂ ಜನರನ್ನು.

ಫೆಬ್ರವರಿ 7ರಂದು ಮಂಡ್ಯದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಸಚಿವ ಅಂಬರೀಶ್ ಸ್ಲಂ ನಿವಾಸಿಗಳ ಕುರಿತು ಮಾತನಾಡುತ್ತಾ 'ನೀವು ವಾಸಿಸುತ್ತಿರುವ ಮನೆಗಳಲ್ಲಿ ನನ್ನ ಮನೆಯ ನಾಯಿಯೂ ವಾಸಿಸುವುದಿಲ್ಲ' ಎಂಬ ಡೈಲಾಗು ಉದುರಿಸಿದ್ದರು. ಸ್ವಾಭಿಮಾನಿ ಸ್ಲಂ ಜನರ ಸಿಟ್ಟು ಕೆರಳಿಸಿರೋದೆ ಈ ಮಾತು. ವಿಧಾನಸಭೆ, ಲೋಕಸಭಾ ಚುನಾವಣೆಗಳಲ್ಲಿ ಸೋತು ಸುಣ್ಣವಾಗಿದ್ದ ಅಂಬರೀಶ್‌ರನ್ನು ಇದೇ ಮಂಡ್ಯದ ಜನ ಗೆಲ್ಲಿಸಿದ್ದು ಆತನಿಗಿದು ಕಡೆಯ ಚುನಾವಣೆ ಎನ್ನುವ ಏಕೈಕ ಸಿಂಪಥಿಯ ಕಾರಣಕ್ಕೆ. ಗೆದ್ದ ಅಂಬರೀಶ್ ಸಿದ್ದರಾಮಯ್ಯ ಸರ್ಕಾರದಲ್ಲಿ ವಸತಿಖಾತೆಯಂತಹ ಪೊಗದಸ್ತಾದ ಖಾತೆಯ ಸಚಿವರೂ ಆದರು. ವಸತಿ ಸಚಿವರಾಗಿ ನೂರಾರು ಅಭಿವೃದ್ಧಿ ಕಾಮಗಾರಿಗಳನ್ನು ಕ್ಷೇತ್ರಕ್ಕೆ ತರಬಹುದಿತ್ತು. ಆದರೆ ಅಂಬರೀಶರ ಸೋಮಾರಿತನದಿಂದ ಒಂದೂವರೆ ವರ್ಷ ಉರುಳಿದರೂ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಭ್ರಷ್ಟ, ಭಂಡ ಅಧಿಕಾರಿಗಳ ಮೇಲೆ ಹಿಡಿತವಿಲ್ಲದ ಕಾರಣ ಜನಸಾಮಾನ್ಯರ ಕೆಲಸಗಳು ಸುಲಭವಾಗಿ ಆಗುತ್ತಿಲ್ಲ. ಕಳಪೆ ಕಾಮಗಾರಿಗಳು ಮಿತಿ ಮೀರಿವೆ. ಹಣದ ಆಸೆಗಾಗಿ ಪಕ್ಷೇತರನೊಬ್ಬನನ್ನು ನಗರಸಭಾ ಅಧ್ಯಕ್ಷನನ್ನಾಗಿ ಮಾಡಿ ನಗರಸಭೆ ಆವರಣವನ್ನೇ ರಣಾಂಗಣ ಮಾಡಿಟ್ಟಿದ್ದಾರೆ.

ಶಾಸಕರ ನೇತೃತ್ವದಲ್ಲಿ 3 ತಿಂಗಳಿಗೊಮ್ಮೆ ನಡೆಯುವ ಪ್ರಗತಿ ಪರಿಶೀಲನಾ ಸಭೆ 3 ಗಂಟೆ ನಡೆದರೆ ಹೆಚ್ಚು. 'ಬಂದ ಪುಟ್ಟ ಹೋದ ಪುಟ್ಟ' ಎಂಬಂತೆ ಹಾಗೆ ಬಂದು ಹೀಗೆ ಹೋಗುವ ಅಂಬರೀಶ್‌ಗಿಂತ ಹಿಂದಿನ ಶಾಸಕರೇ ಎಷ್ಟೋ ವಾಸಿ ಎಂಬ ಮಾತುಗಳು ಜನರ ಬಾಯಲ್ಲಿ ನಿತ್ಯದ ಮಂತ್ರವಾಗಿದೆ. ಈ ಹಿಂದೆ ಶಾಸಕನಾಗಿದ್ದ ಎಂ.ಶ್ರೀನಿವಾಸ್ ಜನಸಾಮಾನ್ಯರ ಕೈಗೆ ಸುಲಭವಾಗಿ ಸಿಗುತ್ತಾರೆಂಬ ಕಾರಣಕ್ಕೆ ಎರಡೆರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಅಂಬಿ ಇಂತಹ ಪರಂಪರೆಗೆ ತದ್ವಿರುದ್ಧ ಎಂಬುದು ಗೊತ್ತಿದ್ದೂ ಗೆಲ್ಲಿಸಿದ ಮತದಾರ ಇವತ್ತು ಪಶ್ಚಾತ್ತಾಪ ಪಡಬೇಕಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ, ವಸತಿ ಖಾತೆಯಂತಹ ಭಾರೀ ಅಧಿಕಾರಗಳಿದ್ದಾಗ್ಯೂ ಅಂಬರೀಶ್‌ರಿಂದ ಹೇಳಿಕೊಳ್ಳುವಂತಹ ಅಭಿವೃದ್ಧಿ ಕಾರ್ಯಗಳು ಇನ್ನೂ ನಡೆದಿಲ್ಲ. ಮಂಡ್ಯ-ನಾಗಮಂಗಲ, ಮಂಡ್ಯ- ಕೆರಗೋಡು ರಸ್ತೆಯಂತೂ ಓಡಾಡಲಾರದಷ್ಟು ಹದಗೆಟ್ಟಿದೆ. ಅನೇಕ ರಸ್ತೆಗಳು ಟಾರು ಕಂಡಿಲ್ಲ. ತನ್ನ ಒಂದೇ ಒಂದು ಆವಾಜ್‌ಗೆ ಹೆದರುವ ಅಧಿಕಾರಿಗಳಿಂದ ಅಂಬಿ ಕೆಲಸ ತೆಗೆಯುವುದಕ್ಕೂ ಏದುಸಿರು ಬಿಡುತ್ತಿದ್ದಾರೆ. ಆದರೆ ಆಗಾಗ್ಗೆ ತಮ್ಮ ಲಂಗುಲಗಾಮಿಲ್ಲದ ನಾಲಿಗೆಯನ್ನು ಹರಿಯಬಿಡುವ ಮೂಲಕ ಜನರ ಆಕ್ರೋಶಕ್ಕೆ ತುತ್ತಾಗುವುದನ್ನು ತಪ್ಪಿಸಿಕೊಳ್ಳುತ್ತಿಲ್ಲ.

ಅದು ಹಾಲಹಳ್ಳಿ ಸ್ಲಂ

ಮಂಡ್ಯ ನಗರದಲ್ಲಿರುವ ಸ್ಲಂಗಳಲ್ಲೇ ಹಾಲಹಳ್ಳಿ ಸ್ಲಂ ಅತಿ ದೊಡ್ಡ ಸ್ಲಂ. ಅಧಿಕೃತ ಮಾಹಿತಿಯ ಪ್ರಕಾರ 712 ಕುಟುಂಬಗಳು ಇಲ್ಲಿ ವಾಸಮಾಡುತ್ತಿವೆ. ಜನಸಂಖ್ಯೆ ಸುಮಾರು 3 ಸಾವಿರವನ್ನೂ ದಾಟುತ್ತದೆ. ನೆಲಮಹಡಿ -1(ಜಿ-1) ಮಾದರಿಯಲ್ಲಿ 1990ರಲ್ಲಿ ಕಟ್ಟಿರುವ ಮನೆಗಳ ಆಯಸ್ಸು ಕೇವಲ 15 ವರ್ಷಗಳಾಗುವಷ್ಟರಲ್ಲಿಯೇ ಮುಗಿದಿದೆ.



ಹೋರಾಟ ನಡೆಸುತ್ತಿರುವ ಹಾಲಹಳ್ಳಿ ಸ್ಲಂ ನಿವಾಸಿಗಳು

ಶೇ.5ರಷ್ಟು ಮನೆಗಳು ಸಂಪೂರ್ಣವಾಗಿ ನೆಲಕಚ್ಚಿದ್ದು, ಶೇ.80ರಷ್ಟು ಮನೆಗಳು ಶಿಥಿಲವಾಗಿವೆ. ಒಂದು ಭರ್ಜರಿ ಮಳೆ ಬಂದರೆ ಸಾಕು ಅಷ್ಟೂ ಮನೆಗಳು ಧರೆಗುರುಳುತ್ತವೆ. ಇನ್ನುಳಿದ ಶೇ.15ರಷ್ಟು ಜನರು ಸಾಲ-ಸೋಲ ಮಾಡಿ ಮನೆಗಳು ಬೀಳದಂತೆ ರಿಪೇರಿ ಮಾಡಿಕೊಂಡಿದ್ದಾರೆ. ಹೀಗಿದೆ ಹಾಲಹಳ್ಳಿ ಸ್ಲಂ ಬೋರ್ಡ್ ನಿವಾಸಿಗಳ ಕರುಣಾಜನಕ ಬದುಕು. ಹಾಲಹಳ್ಳಿ ಸ್ಲಂ ಬೋರ್ಡ್ ಮನೆಗಳು ವಾಸಕ್ಕೆ ಯೋಗ್ಯವಲ್ಲ ಎಂದು ಕೊಳಗೇರಿ ಅಭಿವೃದ್ಧಿ ಮಂಡಳಿ ಲಖಿತವಾಗಿ ನೋಟಿಸ್ ಕೊಟ್ಟು 8-10 ವರ್ಷಗಳೇ ಕಳೆದಿವೆ. ಅಂದಿನ ತುತ್ತಿಗೆ ಅವತ್ತೇ ಬೆವರು ಹರಿಸಬೇಕಾದ ದುಸ್ಥಿತಿಯಲ್ಲಿರುವ ಇಲ್ಲಿನ ಸ್ಲಂ ನಿವಾಸಿಗಳು ಈಗಲೋ ಆಗಲೋ ಬೀಳುವ ಸ್ಥಿತಿಯಲ್ಲಿರುವ ಮನೆಗಳಲ್ಲೇ ಅಂಗೈಯಲ್ಲಿ ಜೀವ ಹಿಡಿದುಕೊಂಡು ಜೀವನ ಸಾಗಿಸುತ್ತಿದ್ದಾರೆ. ಸ್ಲಂ ಜನರ ನಿರಂತರ ಹೋರಾಟದ ಫಲವಾಗಿ ಯುಪಿಎ ಸರ್ಕಾರ ರಾಜೀವ್ ಆವಾಸ್ ಯೋಜನೆ ಜಾರಿಗೆ ತಂದಿತು. ಈ ಯೋಜನೆಯ ಭಾಗವಾಗಿ ಮಂಡ್ಯ ಜಿಲ್ಲೆ ಆಯ್ಕೆಯಾದಾಗ ಅಂಬರೀಶ್‌ರವರು ಇನ್ನೂ ಶಾಸಕರಾಗಿರಲಿಲ್ಲ. ಈಗ 65 ಕೋಟಿ ರೂ. ವೆಚ್ಚದಲ್ಲಿ 1335 ಮನೆಗಳ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆಯೂ ಮುಗಿದುಹೋಗಿದೆ.

3-4 ಸ್ಲಂಗಳನ್ನು ತರುವ ಹುನ್ನಾರ


ಹಾಲಹಳ್ಳಿ ಸ್ಲಂನಲ್ಲಿ ಇದ್ದ ಮನೆಗಳ ಸಂಖ್ಯೆ 712. ಆದರೆ ಆ ಜಾಗದಲ್ಲಿ ಈಗ 1335 ಮನೆಗಳನ್ನು ಕಟ್ಟಲು ಕೊಳಗೇರಿ ಅಭಿವೃದ್ಧಿ ಮಂಡಳಿ ಮುಂದಾಗಿದೆ. ಅಂದರೆ 12 ಎಕರೆ ಜಾಗದಲ್ಲಿ ಒಂದು ಹೋಬಳಿ
ಮನೆಗಳು. 1335 ಮನೆಗಳಲ್ಲಿ ಹಾಲ
ಮನೆಗಳು, ಕಾಳಿಕಾಂಬ ಸ್ಲಂನ 65 ಮನೆಗಳು
ಪಕ್ಕದ ತಮಿಳು ಕಾಲೋನಿಯ 480 ಮನೆ
ಮತ್ತೆರಡು ಸ್ಲಂಗಳ ಜನರನ್ನು ಅಲ್ಲಿಗೆ ಸೇರಿ
ಇದರ ಹಿಂದಿದೆ. ಇದನ್ನು ತಿಳಿದ ಹಾ
ಜನರು ಕರ್ನಾಟಕ ಜನಶಕ್ತಿ ಹಾಗು ಮಂಡ್ಯ
ಒಕ್ಕೂಟದ ನೇತೃತ್ವದಲ್ಲಿ ಮೊದಲಿನಿಂದಲ
ವ್ಯಕ್ತಪಡಿಸುತ್ತಲೇ ಬಂದಿದ್ದಾರೆ. 712 ಕುಟು
ಹೆಚ್ಚುವರಿ 623 ಮನೆಗಳನ್ನು ಅದೇ ಇಕ್ಕ
ತಂದರೆ ಮತ್ತೊಂದು ದೊಡ್ಡ ಸ್ಲಂ ನಿರ್ಮಾ
ಅಂದರೂ 6-7 ಸಾವಿರ ಜನ ಒಂದೇ ಕಡೆ
ಎಷ್ಟೆಲ್ಲಾ ಸಾಮಾಜಿಕ ಸಮಸ್ಯೆಗಳು ತಲೆದೋ
ಕಾಮನ್‌ಸೆನ್ಸ್ ಜನಪ್ರತಿನಿಧಿಗಳು ಹಾಗೂ
ಇಲ್ಲ. ಜನರ ಸಮಸ್ಯೆಗಿಂತ ಪರ್ಸೆಂಟೇಜ್ ರಾ
ಕಳೆದುಹೋಗಿರುವ ಜನಪ್ರತಿನಿಧಿಗಳು ಜನ
ನಡುವೆಯೂ ಕಾಮಗಾರಿ ನಡೆಸಬೇಕೆಂ
ನಡೆಸಿದ್ದಾರೆ.

ಮಾರ್ಗಸೂಚಿ ಪಾಲಿಸಿ

ಸ್ಲಂ ಜನರಿಗೆ ಮನೆ ಕಟ್ಟಿಕೊಟ್ಟ ನಂತರ
ಸಮಸ್ಯೆಗಳ ಅನುಭವ, ಯೋಜನೆಗಳ
ಅಧ್ಯಯನದಿಂದ ಎಚ್ಚೆತ್ತ ಯುಪಿಎ ಸರ
ಆವಾಸ್ ಯೋಜನೆಯಲ್ಲಿ ಕೆಲವೊಂದು
ಸೇರಿಸಿದೆ. ಅದರಲ್ಲಿ ಯೋಜನೆಯ
ಕೊನೆಯವರೆಗೂ ಫಲಾನುಭವಿಗಳ ಭಾಗೀದಾ
ಅಲ್ಲದೆ ಒಂದು ಅಥವಾ ಒಂದಕ್ಕಿಂತ
ಮನೆಗಳನ್ನು (ಜಿ-1, ಜಿ-2) ನಿರ್ಮಿಸುವು
ಆದರಂತೆ ಫಲಾನುಭವಿಗಳ ಭಾಗೀದಾರಿ
ಮೊದಲು ಸ್ಲಂ ಬೋರ್ಡ್ ಅಧಿಕಾರಿಗಳು
ಅಭಿಪ್ರಾಯವನ್ನು ಕೇಳಬೇಕಿತ್ತು. ಹಾ
ಬೋರ್ಡ್‌ನಲ್ಲಿ ಈಗ ನೆಲಮಹಡಿ-1 (ಜಿ-1
ಈ ಹಿನ್ನೆಲೆಯಲ್ಲಿ ಅಲ್ಲಿನ ಜನರನ್ನೆಲ್ಲಾ ಸೇರಿ
ನಡೆಸಿದಾಗ ಎಲ್ಲರೂ ಈಗಿರುವಂತೆ ನೆಲವ
1) ಮನೆ ನಿರ್ಮಿಸುವಂತೆ ಅಭಿಪ್ರಾಯ
ಅದಕ್ಕಿಂತ ಹೆಚ್ಚಿನ ಮಹಡಿ ನಿರ್ಮಿಸುವುದು
ಒತ್ತಾಯಿಸಿದ್ದರು.

ಆದಾಗ್ಯೂ ಸ್ಲಂ ಜನರನ್ನು ಸಂಪರ್ಕಿಸದೆ
ನಿರ್ಮಾಣಕ್ಕೆ ಗುದ್ದಲಿ ಪೂಜೆಗೆ ಸಿದ್ಧತೆ
ನಂತರ ಇದ್ದಕ್ಕಿದ್ದಂತೆ ಒಂದು ದಿನ ಮ
ಅಧ್ಯಕ್ಷ ಸಿದ್ದರಾಜು ಕಚೇರಿಯಲ್ಲಿ ನಡೆಸಲಾದ
ಬಲಗೈಭಂಟ ಅಮರಾವತಿ ಚಂದ್ರಶೇಖರ್
ಸಭೆಯಲ್ಲಿ ಮೂರ್‍ನಾಲ್ಕು ಸ್ಲಂಗಳ ಮನೆಗ
ಹಾಲಹಳ್ಳಿ ಸ್ಲಂ ಜಾಗದಲ್ಲೇ ನಿರ್ಮಿಸುವ
3) ಮಾದರಿಯ ಮನೆಗಳನ್ನು ನಿರ್ಮಿ
ಬಯಲಾಗಿತ್ತು. ಸಭೆಯಲ್ಲಿದ್ದ ಸ್ಲಂ ಮುಖಂ
ವಿರೋಧಿಸಿ ಸಭೆಯಿಂದ ಹೊರ ನಡೆದಿದ್ದ

ಮೂರ್‍ನಾಲ್ಕು ಸ್ಲಂಗಳ ಜನರನ್ನು ಒ
ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವ ಈ ಯೋಜ
ಮಂಡ್ಯ ಸ್ಲಂ ನಿವಾಸಿಗಳ ಒಕ್ಕೂಟದ
ನಿವಾಸಿಗಳೆಲ್ಲ ಹೋರಾಟಕ್ಕೆ ಇಳಿದಿದ
ವಿರೋಧದ ನಡುವೆ 65 ಕೋಟಿ ವೆಚ್ಚದ
ಶಂಕುಸ್ಥಾಪನೆ ನೆರವೇರಿಸಲು ದಿನಾಂಕವೂ



ಕುಸಿದು ಬೀಳುತ್ತಿರುವ ಹಾಲಹಳ್ಳಿ ಸ್ಲಂ ಬೋರ್ಡ್ ಮನೆಗಳು



ಜನರನ್ನು ಸುಲಭವಾಗಿ ಒಪ್ಪಿಸಬಹುದೆಂದು ತಿಳಿದಿದ್ದ ಸ್ಲಂ ಬೋರ್ಡ್ ಾರಿಗಳು ಹಾಗೂ ಅಂಬಿ ಬೆಂಬಲಿಗರು ದಿನೇದಿನೇ ವಿರೋಧ ಗುತ್ತಿರೋದನ್ನು ಕಂಡು 'ಜಿ-3 ಮಾದರಿಯಲ್ಲಿ ನಿರ್ಮಿಸುವುದನ್ನು ಬಿಡುತ್ತೇವೆ. ಮನೆ ನಿರ್ಮಾಣಕ್ಕೆ ಒಪ್ಪಿಕೊಳ್ಳಿ' ಎಂದು ಮಸ್ಕ ಹೊಡೆಯಲಾರಂಭಿಸಿದ್ದರು. ದೇ ವಿಚಾರವಾಗಿ ಐದಾರು ಸಭೆಗಳೂ ನಡೆದಿವೆ. ಅದರಲ್ಲಿ ಎರಡು ಳಿಗೆ ಖುದ್ದು ಜಿಲ್ಲಾಧಿಕಾರಿ ಅಜಯ್ ನಾಗಭೂಷಣ್‌ರೇ ನೇತೃತ್ವ ದ್ದುಂಟು. ಇಷ್ಟಾದರೂ ಸಚಿವ ಅಂಬರೀಶ್ ಒಮ್ಮೆಯೂ ಸ್ಲಂ ಜನರ ಸಭೆ ನಡೆಸಲು ಮುಂದಾಗಲೇ ಇಲ್ಲ.

ಕೊನೆಗೆ ಅಂಬರೀಶ್‌ರನ್ನೇ ಭೇಟಿ ಮಾಡಲು ನಿರ್ಧರಿಸಿದ ಸ್ಲಂ ಮುಖಂಡರಿಗೆ ಸಭೆಯೊಂದರಲ್ಲಿ ಸಿಕ್ಕ ಅಂಬರೀಶ್ 'ನೀವು ವಾಸಿಸುತ್ತಿರುವ ಮನೆಯಲ್ಲಿ ಮನೆಯ ನಾಯಿಯೂ ವಾಸಿಸುವುದಿಲ್ಲ. ನಾನು ಇಲ್ಲಿ 65 ಕೋಟಿ ದಲ್ಲಿ ಸಾವಿರ ಮನೆಗಳನ್ನು ಕಟ್ಟಿಸುತ್ತಿದ್ದೇನೆ. ಆ ಮನೆಗಳು ಈ ಥರ ಬೇಕು ಆ ಥರ ಇರಬೇಕು ಎಂದು ಕೆಲವರು ವಿರೋಧಿಸುತ್ತಿದ್ದಾರೆ. ನ್ನು ಬಿಟ್ಟು ಸುಮ್ಮನೆ ನಾನು ಕಟ್ಟಿಸಲಿರುವ ಮನೆಗಳಿಗೆ ಹೋಗಿ' ಅಂತ ಮಾ ಗತ್ತಿನ ಕುತ್ತೆ ಕನ್ವರ್‌ಲಾಲ್ ಸ್ಟೈಲಿನಲ್ಲಿ ಅಬ್ಬರಿಸಿದ್ದರು. ಅಂಬರೀಶ್‌ರವರ ಮುತ್ತುಗಳಿಗೆ ಸ್ವಾಭಿಮಾನಿ ಸ್ಲಂ ಜನರು ಅವರ ವಿರುದ್ಧ ತಿರುಗಿ ಬಿದ್ದಿದ್ದಾರೆ. ಸ್ಲಂಗಳಲ್ಲೇ ವಾಸಮಾಡಿದರೂ ದುಡಿದು ತಿನ್ನುವ ಸ್ವಾಭಿಮಾನಿಗಳು. ಗಳಿಂದ ನಾವು ಕಾನೂನು ಚೌಕಟ್ಟಿನ ಒಳಗೆ ನಮ್ಮ ಹಕ್ಕುಗಳಿಗಾಗಿ ರಾಟ ಮಾಡುತ್ತಿದ್ದೇವೆಯೇ ಹೊರತು ಯಾರ ಬಳಿಯೂ ಭಿಕ್ಷೆ ಬೇಡಲು ಗಿಲ್ಲ' ಎಂದು ಸ್ಲಂ ಜನ ಸಚಿವ ಅಂಬರೀಶ್‌ರ ದುರಹಂಕಾರದ ಮಾತುಗಳಿಗೆ ತ್ಯುತ್ತರ ನೀಡಿದ್ದಾರೆ. ಅದೂ ಭರ್ಜರಿ ಪ್ರತಿಭಟನಾ ಮೆರವಣಿಗೆ ನಡೆಸುವ ಲಕ!

ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಜನಪ್ರತಿನಿಧಿಯೊಬ್ಬ ಸಾಂವಿಧಾನಿಕ ಕಟ್ಟಿನೊಳಗೆ ಏನೇ ಕೆಲಸ ಮಾಡಿದರೂ ಅದು ಜನರಿಗೆ ಸಲ್ಲಬೇಕಾದ ನ ಮಧ್ಯಸ್ಥಿಕೆ ಅಷ್ಟೇ ಆಗಿರುತ್ತದೆ. 'ನಾನು ಕಟ್ಟಿಸುತ್ತಿದ್ದೇನೆ' ಎನ್ನುವ ಮಾತೇ ಪ್ರತಿನಿಧಿಗಳಿಗೆ ತಕ್ಕದಲ್ಲ. ಸಾರ್ವಜನಿಕ ನಡವಳಿಕೆ ಹಾಗೂ ಮಾತಿನ ನೀತಿಗಳನ್ನು ಯದೆ ಅಂಬರೀಶ್ ಮಾತನಾಡಿರುವುದು ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಡಿರುವ ಅವಮಾನ ಎಂದು ಹಲವು ಪ್ರಗತಿಪರ ಮುಖಂಡರು ಅವತ್ತಿನ ಭಟನೆಯಲ್ಲೆ ಕಟುವಾಗಿ ಖಂಡಿಸಿದ್ದಾರೆ. ಈಗಲಾದರೂ ಅಂಬರೀಶ್ ತ್ತುಕೊಳ್ಳಬೇಕಿದೆ. ಸಿನಿಮಾದ ಫ್ಯಾಂಟಸಿ ಬದುಕಿನಾಚೆ ಬಂದು ತಮ್ಮ ಕೀಯ ಹಾದಿಯನ್ನು ನಿರ್ಧರಿಸಿಕೊಳ್ಳಬೇಕಿದೆ. ಇಲ್ಲವಾದರೆ ಸ್ವಾಭಿಮಾನಿ ಜನರೇ ಅವರಿಗೆ ಉತ್ತರವಾಗುವ ದಿನ ಬಹಳ ದೂರ ಇಲ್ಲ.


ಹಾಲಹಳ್ಳಿ ಸ್ಲಂ ಬೋರ್ಡ್‌ನಲ್ಲಿ ಸಾಕಷ್ಟು ಜಾಗ ಇದ್ದರೂ ಜಿ-3 ಮನೆ ರ್ಸುವ ಉದ್ದೇಶದ ಹಿಂದೆ ಭಾರಿ ಹುನ್ನಾರವೇ ಅಡಗಿದಂತಿದೆ. ಸಾಮಾನ್ಯವಾಗಿ ಸಿಗಳ ಸಂಖ್ಯೆ ಹೆಚ್ಚಿದ್ದು ಜಾಗ ಕಡಿಮೆಯಿದ್ದಾಗ ಈ ರೀತಿ ಮೂರ್‍ನಾಲ್ಕು ಡಿಯ ಮನೆ ಕಟ್ಟಿ ಪ್ರತಿಯೊಬ್ಬರನ್ನೂ ಫಲಾನುಭವಿಯನ್ನಾಗಿಸೋದು . ಬೆಂಗಳೂರು, ಮುಂಬೈನಂತಹ ಜನನಿಬಿಡ ನಗರಗಳಿಗೆ ಸೂಕ್ತವೂ ು. ಆದರೆ ಹಾಲಹಳ್ಳಿ ಸ್ಲಂ ಬೋರ್ಡ್‌ನಲ್ಲಿ 7 ಎಕರೆಯಷ್ಟು ಹೆಚ್ಚುವರಿ ಖಾಲಿ ಇದ್ದೂ ಕಿಷ್ಕಿಂಧೆಯಾಗಿಸುವ ಹುನ್ನಾರವೇಕೆ? ಅಸಲಿಗೆ ಒಂದೆರಡು ಳನ್ನು ಬಿಟ್ಟರೆ ಉಳಿದ ಎಲ್ಲಾ ಸ್ಲಂಗಳು ಸರ್ಕಾರಿ ಜಾಗದಲ್ಲೇ ಇವೆ. ರೆಲ್ಲರಿಗೂ ಅಲ್ಲಲ್ಲೇ ಮನೆ ಕಟ್ಟಿಕೊಡಲು ಯಾವ ಸಮಸ್ಯೆಯೂ ಇಲ್ಲ. ಗಿ ನಿವೇಶನದಲ್ಲಿರುವ ಸ್ಲಂ ಜನರಿಗೆ ಮನೆ ಕಟ್ಟಲು ಕಾನೂನಿನಲ್ಲಿ ಾಶವಿದೆ. ರೈತರ ಭೂಮಿ ಕಿತ್ತುಕೊಂಡು ಬಂಡವಾಳಶಾಹಿಗಳಿಗೆ ಹಂಚಲು ದೆ ಬರುವ ಸರ್ಕಾರಿ ಕೈಗಳು ಬಡವರಿಗೆ ಮನೆ ಕಟ್ಟಿಕೊಡಬೇಕೆಂದರೆ ಸಮಸ್ಯೆಗಳನ್ನು ಸೃಷ್ಟಿಸಿಬಿಡುತ್ತಾರೆ. ಮಂಡ್ಯದಲ್ಲಿ ಭೂಸ್ವಾಧೀನದ ಸಮಸ್ಯೆ ದ್ದರೂ ಎಲ್ಲಾ ಸ್ಲಂಗಳನ್ನು ಒಂದೆಡೆ ಸೇರಿಸುವ ಹುನ್ನಾರವೇ ಅರ್ಥವಾಗುತ್ತಿಲ್ಲ.

ಜಿ-3 ಮನೆಗಳಿಗೆ ಲಿಫ್ಟ್, ಹೋಗಲಿ ಓವರ್‌ಹೆಡ್ ಟ್ಯಾಂಕ್ ಮಾಡಿ ಮನೆಗಳಿಗೆ ನೀರು ಸರಬರಾಜು ಮಾಡುವ ಆಶ್ವಾಸನೆಯನ್ನು ಅಧಿಕಾರಿಗಳು ತ್ತಿಲ್ಲ. ಹೀಗಿರುವಾಗ ಅವರು ಕಟ್ಟಿಸಿದ ನಾಲ್ಕು ಅಂತಸ್ತಿನ ಮನೆಗೆ ಗ್ಯಾರಂಟಿಯ ಮೇಲೆ ಒಪ್ಪಿಗೆ ಕೊಡಬೇಕು. ಅಂಗವಿಕಲರು, ವೃದ್ಧರು, ಗಳ ಪಾಡೇನಾಗಬೇಕು ಎಂಬ ಪ್ರಶ್ನೆಗಳಿಗೆ ಅಧಿಕಾರಿಗಳ ಬಳಿ ಉತ್ತರವಿಲ್ಲ. ಅಂಬರೀಶ್‌ರವರೇ ನಮ್ಮ ಸಮಸ್ಯೆಯಗಳನ್ನು ಕೇಳಿ ಅವರೇ ಹೇಳಿದರೆ ಹೋಗಲು ಸಿದ್ಧ ಎಂದು ಸ್ಲಂ ಜನರ ಬಾಯಿ ಬಡಿದುಕೊಳ್ಳುತ್ತಿದ್ದರೂ ರೀಶ್ ಮಾತ್ರ ಸಭೆ ನಡೆಸಲು ಸಿದ್ಧರಿಲ್ಲ.

ಮನೆ ಕಟ್ಟಿಸಿ ಕೊಡುತ್ತೇವೆ ಅಂದರೂ ಸ್ಲಂ ಜನರು ಹೋಗುತ್ತಿಲ್ಲ ಎಂದು ಮೇಲೆ ಗೂಬೆ ಕೂರಿಸಲು ಅಧಿಕಾರಿಗಳು ಸನ್ನದ್ಧರಾಗಿದ್ದಾರೆ. ಸ್ಲಂ ಜನರ ಮಧ್ಯಮ ವರ್ಗದ ಜನರಲ್ಲಿ ಮೂಡಿಸಲಾಗಿರುವ ಪೂರ್ವಾಗ್ರಹವನ್ನು ಷ್ಟು ಹೆಚ್ಚಿಸುವ ಕೆಲಸಗಳು ನಡೆದಿದೆ. ಆದರೇನಂತೆ ಸ್ಲಂ ಜನ ತಮ್ಮ ಳಿಗೋಸ್ಕರ ಕರ್ನಾಟಕ ಜನಶಕ್ತಿ ಜೊತೆಗೂಡಿ ಹೋರಾಟಕ್ಕಿಳಿದಿದ್ದಾರೆ. ಸ್ಥಿತಿಯನ್ನು ಅರಿತು ಮನೆ ನಿರ್ಮಿಸಲು ಸಚಿವ ಅಂಬರೀಶ್ ನಿಗಾ ಬೇಕಿದೆ. ಇಲ್ಲವಾದರೆ ಮತ್ತಷ್ಟು ಹೊಸ ಸಮಸ್ಯೆಗಳಿಗೆ ತಾವೇ ಾಗಬೇಕಾಗುತ್ತದೆ. ಅದಕ್ಕೂ ಮೊದಲು ಸಚಿವ ಅಂಬರೀಶ್ ತಮ್ಮ ಮೇಲೆ ಒದಿತ ಸಾಧಿಸಿಕೊಳ್ಳುವುದು ಕ್ಷೇಮ.

■ ಮಂಡ್ಯ ನಾಗೇಶ್

ಉತ್ತರ ಕನ್ನಡ: ಮಾಟ-ಮೋಡಿ-ಮಂಗ ಮತ್ತು ಮೂಢ ಶಾಸಕ ಸೈಲ್!!



ಬರೋಬ್ಬರಿ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಸಿಬಿಐ ಜೈಲಲ್ಲಿದ್ದ ಕಾರವಾರದ ಅದಿರುಗಳ್ಳ ಶಾಸಕ ಸತೀಶ್ ಸೈಲ್ ಈಚೆಗಷ್ಟೇ ಹೊರಬಂದಿದ್ದಾರೆ. ಬಂದಿದ್ದೇ ತನ್ನ ಪ್ರತಿಷ್ಠೆಗೇನೂ ಜೈಲೂಟದಿಂದ ಕುಂದು ಬಂದಿಲ್ಲ ಎಂಬ ಭಂಡತನ ಪ್ರದರ್ಶಿಸುತ್ತ ಕಂಡಕಂಡ ಸಭೆ-ಸಮಾರಂಭದಲ್ಲಿ ಠಳಾಯಿಸತೊಡಗಿದ್ದಾರೆ. ಆದರೆ ಶಾಸಕ ಸಾಹೇಬರು ಜನಸಾಮಾನ್ಯರ ಕೈಗೆ ಮಾತ್ರ ಎಟಕುತ್ತಿಲ್ಲ. ಕಾರವಾರ ಅಂಕೋಲೆಯ ಮಂದಿ ಎಮ್ಮೆಲ್ಲೆಯನ್ನು ಹುಡುಕುಡುಕಿಯೇ ಸುಸ್ತಾಗಿ ಹೋಗಿದ್ದಾರೆ. ಶಾಸಕ ಜೈಲಲ್ಲಿದ್ದಾಗಿನ ಮತ್ತು ಕ್ಷೇತ್ರದಲ್ಲಿದ್ದಾಗಿನ ಪರಿಸ್ಥಿತಿಯಲ್ಲಿ ಫರಕೇನೂ ಕ್ಷೇತ್ರವಾಸಿಗಳಿಗೆ ಕಾಣಿಸುತ್ತಿಲ್ಲ!

ಸೈಲ್ ಶಾಸಕನಾಗಿದ್ದೇ ಕಳ್ಳಕಾಸಿನ ಕಸುವಿನಿಂದ. ಎಮ್ಮೆಲ್ಲೆ ಆಗುವುದು ಒಣ ರುಬಾಬಿಗೆ, ವೈಯಕ್ತಿಕ ದಂಧೆಗಳ ಅಭಿವೃದ್ಧಿಗೆ ಎಂಬ ತತ್ವಾದರ್ಶದ ಸೈಲ್‌ಗೆ ಯಾವ ಜನಪರ ಬದ್ಧತೆ-ಕಾಳಜಿ ಇಲ್ಲವೇ ಇಲ್ಲ. ಹೀಗಾಗಿ ಆತನಿಗೆ ತಾನೊಂದು ನಿರ್ದಿಷ್ಟ ಜಾಗದಲ್ಲಿ ಕುಳಿತು ಜನರ ಸಮಸ್ಯೆ-ಸಂಕಷ್ಟ ಸ್ಪಂದಿಸಬೇಕೆಂಬ ಕನಿಷ್ಠ ಕರ್ತವ್ಯ ಪ್ರಜ್ಞೆ ಇಲ್ಲದಾಗಿದೆ. ಅಂಕೋಲಾ ಮತ್ತು ಕಾರವಾರ ಎರಡೂ ತಾಲ್ಲೂಕ್ ಕೇಂದ್ರದಲ್ಲಿರುವ ಶಾಸಕನ ಕಚೇರಿಗಳು ದೊಡ್ಡ ಬೀಗ ಜಡಿದುಕೊಂಡಿದ್ದರೆ, ಎಮ್ಮೆಲ್ಲೆಯ ಮನೆ ಗೇಟಿಗೆ ಸೆಕ್ಯುರಿಟಿ ಗಾರ್ಡ್‌ಗಳು ಹಾಗು ಪೊಲೀಸರು ದೊಣ್ಣೆ-ಗನ್ನು ಹಿಡಿದುಕೊಂಡು ಅಡ್ಡ ನಿಂತಿರುತ್ತಾರೆ. ಜನರಿಗೆ ಜರೂರಿದ್ದಾಗ ಶಾಸಕ ಸಿಗದೆ ಕ್ಷೇತ್ರ ಬರಡಾಗುತ್ತಿದೆ; ಶಾಸಕನೇ ಕಾರವಾರ-ಅಂಕೋಲೆಗರ ಪೀಡೆಯಂತಾಗಿ ಹೋಗಿದ್ದಾನೆ!


ಬಳ್ಳಾರಿಯ ರೆಡ್ಡಿಗಳು ಕದ್ದ ಕಬ್ಬಿಣದ ಅದಿರನ್ನು ಬೇಲೇಕೇರಿ ಬಂದರಿನಿಂದ ಅಕ್ರಮವಾಗಿ ವಿದೇಶಕ್ಕೆ ಕಳಿಸಿ ಕಳ್ಳ ಕುಬೇರನಾಗಿರುವ ಸೈಲ್ ಸಹಜವಾಗೇ ಪಾಪಪ್ರಜ್ಞೆಯಿಂದ ಬಳಲುತ್ತಿದ್ದಾರೆ. ಮಾಟ-ಮಂತ್ರ-ಮೂಢನಂಬಿಕೆಯಿಂದ ಬಳಲುತ್ತಿದ್ದಾರೆ. ಸೈಲನ ಮೌಢ್ಯಕ್ಕೆ ಸಿಲುಕಿರುವ ಆತನ ಶಾಸಕತ್ವ ಕ್ಷೇತ್ರದ ಜನರಿಗೆ ಕೊಡುತ್ತಿರುವ ತೊಂದರೆ ಹೇಳತೀರದು. ಅಂಕೋಲೆಯ ಶಾಸಕ ಕಚೇರಿಗೆ ಮಂಗ ನುಗ್ಗಿದ್ದಾನೆಂದು ಖಾಲಿ ಮಾಡಿರುವ ಈ ಎಡವಟ್ಟು ಶಾಸಕ ಕಾರವಾರದ ಆಫೀಸಿನಲ್ಲಿ ಒಂದಿಷ್ಟು ಲಿಂಬೆಹಣ್ಣು ಕುಂಕುಮದ ಪೊಟ್ಟಣ ಕಂಡಿದ್ದರಿಂದ ಮಾಟ-ಮಂತ್ರ ಎಂದು ಕಂಗಾಲಾಗಿ ಅತ್ತ ತಲೆಯೇ ಹಾಕುತ್ತಿಲ್ಲ! ಹೀಗಾಗಿ ಜನರಿಗೆ ಶಾಸಕನ ಕಂಡು ಅಹವಾಲು ಹೇಳಲು ಒಂದು ನಿರ್ದಿಷ್ಟ ಸ್ಥಳವೇ ಇಲ್ಲದಂತಾಗಿದೆ. ಕರ್ತವ್ಯಪ್ರಜ್ಞೆ ಎಂಬುದೇ ಇಲ್ಲದ ಹುಂಬ ಶಾಸಕ ಸೈಲ್‌ಗೆ ಜನರ ಭೇಟಿಗೊಂದು ಸರಿಯಾದ ವ್ಯವಸ್ಥೆ ಕಲ್ಪಿಸಬೇಕೆಂದೇ ಅನ್ನಿಸಿಲ್ಲ.

ಸೈಲ್ ಶಾಸಕನಾಗಿ ಎರಡು ವರ್ಷ ಕಳೆಯುತ್ತ ಬಂತು. ಆದರೆ ಕಾರವಾರದ ಜನರಿಗೆ ಆತನನ್ನು ಸರ್ಕಾರಿ ಕಚೇರಿಯಲ್ಲಿ ಕಾಣುವ ಭಾಗ್ಯ ಮಾತ್ರ ಬಂದಿಲ್ಲ. ಸರ್ಕಾರ ಲಕ್ಷಾಂತರ ರೂ. ವ್ಯಯಿಸಿ ಶಾಸಕ ಸಾಹೇಬನಿಗೆ ವ್ಯವಸ್ಥಿತ ಆಫೀಸು ಮಾಡಿಕೊಟ್ಟಿದೆ. ಸೈಲ್ ಆ ಕಚೇರಿಯಲ್ಲಿ ವಿರಾಜಮಾನನಾಗಬೇಕೆಂದು ರೆಡಿಯಾಗುತ್ತಿದ್ದಂತೆಯೇ ಅಲ್ಲಿ ಹಲವು ಲಿಂಬೆಹಣ್ಣುಗಳು, ಮಂತ್ರಿಸಿದ ಚೀಟಿ, ಕುಂಕುಮ ಇನ್ನೇನೇನೋ ಮಾಟ-ಮೋಡಿ ವಸ್ತುಗಳು ಆತನ ಕಣ್ಣಿಗೆ ಬಿದ್ದಿದೆ. ಮೊದಲೇ ಕಳ್ಳ ಅದಿರು ರಫ್ತು ಮಾಡಿದಕ್ಕಾಗಿ ಸಿಬಿಐ ಪೊಲೀಸರ ಮೋಸ್ಟ್ ವಾಂಟೆಡ್ ಆಗಿದ್ದ ಸೈಲ್‌ಗೆ ಈ ಮಾಟ-ಮೋಡಿ ಪರಿಕರದ ಭ್ರಮೆ ದಿಗ್ಮೂಢನಾಗಿಸಿ ಬಿಟ್ಟಿತು. ತನ್ನ ರಾಜಕೀಯ ಎದುರಾಳಿ ಆನಂದ ಅಸ್ನೋಟಿಕರನೇ ಈ ಮಾಟ-ಮೋಡಿ ಮಾಡಿ ಶಾಸಕತ್ವ ತನಗೆ ದಕ್ಕದಂತೆ ಕಿತಾಪತಿ ಮಾಡುತ್ತಿದ್ದಾನೆಂದು ಆತ ಭಾವಿಸಿಬಿಟ್ಟ.

ಮಾಟ-ಮೋಡಿಯಿಂದ ದೆಸೆ ಕಳೆದುಕೊಂಡಿರುವ ಸರ್ಕಾರಿ ಕಚೇರಿ ಪ್ರವೇಶಿಸಿದರೆ ಅನಾಹುತ ಗ್ಯಾರಂಟಿ ಎಂದಾತನಿಗೆ ಯಾವುದೇ ಜ್ಯೋತಿಷಿ ಬೇರೆ ತಲೆಯಲ್ಲಿ ಹುಳು ಬಿಟ್ಟಿದ್ದ. ಮೂಢನಂಬಿಕೆ, ವಾಮಾಚಾರ ಮೈಗೂಡಿಸಿಕೊಂಡಿರುವ ಸೈಲ್‌ಗೆ ಶಾಸಕನ ಕಚೇರಿಗೆ ಹೋಗಿ ಕೆಲಸ ಮಾಡುವ ಧೈರ್ಯ ಆದೆಲ್ಲಿಂದ ಬರಬೇಕು? ಪಾಪ! ಆತ ಅಧಿಕೃತ ಕಚೇರಿಯತ್ತ ಸುಳಿಯಲೇ ಇಲ್ಲ. ಶಾಸಕ ಸರಿಯಾದ ಜಾಗದಲ್ಲಿ ಸಿಗುತ್ತಿಲ್ಲ ಎಂಬ ಹಾಹಾಕಾರ ಎದ್ದಿತು. ಸುದ್ದಿ ಮಾಧ್ಯಮಗಳಲ್ಲೂ ಶಾಸಕನ ಪೆದ್ದುತನದ ಬಗ್ಗೆ ಟೀಕೆಗಳು ಬಂದವು. ದಿಕ್ಕು ತೋಚದಂತಾದ ಸೈಲ್ ಪುರೋಹಿತದಲ್ಲಿ- ಜ್ಯೋತಿಷಿಗಳಲ್ಲಿ ಹೋಗಿ ಕಚೇರಿ ಪ್ರವೇಶಕ್ಕೆ ಶುದ್ಧೀಕರಣಕ್ಕೆ ಮುಹೂರ್ತ ಇಟ್ಟುಕೊಂಡು ಬಂದರು. ಅಂತೂ ಶಾಸಕ ಸೈಲ್ ಎಮ್ಮೆಲ್ಲೆ ಆಫೀಸಿಗೆ ಅಡಿಯಿಟ್ಟರು.

ಸೈಲ್ ಆ ಕಚೇರಿಯಲ್ಲಿ ಮೂರ್‍ನಾಲ್ಕು ದಿನ ಕಳೆದಿದ್ದಷ್ಟೇ. ಆಗಲೇ ಸಿಬಿಐ ಪೊಲೀಸರು ಸೈಲ್‌ನ ಹುಡುಕಿಕೊಂಡು ಕಾರವಾರಕ್ಕೆ ಬರಬೇಕಾ? ಬೇಲೇಕೇರಿಯಿಂದ ಕೋಟ್ಯಂತರ ಮೌಲ್ಯದ ಕಬ್ಬಿಣದ ಅದಿರು ಕದ್ದು ಸಾಗಿಸಿದ ಅಪರಾಧಕ್ಕಾಗಿ ಸೈಲ್‌ನ ಸಿಬಿಐ ಜೈಲಿಗೆ ಹಾಕಿತು. ತನ್ನ ಅರೆಸ್ಟಿಗೆ, ವರ್ಷಗಟ್ಟಲೆ ಜೈಲಿಗೆ ಹಾಕಲು ಶತ್ರುಗಳು ಮಾಡಿದ ಮಾಟ-ಮೋಡಿಯೇ ಕಾರಣವೆಂದು ಸೈಲ್ ನಂಬಿದನೇ ಹೊರತು ತಾನು ಮಾಡಿದ ದರೋಡೆಗೆ ಈ ಶಿಕ್ಷೆಯೆಂದು ಭಾವಿಸಲೇ ಇಲ್ಲ. ವಿರೋಧಿಗಳು ವಾಮಾಚಾರ ಮಾಡದಿದ್ದರೆ ಸಿಬಿಐನಿಂದ ತನಗೇನೂ ಮಾಡಲಿಕ್ಕಾಗುತ್ತಿರಲಿಲ್ಲ ಎಂಬ ಮೌಢ್ಯ ಸೈಲನದು. ಹೀಗಾಗಿ ಕಾರವಾರದ ಶಾಸಕನ ಕಚೇರಿ ಎಂದರೆ ನಿದ್ದೆಯಲ್ಲೂ ಬೆಚ್ಚಿ ಎದ್ದು ಕುಳಿತುಕೊಳ್ಳುವಂತಾಗಿದೆ ಸೈಲ್‌ಗೆ!!

ಸಿಬಿಐ ಜೈಲಿಂದ ಜಾಮೀನಿನ ಮೇಲೆ ಸೈಲ್ ಹೊರಬಂದು ತಿಂಗಳೊಂದು ಕಳೆದಿದೆ. ಆದರೆ ಆತ ಕಾರವಾರದ ಶಾಸಕನ ಕಚೇರಿಯತ್ತ ಈವರೆಗೆ ತಲೆ ಹಾಕಿ ಕೂಡ ಮಲಗಿಲ್ಲ. ಆತ ಎಲ್ಲೆಲ್ಲೋ ಮೀಟಿಂಗು, ಅಧಿಕಾರಿಗಳ ಜತೆ ಚರ್ಚೆ-ಸಭೆ-ಸಮಾರಂಭ ಮಾಡುತ್ತಿದ್ದಾನೆ. ಜನರು ಈತನನ್ನು ಹುಡುಕಾಡಿ ಸುಸ್ತಾಗುತ್ತಿದ್ದಾರೆ. ಅಹವಾಲು ಹಿಡಿದು ಊರೆಲ್ಲ ಅಲೆಯುವ ಪರಿಸ್ಥಿತಿ ಈತನನ್ನು ಆರಿಸಿ ಎಮ್ಮೆಲ್ಲೆ ಮಾಡಿದ ತಪ್ಪಿಗೆ ಜನರಿಗೆ ಬಂದಿದೆ. ಇದು ಕಾರವಾರದಲ್ಲಿ




ಶಾಸಕ ಸೈಲ್ ಮಾಡಿರುವ ಕಂದಾಚಾರದ ಪ್ರಹಸನವಾದರೆ, ಅತ್ತ ಅಂಕೋಲೆಯ ಎಮ್ಮೆಲ್ಲೆ ಆಫೀಸ್ ಬಂದು ಮಾಡಿರುವ ಆತನ ಮೂರ್ಖತನ ಮತ್ತೂ ಮೋಜಾಗಿದೆ.

ಅಂಕೋಲೆಯ ಶಾಸಕರ ಕಚೇರಿಯಲ್ಲಿ ಜನರಿಗೆ ದರ್ಶನ ಕೊಡುತ್ತಿದ್ದ ಸೈಲ್ ಈಗ ತನ್ನ ಕಚೇರಿ ಲೋಕೋಪಯೋಗಿ ಇಲಾಖೆಯ ಐಬಿಗೆ ವರ್ಗಾಯಿಸಿಬಿಟ್ಟಿದ್ದಾರೆ. ಲಕ್ಷಾಂತರ ರೂ. ಸರ್ಕಾರಿ ಬೊಕ್ಕಸಕ್ಕೆ ಹಾನಿ ಮಾಡಿ ಹೊಸ ಆಫೀಸು ಐಬಿಯಲ್ಲಿ ಸೈಲ್ ತೆರೆದಿರುವುದರ ಹಿಂದಿರುವುದು ಪಾಪದ 'ಮಂಗಣ್ಣ!' ದಾರಿ ತಪ್ಪಿ ಅಂಕೋಲೆ ಪೇಟೆಗೆ ಬಂದಿದ್ದ ಮಂಗ ಒಂದು ತನ್ನ ಪಾಡು ಹೇಳಿಕೊಳ್ಳಲು ಶಾಸಕ ಸೈಲ್ ಹುಡುಕಿಕೊಂಡು ಆತನ ಕಚೇರಿಗೆ ಹೋಗುತ್ತಿರಬೇಕು. ಆದರೆ ಈ ಮಂಗನ ಕಂಡಿದ್ದೇ ಶಾಸಕ ಸೈಲ್ ಅನಿಷ್ಟ ಎಂದು ಹೆದರಿ ಕಚೇರಿಯೇ ಖಾಲಿ ಮಾಡಿದ್ದಾರೆ. ಮಂಗ ಹೊಕ್ಕಿದ ಕಟ್ಟಡದಲ್ಲಿ ಉಳಿದರೆ ತೊಂದರೆ ತಾಪತ್ರಯ ಎಂಬ ಮೂಢನಂಬಿಕೆ ಪುರೋಹಿತಶಾಹಿ ಲಾಗಾಯ್ತಿನಿಂದ ಯಶಸ್ವಿಯಾಗಿ ಸಮಾಜದಲ್ಲಿ ಬಿತ್ತಿದೆ. ಅಂಥ ಮಂಗ ಪ್ರವೇಶಿದ ಕಟ್ಟಡ ನಿರ್ದಿಷ್ಟ ಸಮಯದವರೆಗೆ ಖಾಲಿ ಮಾಡಬೇಕೆಂಬ ಪದ್ಧತಿ ಸೈಲ್ ಶ್ರದ್ಧೆಯಿಂದ ಪಾಲಿಸಿದ್ದಾರೆ.

ಈ ಮಂಗನ ಕಚೇರಿಯ ಪಕ್ಕವೇ ಇರುವ ಪ್ರವಾಸಿಮಂದಿರಕ್ಕೆ ಶಾಸಕನ ಕಚೇರಿ ಸ್ಥಳಾಂತರವಾಗಿದೆಯೇನೋ ನಿಜ. ಆದರೆ ಇಲ್ಲಿಗೆ ಸೈಲ್ ಯಾವಾಗ ಬರ್ತಾರೆ, ಅದ್ಯಾವಾಗ ಹೋಗ್ತಾರೆ ಎಂಬುದು ಯಾರಿಗೂ ಗೊತ್ತಿರುವುದಿಲ್ಲ. ನೆಪಕ್ಕಷ್ಟೇ ಆಫೀಸು ಮಾಡಿರುವ ಸೈಲ್ ಜನರಿಗೆ ಮರೀಚಿಕೆಯಂತಾಗಿದ್ದಾರೆ. ಶಾಸಕ ಸೈಲ್‌ನ ಮೂಢನಂಬಿಕೆ ಆಚರಣೆಗೆ ನಿಷ್ಪಾಪಿ ಜನರು ಬಲಿಯಾಗಬೇಕಾಗಿ ಬಂದಿರುವುದು ದುರಂತ! ವಿಜ್ಞಾನ ಪದವೀಧರನಾಗಿರುವ ಸೈಲ್‌ನಲ್ಲಿ ವೈಚಾರಿಕತೆ, ವೈಜ್ಞಾನಿಕ ತಿಳಿವಳಿಕೆ ಇಲ್ಲದಿರುವುದು ನಾಚಿಕೆಗೇಡು. ರಾಜ್ಯದ ಪ್ರಾಕೃತಿಕ ಸಂಪತ್ತು ಲೂಟಿ ಮಾಡಿ ದುಡ್ಡು ದೋಚುವಾಗ ಗೋಚರಿಸದ ಅಪಾಯದ ಮುನ್ಸೂಚನೆ ಕಚೇರಿ ಬಳಿ ಲಿಂಬೆಹಣ್ಣು, ಕುಂಕುಮ, ಮಂಗ ಕಂಡಾಗ ಕಾಡಿದ್ದು ವಿಪರ್ಯಾಸವೇ ಸರಿ. ಕಾರವಾರ-ಅಂಕೋಲಾದ ಜನರು ಮೂಢನಂಬಿಕೆ ನಿಷೇಧ ಕಾನೂನು ಬರುವ ಮೊದಲೇ ಇಂಥ ಮನೆಹಾಳ ಶಾಸಕನ ನಿವಾರಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ!

■ ನಮೂಷ

ಕಾಲದ ಅಗತ್ಯ



ಭಾರತದ ಚುನಾವಣಾ ರಾಜಕೀಯ ಇತಿಹಾಸದಲ್ಲಿ 2015ರ ಫೆಬ್ರವರಿ 7 ಅತ್ಯಂತ ಮಹತ್ವದ ದಿನ. ಜನತೆ ಜಾಗೃತಗೊಂಡರೆ ಜನ ವಿರೋಧಿ ರಾಜಕಾರಣಕ್ಕೆ ಚರಮಗೀತೆ ಹಾಡಬಹುದು ಎಂಬುದನ್ನು ಅಂದು ದೆಹಲಿಯ ಜನತೆ ತೋರಿಸಿಕೊಟ್ಟಿದ್ದಾರೆ. ಅದೂ ಎಂಥಾ ಸನ್ನಿವೇಶದಲ್ಲಿ ಅಂತೀರಿ? ವಿನಾಶಕಾರಿ ರಾಜಕೀಯ ರಣತಂತ್ರದಿಂದಲೇ ಇಡೀ ದೇಶವನ್ನು ತಮ್ಮ ಕಪಿಮುಷ್ಠಿಗೆ ತೆಗೆದುಕೊಳ್ಳಲು ಸಂಚಿನ ಮೇಲೆ ಸಂಚುಗಳನ್ನು ಹೆಣೆದು ಇಡೀ ದೇಶದಲ್ಲಿ ಭೀತಿಯ ವಾತಾವರಣ ನಿರ್ಮಾಣವಾಗಿದ್ದ ಸನ್ನಿವೇಶದಲ್ಲಿ! ಇಂಥಾ ರಾಜಕೀಯ ವಿದ್ಯಮಾನಗಳಿಂದ ಆತಂಕಕ್ಕೆ ಒಳಗಾಗಿದ್ದ ಸಮಾಜಮುಖಿ ಮನಸ್ಸುಗಳಲ್ಲಿ ದೆಹಲಿಯ ಫಲಿತಾಂಶ ಹುಮ್ಮಸ್ಸು, ಉತ್ಸಾಹ ಮೂಡಿಸಿರುವುದಂತೂ ಸತ್ಯ. ಅದಕ್ಕಾಗಿ ದೆಹಲಿಯ ಆಮ್ ಆದ್ಮಿಗಳಿಗೆ ಮತ್ತು ಅವರಿಗೆ ನೇತೃತ್ವ ವಹಿಸಿದ ಆಮ್ ಆದ್ಮಿ ಪಕ್ಷಕ್ಕೆ ತುಂಬು ಹೃದಯದ ಅಭಿನಂದನೆಗಳು!

ಮೋದಿ ಮತ್ತು ಅಮಿತ್ ಶಾ ಕೂಟ ಈ ಬಾರಿ ದೆಹಲಿಯ ಚುನಾವಣಾ ಅಖಾಡವನ್ನು ಯಾವ ರೀತಿ ಸಜ್ಜುಗೊಳಿಸಿದ್ದರು ಗೊತ್ತೆ? ಚುನಾವಣಾ ಪ್ರಚಾರದ ದಂಡನಾಯಕನಾಗಿ 56 ಇಂಚಿನ ಛಾತಿಯುಳ್ಳ ಪ್ರಧಾನಿ, ಆತನ ಹಿಂದೆ ಸರಿಯಾಗಿ ಮೂರು ಡಜನ್ ಕೇಂದ್ರ ಮಂತ್ರಿಗಳು, ಅವರನ್ನು ಹಿಂಬಾಲಿಸಿ 200ಕ್ಕೂ ಹೆಚ್ಚಿನ ಎಂಪಿಗಳು, ಅಲ್ಲದೆ ದೆಹಲಿಯನ್ನು ಹಿಂದೆ ಆಳಿದ್ದ ಮಂತ್ರಿಗಳು ಶಾಸಕರು ಮೇಯರ್‌ಗಳು, ಜೊತೆಗೆ 25 ಸಾವಿರಕ್ಕೂ ಅಧಿಕ ಆರೆಸ್ಸೆಸ್ ಸ್ವಯಂಸೇವಕರು ಎಲ್ಲರೂ ಆ ನಗರ ರಾಜ್ಯದ ಮೇಲೆ ದಂಡೆತ್ತಿ ಹೋಗಿದ್ದರು. ಬಾಜಾ ಭಜಂತ್ರಿ ಬಾರಿಸಲು ಕಾರ್ಪೋರೇಟ್ ಮಾಧ್ಯಮಗಳು, ಕಪ್ಪು ಹಣ ಹರಿಸಲು ಅದಾನಿ ಅಂಬಾನಿಗಳಂಥ ಕಳ್ಳ ಖದೀಮರು- ಹೀಗೆ ಎಲ್ಲವೂ ಮೇಳೈಸಿ ಇನ್ನೇನು ಯುದ್ಧ ಗೆದ್ದೇಬಿಟ್ಟರು ಎಂಬ ಸ್ಥಿತಿ ನಿರ್ಮಿಸಿಬಿಟ್ಟಿದ್ದರು.

ಆದರೆ ಆಗಿದ್ದೇನು? ಭಾರೀ ಮುಖಭಂಗ! ಮೋದಿ - ಅಮಿತ್ ಶಾ ದುಷ್ಟ ಕೂಟಕ್ಕೆ ಇದು ತಲೆಯೆತ್ತಿ ಉತ್ತರಿಸಲಾಗದಂಥ ಮುಖಭಂಗ! ಅದೂ ಎರಡು ವರ್ಷಗಳ ಹಿಂದೆ ಹೇಳಲು ಹೆಸರೇ ಇಲ್ಲದಂಥ ಒಂದು ಪಕ್ಷಕ್ಕೆ 70ರಲ್ಲಿ 67 ಸೀಟು ಕೊಟ್ಟು, ಹೀಗೆ ತಮ್ಮ ಮುಖಕ್ಕೆ ಮಂಗಳಾರತಿ ಮಾಡುತ್ತಾರೆಂದು ಅವರು ಕನಸುಮನಸಿನಲ್ಲೂ ಎಣಿಸಿರಲಿಲ್ಲ. ಕೇವಲ ಎಂಟು ತಿಂಗಳ ಹಿಂದಷ್ಟೆ ನಡೆದ ಲೋಕಸಭಾ ಚುನಾವಣೆಯಲ್ಲಿ 46.4% ಮತ ಗಳಿಸಿ, ಏಳಕ್ಕೆ ಏಳೂ ಸೀಟುಗಳನ್ನು ಗೆಲ್ಲಿಸಿದ್ದ ಕಾರ್ಪೋರೇಟ್ ಮೀಡಿಯಾ ಪ್ರಾಯೋಜಿತ ಮೋದಿ ಅಲೆಯ ಗುಂಗಿನಲ್ಲೇ ಇದ್ದ ಬಿಜೆಪಿಗೆ ಫೆಬ್ರವರಿ 10ರಂದು ಕರೆಂಟ್ ಶಾಕ್ ಹೊಡೆದಂತಾಗಿರುವುದು ಸುಳ್ಳಲ್ಲ. ಒಂದು ವೇಳೆ ಅತಂತ್ರ ಸ್ಥಿತಿ ನಿರ್ಮಾಣವಾದರೆ ಹೇಗೂ ಮಾಮೂಲಿ ತಂತ್ರ ಬಳಸಿ ಒಂದಷ್ಟು ಮಂದಿಯನ್ನು ಬುಟ್ಟಿಗೆ ಹಾಕಿಕೊಂಡು ದೆಹಲಿಯನ್ನು ತಮ್ಮ ಕಬ್ಜಾಕ್ಕೆ ತೆಗೆದುಕೊಳ್ಳಬಹುದು ಎಂಬುದು ಅವರ ಲೆಕ್ಕಾಚಾರವಾಗಿತ್ತು, ಪಾಪ! ಹೀಗಾಗಬಾರದಿತ್ತು, ಈಗ ವಿರೋಧ ಪಕ್ಷದ ಸ್ಥಾನಮಾನ ಗಳಿಸಲೂ ಕೂಡ ಈಗಿನ 3ರ ಜೊತೆ ಇನ್ನೂ 4 ಸ್ಥಾನ ಬೇಕಾಗಿದೆ!

ಅಂತೂಇಂತೂ ಕಾರ್ಪೋರೇಟ್ ಮೀಡಿಯಾ ಪ್ರಾಯೋಜಿತ ಮೋದಿ ಅಲೆಗೆ ಕೊನೆಗಾಲ ಬಂದಿದೆ. ಕೋಮುವಾದಿ ಕೂಟದ, ಕಾರ್ಪೋರೇಟ್ ಮಾಧ್ಯಮಗಳ ಅಬ್ಬರದ ಪ್ರಚಾರ ತಾರಕಕ್ಕೇರಿದ್ದರೂ ದೆಹಲಿಯ ಜನತೆ ತಣ್ಣಗೆ ಆಮ್ ಆದ್ಮಿ ಪಕ್ಷದ ಜೊತೆ ಹೆಜ್ಜೆ ಹಾಕಿದ್ದಾರೆ. ಪರಿಣಾಮವಾಗಿ ದೆಹಲಿಯ ಚುನಾವಣೆ ಹಲವು ಚಾರಿತ್ರಿಕ ದಾಖಲೆಗಳನ್ನು ಮೆರೆದಿದೆ.

ಕಳೆದ ಮೂರು ಚುನಾವಣೆಗಳಲ್ಲಿ ಸತತ ಹ್ಯಾಟ್ರಿಕ್ ಬಾರಿಸಿದ್ದ ಕಾಂಗ್ರೆಸ್ ಪಕ್ಷ ಆಮ್‌ಆದ್ಮಿ ಪೊರಕೆಯ ಹೊಡೆತಕ್ಕೆ ಸಿಲುಕಿ ಒಂದು ಸೀಟನ್ನೂ ಗೆಲ್ಲಲಾಗದೆ ಧೂಳೀಪಟ...
ತಮಗೆ ಮತ ಹಾಕಿದ ಜನರಿಗಾಗಿ ಏನನ್ನೂ ಮ...
ಕೇವಲ ತಮ್ಮ ಗತವೈಭವದ ಕಾರಣಕ್ಕೆ ...
ಯಾವಾಗಲೂ ತಮಗೆ ಋಣಿಗಳಾಗಿರಬೇಕೆಂದು ನಿರೀ...
ಕಾಂಗ್ರೆಸ್ ಪಕ್ಷಕ್ಕೆ ಇದು ತಕ್ಕ ಶಾಸ್ತಿಯೇ ಸರಿ.

ಈ ಬಾರಿ ಎಎಪಿ ಗಳಿಸಿದ್ದು 67 ಸ್ಥಾನಗಳು, ...
54.3ರಷ್ಟು ಮತಗಳು. 1950ರ ನಂತರದ ದೆಹ...
ಇತಿಹಾಸದಲ್ಲಿ ಇದು ಅದ್ವಿತೀಯ. ಸಿಕ್ಕಿಂ ...
ತಮಿಳುನಾಡಿನ ಒಂದೆರಡು ಉದಾಹರಣೆಗ...
ಹೊರತುಪಡಿಸಿದರೆ ಇಷ್ಟೊಂದು ಪ್ರಮಾಣದ ಧ್ರುವಿ...
ಇಡೀ ದೇಶದಲ್ಲೇ ಆಗಿಲ್ಲ, ಇಂಥಾ ಧ್ರುವೀ...
ಸಾಧ್ಯವಾಗಿದ್ದಾದರೂ ಹೇಗೆ? ಇದರ ಹಿ...
ಕಾರಣಗಳೇನು?

ಮೋದಿ ಮೋಡಿಯ ನಿಜಬಣ್ಣ...

ಮೊದಲನೆಯದಾಗಿ, ಮೋದಿ ವಿಚಾರ...
ನೋಡೋಣ. ಕಳೆದ ಬಾರಿಯ ಬಿಜೆಪಿಯ ಅಭೂತಪ...
ಗೆಲುವಿಗೆ ಮುಖ್ಯ ಕಾರಣ ಮೋದಿ ಕೊಟ್ಟಿದ್ದ ಆಶ್ವಾಸ...

ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೇನೆ, ಬೆಲೆ...
ನಿಯಂತ್ರಿಸುತ್ತೇನೆ, ನೂರು ದಿನಗಳಲ್ಲಿ ಕಪ್ಪು ಹಣ ವ...
ತರುತ್ತೇನೆ, ತಾನೊಬ್ಬ ಚಾಯ್‌ವಾಲಾ, ಬಡ...
ಕಷ್ಟಗಳೇನೆಂದು ತನಗೆ ಚೆನ್ನಾಗಿ ಗೊತ್ತು, ಬ...
ನಿರ್ಮೂಲನೆಯೇ ತನ್ನ ಗುರಿ ಮುಂತಾದ ಬಣ್ಣ...
ಮಾತುಗಳಿಂದ ಮಂಕುಬೂದಿ ಎರಚಿದ್ದ. ...
ಮತದಾರರು ಈ ಮಾತನ್ನು ನಂಬಿ ಮತ ಹಾಕಿ...

ನಂತರ ಮಾಡಿದ್ದೇನು? ದೆಹಲಿ ಫಲಿತಾಂಶದ ...
ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅಣ್ಣಾ ಹಜಾರೆ ಈ...
ಹೇಳಿರುವ ಮಾತುಗಳನ್ನೇ ಕೇಳಿ. "ಭ್ರಷ್ಟಾಚಾರ ನಿರ್ಮೂ...
ಮಾಡ್ತೇವೆ, ಬೆಲೆಯೇರಿಕೆ ನಿಯಂತ್ರಣ ಮಾಡ್ತೇವೆ ...
ಹೇಳಿ ಓಟು ಪಡೆದು ಜನತೆಯ ವಿಶ್ವಾಸಕ್ಕೆ ದ...
ಬಗೆದಿದ್ದಾರೆ. ಕಪ್ಪುಹಣ ವಾಪಸ್ ತಂದು ಪ್ರತಿಯೊ...
ಅಕೌಂಟಿಗೂ 15 ಲಕ್ಷ ರೂ ಕೊಡುತ್ತೇವೆಂದರು...
ಪೈಸೆಯನ್ನೂ ಕೊಡಲಿಲ್ಲ. ಅದರ ಬದಲಿಗೆ ಹಿ...
ಸರ್ಕಾರಗಳಿಗಿಂತ ಹೆಚ್ಚಿನ ಮೋಸದ ಕೆಲಸದಲ್ಲಿ ತೊಡ...
ಬ್ರಿಟಿಷ್ ಸರ್ಕಾರವನ್ನು ಹೋಲುವಂತಹ ಭೂಸ್ವಾ...
ಕಾಯ್ದೆ ತಂದು ರೈತರನ್ನು ನಾಶ ಮಾಡಲು ಹೊರಟಿ...
ಕಚ್ಚಾತೈಲದ ಬೆಲೆ ಇಳಿಕೆಯಾದರೂ ಪೆಟ್ರೋಲ್ ...
ಇಳಿಸದೆ ಜನರನ್ನು ಸುಲಿಗೆ ಮಾಡುತ್ತಿದ್ದಾರೆ. ಜನರ ಅ...
ಅಂತಾ ಹೇಳ್ಕೊಂಡು ದೊಡ್ಡ ದೊಡ್ಡ ಉದ್ಯಮಿಗಳ ಅ...
ಮಾಡ್ತಿದಾರೆ. ಇಂಥಾ ಪಕ್ಷಕ್ಕೆ ದೆಹಲಿ ಜನತೆ ತಕ್ಕ...
ಕಲಿಸಿದ್ದಾರೆ" ಎಂದು ಆವೇಶಭರಿತರಾಗಿ ಮಾತಾಡಿ...

ಅಣ್ಣಾ ಹೇಳಿದ್ದರಲ್ಲಿ ಎಳ್ಳಷ್ಟಾದರೂ ಲೋಪವಿದೆ...
ಈ ದೇಶದ ಪ್ರಧಾನ ಸೇವಕ ಅಧಿಕಾರಕ್ಕೆ ಬಂದು ...
ತಿಂಗಳು ಕಳೆದರೂ ಪುಕ್ಕಟ್ಟೆ ಭಾಷಣ ಮಾಡಿದ್ದು, ...
ಹಿಡಿದು ಪೋಸು ಕೊಟ್ಟಿದ್ದು, ವಿದೇಶಿ ಪ್ರವಾಸ ಮಾ...
ಒಬಾಮ ಜೊತೆ ಟಿತಣ ಮಾಡಿದ್ದು ಬಿಟ್ಟರೆ ಈ ದ...
ಆಮ್ ಆದ್ಮಿಗಳ ಒಳಿತಿಗಾಗಿ ಮಾಡಿದ್ದೇನೂ ಇಲ್ಲ, ಬ...
ಅಧಿಕಾರದ ಮದದಲ್ಲಿ ಮೆರೆಯುತ್ತಿರುವ 56 ...
ಎದೆಯ ಪ್ರಧಾನಿ ಗಣರಾಜ್ಯೋತ್ಸವದ ಒಂದೇ ದಿನ...
10 ಲಕ್ಷ ಬೆಲೆಯ 4 ಸೂಟುಗಳನ್ನು ಬದಲಿಸಿ...
ಅದರಲ್ಲಿ ಚಿನ್ನದ ಜರಿಯಲ್ಲಿ ತನ್ನ ಹೆಸ...
ಬರೆಸಿಕೊಂಡಿದ್ದರು. ಒಂದೊತ್ತಿನ ಊಟಕ್ಕೆ ಪರದಾಡು...
ಈ ದೇಶದ ಆಮ್‌ಆದ್ಮಿಗಳಿಗೆ ಮೋದಿಯ ಗೋ...
ಬಣ್ಣ ದಿನೇದಿನೇ ಸ್ಪಷ್ಟಗೊಳ್ಳುತ್ತಾ ಹೋಯಿತು.

ಮತ್ತೊಂದು ಕಡೆ ಇವರ ಕೇಸರಿ ಕೂಟದವರು ...
ವಾಪಸಿ, ಲವ್ ಜಿಹಾದ್, ಗೋಡ್ಸೆ ದೇಶಭಕ್ತ ಮು...
ವಿವಾದಗಳನ್ನು ಹುಟ್ಟುಹಾಕಿ ಸಮಾಜದಲ್ಲಿ ಕೋ...
ಕಿಚ್ಚೆಬ್ಬಿಸುವಲ್ಲಿ ನಿರತರಾಗಿದ್ದಾರೆ.

ಈ ಎಲ್ಲದರ ಪರಿಣಾಮವಾಗಿ ಲೋಕ...
ಚುನಾವಣೆಯಲ್ಲಿ ಮೋದಿ ಮೋಡಿಗೆ ಒಳಗಾಗಿದ್ದ ...

ಎ.ಕೆ. ಬಗ್ಗೆ ಒಂದೆರಡು ಮಾತು

ಅರವಿಂದ್ ಕೇಜ್ರಿವಾಲ್ ಮೂಲತಃ ಆದಾಯ ತೆರಿಗೆ ಇಲಾಖೆಯಲ್ಲಿ ಜಾಯಿಂಟ್ ಕಮಿಷನರ್ ಹುದ್ದೆಯಲ್ಲಿದ್ದವರು. ನೌಕರಿಗೆ ಎರಡು ವರ್ಷ ರಜೆ ಪಡೆದು ಮದರ್ ತೆರೆಸಾ, ರಾಮಕೃಷ್ಣ ಮಿಷನ್ ಮುಂತಾದ ಕಡೆ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಅದು ಅವರಿಗೆ ತೃಪ್ತಿ ಕೊಡಲಿಲ್ಲ, ನಂತರ ನೌಕರಿಗೆ ರಾಜೀನಾಮೆ ನೀಡಿ 2001ರಲ್ಲಿ 'ಪರಿವರ್ತನ್' ಎಂಬ ಸ್ವಯಂಸೇವಾ ಸಂಸ್ಥೆ ಶುರು ಮಾಡಿದರು.

ಅದರ ಮೂಲಕ ದೆಹಲಿ ಮತ್ತು ಸುತ್ತಮುತ್ತಲ ಕೊಳಗೇರಿಗಳಲ್ಲಿ ನಾನಾ ಕಾರ್ಯಗಳನ್ನು ಹಮ್ಮಿಕೊಂಡರು. ಇತರ ಸಮಾನ ಮನಸ್ಕರೊಂದಿಗೆ ಸೇರಿ ಮಾಹಿತಿ ಹಕ್ಕು ಕಾಯಿದೆ ಜಾರಿಗಾಗಿ ಹೋರಾಡಿದರು.

ತಮಗೆ ಸಿಕ್ಕ ಮ್ಯಾಗ್ಸೆಸ್ಸೆ ಅವಾರ್ಡ್‌ನಿಂದ ಬಂದ 35 ಲಕ್ಷ ಹಣವನ್ನು ಚಳವಳಿ ನಿರ್ಮಾಣಕ್ಕಾಗಿ ತೊಡಗಿಸಿದ್ದಾರೆ.


ಅಣ್ಣಾ ಹಜಾರೆ ನೇತೃತ್ವದಲ್ಲಿ ಇಂಡಿಯಾ ಎಗೆನೆಸ್ಟ್ ಕರಪ್ಷನ್ ಸಂಘಟನೆ ರೂಪಿಸುವಲ್ಲಿ ಹಾಗೂ ಜನ ಲೋಕಪಾಲ ಮಸೂದೆಯ ಕರಡು ತಯಾರಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಅದರ ಜಾರಿಗಾಗಿ ಒತ್ತಾಯಿಸಿ ತನ್ನ ಅನಾರೋಗ್ಯವನ್ನೂ ಲೆಕ್ಕಿಸದೆ ಆಮರಣಾಂತ ಉಪವಾಸ ಕುಳಿತಿದ್ದರು.


ಅಣ್ಣಾ ಹಜಾರೆ ಚಳವಳಿಯಿಂದ ಉಂಟಾದ ಪಾಸಿಟಿವ್ ಪರಿಣಾಮವನ್ನು ಬಳಸಿಕೊಂಡು ಆಮ್‌ಆದ್ಮಿ ಪಾರ್ಟಿ ಕಟ್ಟಿದ್ದಾರೆ.


ತನ್ನ ಉಸಿರಿರುವವರೆಗೆ ಜನರ ಸೇವೆ ಮಾಡುವುದೇ ತನ್ನ ಗುರಿ ಎನ್ನುವ ಅವರ ಮಾತನ್ನು ಅನುಮಾನಿಸಲು ಅಂಥಾ ಬಲವಾದ ಕಾರಣಗಳು ಸದ್ಯಕ್ಕೆ ಇಲ್ಲ ಎನ್ನಬಹುದು.



ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ಪತ್ರಿಕೆಗಳ ಮುಖಪುಟ ಅಲಂಕರಿಸಿದ ಬಿಜೆಪಿ. ಅದೇಸ್ಥಾನವನ್ನು ಪುಕ್ಕಟೆಯಾಗಿ ಪಡೆದ ಆಪ್







'ಮಫ್ಲರ್ ಮ್ಯಾನ್' ಎಂಬ ಲೇವಡಿಯನ್ನೇ ಭ್ರಷ್ಟಾಚಾರದ ವಿರುದ್ಧದ ತನ್ನ ಅಸ್ತ್ರವಾಗಿ ಪರಿವರ್ತಿಸಿದ ಆಪ್ ಚಮತ್ಕಾರ

ಂದ ದೂರವಾಗಿ ಆಮ್ ಆದ್ಮಿ ಕಡೆಗೆ ವಾಲಲು
ವಾಗಿದೆ.

ಕಾಂಗ್ರೆಸ್‌ನ ದುಃಸ್ಥಿತಿ

ಇದೇ ಸಂದರ್ಭದಲ್ಲಿ ಕಾಂಗ್ರೆಸ್‌ನ ಪರಿಸ್ಥಿತಿ ಏನಾಗಿದೆ? ಂಪರಿಕವಾಗಿ ಮುಸ್ಲಿಂ ಮತಗಳನ್ನು ಗಳಿಸುತ್ತಾ ತ್ತಿರುವ ಕಾಂಗ್ರೆಸ್, ಅವರನ್ನು ಕೇವಲ ಓಟುಬ್ಯಾಂಕ್ ಬಳಸಿಕೊಳ್ಳುತ್ತಿದೆಯೇ ವಿನಃ ಅವರ ಏಳ್ಗೆಗಾಗಿ ದಿದ್ದು ತೀರಾ ಸಣ್ಣದೆಂದೇ ಹೇಳಬೇಕು. ಕನಿಷ್ಠ ಮುದಾಯವನ್ನು ತಹಬಂದಿಗೆ ತರುವ ಕೆಲಸವನ್ನಾದರೂ ದಿದೆಯೇ ಎಂದರೆ ಅದೂ ಇಲ್ಲ. ಕಾಂಗ್ರೆಸ್‌ನ ಇಂಥಾ ನೀತಿ ಕೆಲಸದಿಂದ ದೆಹಲಿಯ ಮುಸ್ಲಿಮರು ಬೇಸತ್ತು ಗಿದ್ದರು. ಹೀಗಾಗಿ ದೆಹಲಿ ಮುಸ್ಲಿಮರು ಈ ಬಾರಿ ಕಾಂಗ್ರೆಸ್ ನಿಷ್ಠೆಯನ್ನು ಬದಲಿಸಿ ಆಮ್‌ಆದ್ಮಿಯ ತುಳಿದಿದ್ದಾರೆ. ಉದಾಹರಣೆಗೆ ಮುಸ್ಲಿಂ ಹುಳ್ಳವಿರುವ ಚಾಂದನಿ ಚೌಕ್, ಮಟಿಯಾ ಮಹಲ್ ತ್ತು ಸೀಲಂಪುರ ಕ್ಷೇತ್ರಗಳಲ್ಲಿ ಎಎಪಿ ಅಭ್ಯರ್ಥಿಗಳು ಅಂತರದಿಂದ ಜಯಭೇರಿ ಬಾರಿಸಿದ್ದಾರೆ.

ಇನ್ನು ಗಣನೀಯ ಸಂಖ್ಯೆಯಲ್ಲಿರುವ ದಲಿತರ ಮತಗಳು ಹಿಂದೆ ಕಾಂಗ್ರೆಸ್ ಮತ್ತು ಬಿಎಸ್‌ಪಿ ಮಧ್ಯೆ ಚಿಹೋಗುತ್ತಿದ್ದವು. ಇಂದಿನ ಈ ಚಾರಿತ್ರಿಕ ನಾವಣೆಯಲ್ಲಿ ಎಎಪಿ ಸಾರಾಸಗಟಾಗಿ ದಲಿತರ ವಿಶ್ವಾಸ ಸಿರುವುದು ಕಂಡುಬಂದಿದೆ. ಈ ಎಲ್ಲದರ ಣಾಮವಾಗಿ ಎಲ್ಲ ಮೀಸಲು ಕ್ಷೇತ್ರಗಳಲ್ಲೂ ಎಎಪಿ ಭ್ಯರ್ಥಿಗಳೇ ಆರಿಸಿ ಬಂದಿದ್ದಾರೆ. ಇದರ ಮತ್ತೊಂದು ಪರಿಣಾಮವಾಗಿ ಕಾಂಗ್ರೆಸ್‌ನ ಮತಗಳಿಕೆ ಪ್ರಮಾಣ ಶೇಕಡ .8ಕ್ಕೆ ಕುಸಿದಿದ್ದರೆ, ಬಿಎಸ್‌ಪಿ 0.6 ಕ್ಕೆ ಕುಸಿದಿದೆ.

ಚುನಾವಣೆಯ ಒಂದು ವಾರದ ಮೊದಲು ಟಿವಿ ವಾಹಿನಿಯೊಂದರಲ್ಲಿ ಮಾತಾಡಿದ್ದ ಎಎಪಿ ವಕ್ತಾರ ಯೋಗೇಂದ್ರ ಯಾದವ್ ಹೀಗೆ ವಿಶ್ಲೇಷಿಸಿದ್ದರು: "ಎಎಪಿ ದೆಹಲಿಯ ದಲಿತರ ಅತ್ಯಂತ ನೆಚ್ಚಿನ ಪಕ್ಷವಾಗಿರುವುದು ನನಗೆ ಬಹಳ ಖುಷಿ ತಂದಿದೆ. ಹಾಗೆಯೇ ಬಹಳ ದೀರ್ಘ ಕಾಲದ ನಂತರ ದೆಹಲಿಯ ಮುಸ್ಲಿಂ ಮತಗಳ ಮೇಲಿನ ಕಾಂಗ್ರೆಸ್ ಏಕಸ್ವಾಮ್ಯತೆಗೆ ಸವಾಲೆಸೆಯುವ ನರು(ಎಎಪಿ) ಬಂದಿದ್ದಾರೆ."

ಆಮ್ ಆದ್ಮಿಯ ಸಾಮಾಜಿಕ ನೆಲೆ

ಆಮ್ ಆದ್ಮಿಯ ಜನಬೆಂಬಲದ ನೆಲೆ ಯಾವುದು? ಹುತೇಕ ಸಾಮಾಜಿಕ ಚಿಂತಕರು ಎಎಪಿ ಮಧ್ಯಮ ರ್ಗ ಬೆಂಬಲಿತ ಪಕ್ಷ ಎಂದು ವಿಶ್ಲೇಷಿಸಿದ್ದಾರೆ. ಈ ತು ಬಹುಮಟ್ಟಿಗೆ ನಿಜ. ಎಎಪಿಯ ವಿವಿಧ ಶ್ರೇಣಿಗಳಲ್ಲಿ ತ್ತಿಸುರರು, ಮಾನವ ಹಕ್ಕು, ಮಹಿಳಾ ಹಕ್ಕು, ಮಕ್ಕಳ ಕ್ಕು, ಮಾಹಿತಿ ಹಕ್ಕು, ಮುಂತಾದ ಸಾಮಾಜಿಕ ರ್ಯಕರ್ತರಿದ್ದಾರೆ. ಶಾಲಾಕಾಲೇಜುಗಳ ಶಿಕ್ಷಕರು ಹಾಗೂ ದ್ಯಾರ್ಥಿಗಳ ಸಮುದಾಯವೂ ಎಎಪಿ ವ್ಯಾಪಕ ಬೆಂಬಲ ನೀಡಿದೆ.

ಆದರೆ ಇದು ಅರ್ಧ ಸತ್ಯ ಮಾತ್ರ. ಎಎಪಿ ತನ್ನ ಧ್ಯಮ ವರ್ಗದ ಬೆಂಬಲಕ್ಕೆ ಮಾತ್ರ ಸೀಮಿತವಾಗಿ ಸಿದಿಲ್ಲ. ಮಧ್ಯಮ ವರ್ಗದ ಒಟ್ಟಿಲೆಯ ಕಾರ್ಯಕರ್ತರ ಸಿದ್ಧ ಪಡೆಯನ್ನು ಕ್ರಿಯೆಯಲ್ಲಿ ತೊಡಗಿಸಿಕೊಂಡ ಎಎಪಿ ತನ್ನ ಬಡಬಗ್ಗರನ್ನು ತಲುಪುವಲ್ಲಿ ಯಶಸ್ವಿಯಾಗಿದೆ.

ಅರವಿಂದ್ ಕೇಜ್ರಿವಾಲ್ ಮುಂತಾದವರು ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ಧುಮುಕುವ ಮುಂಚಿನಿಂದಲೂ ವಿವಿಧ ಸ್ಲಂಗಳಲ್ಲಿ ಕ್ರಿಯಾಶೀಲವಾಗಿದ್ದವರು. ಆ ಅನುಭವವನ್ನು ಬಳಸಿಕೊಂಡು ಅಸಂಘಟಿತ ವಲಯದ ಕಟ್ಟಡ ಕಾರ್ಮಿಕರು, ವಲಸೆ ಕಾರ್ಮಿಕರು, ಮನೆಗೆಲಸದವರು, ಹಮಾಲಿಗಳು, ಸೈಕಲ್ ರಿಕ್ಷಾ ತುಳಿಯುವವರು ಮುಂತಾದ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಕರೆಂಟ್ ಸಮಸ್ಯೆ ಕುಡಿವ ನೀರಿನ ಸಮಸ್ಯೆ ರೇಷನ್ ಕಾರ್ಡ್ ಸಮಸ್ಯೆ ಶಾಲೆಯ ಫೀಜು-ಡೋನೇಷನ್ ಸಮಸ್ಯೆ ಪೋಲೀಸ್ ಕಿರುಕುಳದ ಸಮಸ್ಯೆ ಮುಂತಾದ ಹತ್ತು ಹಲವು ಸಮಸ್ಯೆಗಳ ವಿರುದ್ಧ ದನಿಯೆತ್ತಿದ್ದಾರೆ. ಅವರ ವಿಶ್ವಾಸವನ್ನು ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗೆ ದೆಹಲಿಯ ಜುಗ್ಗಿ (ಕೊಳಗೇರಿ)ಗಳು ಇಂದು ಎಎಪಿಯ ಭದ್ರಕೋಟೆಗಳಾಗಿ ಪರಿಣಮಿಸಿವೆ.


ಎಎಪಿ ಪಾಲಿಗೆ ಎಲ್ಲಕ್ಕಿಂತ ದೊಡ್ಡ ಶಕ್ತಿಯಾಗಿ ಬಂದಿದ್ದು ಆಟೋ ಚಾಲಕರು. ಹೇಳೋರು ಕೇಳೋರು ಇಲ್ಲದ ದೆಹಲಿ ಪೋಲೀಸರಿಗೆ ಅನಾದಿಯಿಂದಲೂ ಆಟೋ ಚಾಲಕರು ಆದಾಯದ ಪ್ರಮುಖ ಮೂಲ. ಪೋಲೀಸರ ನಿತ್ಯ ಕಿರುಕುಳದಿಂದ ಬೇಸತ್ತಿರುವ ಆಟೋವಾಲಾಗಳ ಬೆಂಬಲಕ್ಕೆ ಎಎಪಿ ನಿಂತಿದೆ. ಆಟೋವಾಲಗಳ ಸೇರ್ಪಡೆ ಕೇವಲ ಸಂಖ್ಯಾಬಲ ಅಥವಾ ಓಟಿನ ದೃಷ್ಟಿಯಿಂದ ಮಾತ್ರವಲ್ಲ; ಎಎಪಿ ಕಾರ್ಯಕರ್ತರ ಹೆಗಲಿಗೆ ಹೆಗಲಾಗಿ ಈ ವರ್ಗ ಕೆಲಸ ಮಾಡಿದೆ. ಇದಕ್ಕಾಗಿ ಆಟೋವಾಲ ಆದ್ಮಿ ಪಾರ್ಟಿ ಎಂಬ ಸಂಘಟನೆಯೂ ರೂಪ ತಾಳಿದೆ.

ಸುಶಿಕ್ಷಿತ ಮಧ್ಯಮವರ್ಗದ ಹಿನ್ನೆಲೆಯ ಎಎಪಿ ಪಕ್ಷ ಆರೆಸ್ಸೆಸ್-ಬಿಜೆಪಿ ಅಥವಾ ಇನ್ನಿತರ ಪಕ್ಷಗಳ ಪುಂಡಾಟಿಕೆಗೆ ಕಡಿವಾಣ ಹಾಕುವಲ್ಲಿ ಈ ಸಂಘಟನೆ ಪ್ರಮುಖ ಪಾತ್ರ ವಹಿಸಿದೆ. ಕೋಮುವಾದಿ ಶಕ್ತಿಗಳನ್ನು ಬೀದಿಗಳಲ್ಲಿ ಎದುರಿಸುವ ಮಿಲಿಟೆನ್ಸಿಯನ್ನು ತೋರದೇ ಹೋಗಿದ್ದರೆ ಬಹುಶಃ ಎಎಪಿಯ ಬೆಳವಣಿಗೆಗೆ ಅದೇ ಒಂದು ತೊಡಕಾಗಿ ಪರಿಣಮಿಸುತ್ತಿತ್ತು ಎನ್ನಬಹುದು.

ಜಾತಿ/ಕೋಮು ರಾಜಕೀಯದ ಬದಲಿಗೆ ವರ್ಗ ರಾಜಕೀಯ

ಈ ಬಾರಿಯ ಚುನಾವಣೆಯಲ್ಲಿ ನಿಚ್ಚಳವಾಗಿ ಕಂಡುಬಂದಿರುವ ವಿಶೇಷವಾದ ವಿದ್ಯಮಾನವಿದು. ಕಮ್ಯುನಿಸ್ಟ್ ಪಕ್ಷಗಳ ಕೆಲವೊಂದು ಉದಾಹರಣೆಯನ್ನು ಹೊರತುಪಡಿಸಿದರೆ ಇಡೀ ದೇಶದ ಚುನಾವಣಾ ಇತಿಹಾಸ ಜಾತಿ ಮತ್ತು ಕೋಮುಗಳ ಆಧಾರದಲ್ಲಿ ವಿಭಜಿತವಾಗಿರುವುದನ್ನು ಯಾರೂ ಅಲ್ಲಗಳೆಯುತ್ತಿಲ್ಲ. ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಜಾತಿ ಲೆಕ್ಕಾಚಾರ (ಕ್ಯಾಸ್ಟ್ ಕೆಮಿಸ್ಟ್ರಿ) ಚುನಾವಣಾ ರಣತಂತ್ರದ ಹೃದಯ ಭಾಗದಂತೆ. ಅಮಿತ್ ಶಾನ ಚಾಣಾಕ್ಯ ನೀತಿಯೂ ಬಹುತೇಕ ಅವಲಂಬಿಸಿರುವುದು ಇದೇ ಕ್ಯಾಸ್ಟ್ ಕೆಮಿಸ್ಟ್ರಿಯನ್ನೇ.

ಆದರೆ ಈ ಬಾರಿಯ ಎಎಪಿಯ ಗೆಲುವಿನಲ್ಲಿ ಜಾತಿ ಅಥವಾ ಕೋಮುವಾದದ ಪ್ರಭಾವ ಇಲ್ಲವೆಂದೇ ಹೇಳಬೇಕು. ಉದಾ : ಅಕಾಲಿದಳಕ್ಕೆ ಪಾರಂಪರಿಕವಾಗಿದ್ದ ಸಿಖ್ಖರ ಮತಗಳನ್ನು ಈ ಬಾರಿ ಎಎಪಿ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಜಾಟ್ ಜಾತಿಯ ಮತಗಳನ್ನೆ ನೆಚ್ಚಿಕೊಂಡಿದ್ದ ಐಎನ್‌ಎಲ್‌ಡಿ ಪಕ್ಷದ ಮತಗಳೂ ಎಎಪಿ



ಕಡೆ ಹರಿದಿರುವುದು ನಿಚ್ಚಳ. ಬಿಎಸ್‌ಪಿಯದೂ ಅದೇ ಕತೆ.

ಹೀಗೆ ಪಾರಂಪರಿಕ ಜಾತಿ/ ಕೋಮು ಮತಗಳು ಎಎಪಿ ಕಡೆ ಹರಿಯಲು ಕಾರಣ ಅದು ಮುಂದೆ ತಂದಿರುವ ವಿಚಾರಗಳು. ಜನಸಾಮಾನ್ಯರನ್ನು ನಿತ್ಯ ಬಾಧಿಸುತ್ತಿರುವ ಕರೆಂಟ್, ನೀರು, ರಸ್ತೆ ಮುಂತಾದ ಮೂಲ ಸೌಕರ್ಯಗಳು, ಭ್ರಷ್ಟಾಚಾರ, ಬೆಲೆಯೇರಿಕೆ, ಮಹಿಳೆಯರ ಸುರಕ್ಷತೆ, ಪೋಲೀಸ್ ಕಿರುಕುಳ ಇತ್ಯಾದಿ ಇತ್ಯಾದಿ ಹತ್ತಾರು ಅಂಶಗಳನ್ನು ಪರಿಹರಿಸುವ ಭರವಸೆಯೊಂದಿಗೆ ಎಎಪಿ ಜನರ ಮುಂದೆ ಬಂದಿದೆ. ಇಂಥಾ ದೈನಂದಿನ ಸಮಸ್ಯೆಗಳಿಂದ ನರಳುತ್ತಿರುವ ಎಲ್ಲ ಜಾತಿ/ ಕೋಮುಗಳ ಬಹುಸಂಖ್ಯಾತ ಜನತೆ ಎಎಪಿಗೆ ಮತ ಚಲಾಯಿಸುವ ಮೂಲಕ ತಮ್ಮ ವರ್ಗದ ಆಕಾಂಕ್ಷೆಯನ್ನು ಪ್ರದರ್ಶಿಸಿದ್ದಾರೆ ಎನ್ನಬಹುದು.

ಇದಕ್ಕೆ ಮತ್ತೊಂದು ಸ್ಪಷ್ಟ ಉದಾಹರಣೆ ವಿದ್ಯುತ್ ಬಿಲ್‌ಗೆ ಸಂಬಂಧಿಸಿದ್ದು. ದೆಹಲಿಯ ವಿದ್ಯುತ್ ಸರಬರಾಜನ್ನು ಸಂಪೂರ್ಣ ಖಾಸಗೀಕರಣ ಮಾಡಲಾಗಿದೆ. ಈ ಡೀಲಿಂಗ್‌ನಲ್ಲಿ ಅನಿಲ್ ಅಂಬಾನಿಯದು 70% ಪಾಲು. ಉಳಿದದ್ದು ಟಾಟಾ ಮುಂತಾದವರ ಪಾಲಾಗಿದೆ. ಕಾಂಗ್ರೆಸ್, ಬಿಜೆಪಿ ಎಲ್ಲರ ಆಡಳಿತದಲ್ಲೂ ಈ ಖಾಸಗಿ ಕಂಪನಿಗಳಿಗೆ ಮಣೆ ಹಾಕಿದ ಪರಿಣಾಮ ಇಂದು ಸಣ್ಣ ಗೂಡಿನಂತಿರುವ ಜುಗ್ಗಿಯ ಮನೆಗೂ ತಿಂಗಳಿಗೆ ಸರಾಸರಿ 1500 ರೂಪಾಯಿ ಬಿಲ್ ತೆರಬೇಕು.

ಕೇಜ್ರಿವಾಲ್ ಮತ್ತು ಎಎಪಿ ಮೊದಲಿನಿಂದಲೂ ಇಂಥಾ ಹಗಲು ದರೋಡೆಯನ್ನು ವಿರೋಧಿಸುತ್ತಾ ಬಂದಿದ್ದಾರೆ. ಆದರೆ ಬಿಜೆಪಿ ಮತ್ತು ಕಾಂಗ್ರೆಸ್‌ನ ನಾಯಕರು ಈ ಲೂಟಿಕೋರ ಕಂಪನಿಗಳೊಂದಿಗೆ ಹೊಂದಿರುವ ಸಂಬಂಧಗಳು, ಡೀಲಿಂಗ್‌ಗಳು ದಿನೇದಿನೇ ಬಯಲಿಗೆ ಬರುತ್ತಿವೆ. ಉದಾಹರಣೆಗೆ ಬಿಜೆಪಿಯ ಸಿಎಂ ಅಭ್ಯರ್ಥಿ ಸತೀಶ್ ಉಪಾಧ್ಯಾಯ ಮೀಟರ್ ಕಂಪನಿಗಳೊಂದಿಗೆ ಹೊಂದಿದ್ದ ಸಂಬಂಧವನ್ನು ಇತ್ತೀಚಿಗೆ ಎಎಪಿ ಬಯಲು ಮಾಡಿತ್ತು, ನಂತರ ಬಿಜೆಪಿ ಪಕ್ಷ ಸಿಎಂ ಅಭ್ಯರ್ಥಿಯಾಗಿ ಕಿರಣ್ ಬೇಡಿಯನ್ನು ತಂದಿದ್ದು, ಅದು ಆ ಪಕ್ಷಕ್ಕೆ ಬೂಮ್‌ರಾಂಗ್ ಆಗಿದ್ದು ಎಲ್ಲವೂ ಕೆಲವೇ ವಾರಗಳಲ್ಲಿ ನಡೆದು ಹೋಯಿತು.

ಹೀಗಾಗಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಕಾರ್ಪೋರೇಟ್ ಉದ್ಯಮಪತಿಗಳ ಏಜೆಂಟರಾಗಿದ್ದಾರೆ ಎಂಬ

ಸರಳ ಸತ್ಯ ದೆಹಲಿಯ ಆಮ್‌ಆದ್ಮಿಗಳಿಗೆ ಸ್ಪಷ್ಟಗೊಳ್ಳುತ್ತಿದ್ದಂತೆ ಎಎಪಿಯ ಬೆಂಬಲ ನೆಲೆ ಇನ್ನಷ್ಟು ವಿಸ್ತರಿಸುತ್ತಾ ಸಾಗಿದೆ.

ಚುನಾವಣೆಗೆ ಮುನ್ನ ಕೇಜ್ರಿವಾಲ್ ಹೇಳಿದ್ದ ಒಂದು ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಚುನಾವಣೆ ಕೇಜ್ರಿವಾಲ್ ಮತ್ತು ಮೋದಿಯ ನಡುವಿನ ಹಣಾಹಣಿಯೇ ಎಂಬ ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದ್ದರು. "ಮಾಧ್ಯಮದವರು ಒಮ್ಮೆ ಕೇಜ್ರಿವಾಲ್ - ಮೋದಿ ಜಿದ್ದಾಜಿದ್ದಿ ಅಂತೀರಿ, ಮತ್ತೊಮ್ಮೆ ಕೇಜ್ರಿವಾಲ್ - ಕಿರಣ್ ಬೇಡಿ ಜಿದ್ದಾಜಿದ್ದಿ ಅಂತೀರಿ. ಅದೆಲ್ಲಾ ನಿಮ್ಮ ಕಲ್ಪನೆ ಮಾತ್ರ. ವಾಸ್ತವದಲ್ಲಿ ನನಗೆ ಯಾರೊಂದಿಗೂ ವೈಯಕ್ತಿಕ ಜಿದ್ದಾಜಿದ್ದಿ ಇಲ್ಲ, ಈ ಚುನಾವಣೆ ಆಮ್‌ಆದ್ಮಿಗಳು ಎದುರಿಸುತ್ತಿರುವ ನಾನಾ ಸಮಸ್ಯೆಗಳ ಆಧಾರದಲ್ಲಿ ನಡೆಯುತ್ತಿದೆ. ಆ ಸಮಸ್ಯೆಗಳ ಪರಿಹಾರವೇ ಚುನಾವಣೆಯ ಕೇಂದ್ರ ಬಿಂದು."

ಈ ಮಾತು ಅಕ್ಷರಶಃ ಸತ್ಯ ದೆಹಲಿಯ ಈ ಚುನಾವಣೆ ಜನಸಾಮಾನ್ಯರ ಬದುಕಿಗೆ ಸಂಬಂಧಿಸಿದ ಹತ್ತಾರು ಪ್ರಶ್ನೆಗಳನ್ನು ಮುನ್ನೆಲೆಗೆ ತಂದಿದೆ. ಅಂಥಾ ವಿಶಾಲ ಅರ್ಥದಲ್ಲಿ ಇದಕ್ಕೊಂದು ವರ್ಗ ತಳಹದಿಯಿದೆ.

ಇಷ್ಟೆಲ್ಲಾ ಆದರೂ ಎಲ್ಲ ಸರಿಯಾದಂತಲ್ಲ. ಈ ದೇಶದ ಪ್ರಜಾತಂತ್ರದ ಉಳಿವು-ಅಳಿವುಗಳಿಗೆ ಗಂಭೀರ ಸವಾಲೊಡ್ಡುವ ಒಂದು ಅಂಶ ಈ ಬಾರಿಯ ದೆಹಲಿ ಚುನಾವಣೆಯಲ್ಲೂ ಕಂಡುಬಂದಿದೆ. ಬಿಜೆಪಿ ವಕ್ತಾರ ಸಂಜಯ್ ಕೌಲ್, ಅಧ್ಯಕ್ಷ ಸತೀಶ್ ಉಪಾಧ್ಯ ಮುಂತಾದ ಬಿಜೆಪಿ ಮುಖಂಡರು ಈ ಚುನಾವಣೆಯನ್ನು ವಿಶ್ಲೇಷಿಸಿದ ರೀತಿ ನೋಡಿ. "ದೆಹಲಿಯ ನಮ್ಮ ಪಾರಂಪರಿಕ ಭದ್ರಕೋಟೆ ಹಾಗೆ ಮುಂದುವರೆಯುತ್ತಿದೆ. ಈಗಲೂ ನಾವು 32% ಮತಗಳನ್ನು ಪಡೆದಿದ್ದೇವೆ. ಆದರೆ ಗೆಲ್ಲಲು ಬೇಕಾಗಿದ್ದ ಹೆಚ್ಚುವರಿ ಓಟುಗಳನ್ನು ಈ ಬಾರಿ ಪಡೆಯಲಾಗಲಿಲ್ಲ ಅಷ್ಟೆ."

ಒಂದು ರೀತಿಯಲ್ಲಿ ಬಿಜೆಪಿ ಮುಖಂಡರ ಈ ವಿಶ್ಲೇಷಣೆಯಲ್ಲಿ ತಥ್ಯವಿದೆ ಎನ್ನಬಹುದು. ಅದೇ ಇಂದಿನ ಬಹು ದೊಡ್ಡ ಸವಾಲು. ಆಮ್ ಆದ್ಮಿಯಾದಿಯಾಗಿ ಎಲ್ಲ ಪ್ರಗತಿಪರ, ಜಾತ್ಯತೀತ ಶಕ್ತಿಗಳೂ ತಲೆಕೆಡಿಸಿ ಕೊಳ್ಳಬೇಕಾದ ವಿಷಯವಿದು.


ಅಂತಿಮವಾಗಿ ಒಂದು ಮಾತು:

ದೆಹಲಿ ಚುನಾವಣೆ ರೋಗಗ್ರಸ್ತ ಕಾಂಗ್ರೆಸ್ ಹಾಗೂ ವಿನಾಶಕಾರಿ ಬಿಜೆಪಿಗಳಿಗೆ ಪಾಠ ಕಲಿಸಿರುವಂತೆಯೇ ಈ ದೇಶದ ಪ್ರಗತಿಪರ ಜನಪರ ಶಕ್ತಿಗಳಿಗೂ ಒಂದು ಒಳ್ಳೆಯ ಪಾಠ. ನಾವಿರುವ ಕಡೆಗೆ ಜನರು ಬರಬೇಕೆಂದು ನಿರೀಕ್ಷಿಸುವುದಕ್ಕಿಂತ ಜನರಿರುವ ಕಡೆಗೆ ನಾವು ಹೋಗಿ ನಿಲ್ಲಬೇಕು. ಅವರ ಕಲ್ಪನೆ/ಕನಸುಗಳಿಗೆ ಜೀವ ಕೊಡಬೇಕು. ಅವರ ವಿಶ್ವಾಸ ಗೆಲ್ಲಬೇಕು. ಅದಕ್ಕಾಗಿ ವಿನೂತನ - ಸೃಜನಶೀಲ ವಿಧಾನಗಳನ್ನು ಕಂಡುಕೊಳ್ಳಬೇಕು. ಹಾಗಾದರೆ ಜನರು ಬದಲಾವಣೆಯತ್ತ ಹೆಜ್ಜೆಹಾಕಲು ಸಿದ್ಧರಾಗಿದ್ದಾರೆ. ಆದರೆ ಎಎಪಿಯ ವಿದ್ಯಮಾನವನ್ನು ಕೇವಲ ಓಟುಗಳಿಸುವ ಚುನಾವಣಾ ವೇಳೆಯ ತಂತ್ರವೆಂದು ಅರ್ಥ ಮಾಡಿಕೊಂಡರೆ ನಮ್ಮನ್ನು ಎಎಪಿಯೂ ಕಾಪಾಡಲಾರದು ಕೇಜ್ರಿವಾಲರಿಂದಲೂ ಕಾಪಾಡಲು ಸಾಧ್ಯವಿಲ್ಲ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ




ಅಚ್ಚರಿ ಮೂಡಿಸುವಂತೆ ಗೆದ್ದ ಆಪ್ ಬಗ್ಗೆ ಪತ್ರಿಕೆಗಳು ವರದಿ ಮಾಡಿದ ರೀತಿ



ಬೆಂಗಳೂರಿನಲ್ಲಿ ಒಂದು ಜಾಹೀರಾತು ಸಂಸ್ಥೆಯನ್ನು ನಡೆಸುತ್ತಿರುವ ಕನ್ನಡಿಗ ವಿಶ್ವಾಸ್ ಶಿವಪುರ್ ಅಪ್ಪಟ ಜಾತ್ಯತೀತವಾದಿ ಮತ್ತು ಭ್ರಷ್ಟಾಚಾರ ವಿರೋಧಿ. ಈ ಕಾರಣಕ್ಕೇ ಅವರು ಮೊದಲಿನಿಂದಲೂ ಆಪ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿದ್ದಾರೆ. ದೇಶದ ಸಾವಿರಾರು ಸಾಮಾನ್ಯ ಜನರಂತೆ ವಿಶ್ವಾಸ್ ಕೂಡ ತಮ್ಮ ಸ್ವಂತ ವೆಚ್ಚದಲ್ಲಿ ದೆಹಲಿಗೆ ಹೋಗಿ ಅಲ್ಲಿ ಒಂದು ವಾರ ಆಪ್ ಪರ ಪ್ರಚಾರದಲ್ಲಿ ತೊಡಗಿದ್ದರು. ದೆಹಲಿಯಲ್ಲಿ ವಿಶ್ವಾಸ್ ಕಂಡಿದ್ದು ಅನುಭವಿಸಿದ್ದು ಅನ್ನಿಸಿದ್ದನ್ನು ಇಲ್ಲಿ ನಮ್ಮ ಓದುಗರಿಗಾಗಿ ದಾಖಲಿಸಿದ್ದಾರೆ.

ಮತದಾರರಿಂದ ಬಿಜೆಪಿಗೆ ಲಕ್ವಾ ಹೊಡೆತ!






ಮೊನ್ನೆ ದೆಹಲಿಯಲ್ಲಿ ಮತ ಎಣಿಕೆ ಪ್ರಾರಂಭವಾದ ದಿನ ಕೆಲವು ತಿಳಿಗೇಡಿ 'ರಾಜಕೀಯ ಪಂಡಿತರು' ಹವಾನಿಯಂತ್ರಿತ ಟಿವಿ ಸ್ಟುಡಿಯೋಗಳಲ್ಲಿ ಕೂತು ಬೆಳಗ್ಗೆ ಎಂಟು ಗಂಟೆಯಿಂದಲೇ ಮಹಾ ಗಾಂಭೀರ್ಯದಿಂದ ತಮ್ಮ ಚುನಾವಣಾ ವಿಶ್ಲೇಷಣೆಯನ್ನು ಶುರುಹಚ್ಚಿಕೊಂಡಿದ್ದರು. ಅವರೆಲ್ಲರ ಪ್ರಕಾರ ದೆಹಲಿಯಲ್ಲಿ ಬಿಜೆಪಿ ಮತ್ತು ಆಪ್ ನಡುವೆ ತೀಕ್ಷ್ಣವಾದ ಪೈಪೋಟಿ ಸಂಭವಿಸಲಿತ್ತು, ಆದರೆ ಒಂದು ಗಂಟೆಯ ನಂತರ ಚುನಾವಣಾ ಕಣದಲ್ಲಿ ಒಡ್ಡೊಡ್ಡಾಗಿ ತತ್ತರಿಸುತ್ತಿದ್ದ ದೈತ್ಯ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳಿಗೆ ಕೇವಲ ಎರಡು ವರ್ಷಗಳ ಹಿಂದೆ ಜನ್ಮವೆತ್ತ ಕೆಚ್ಚುಳ್ಳ ಆಪ್ ಸರಿಯಾಗಿ ಇಕ್ಕಲಿದೆ ಎಂಬ ಸೂಚನೆ ಸಿಗುತ್ತಿದ್ದಂತೆ ಆ ರಾಜಕೀಯ ಹೆಡ್ಡರು ತಮ್ಮ ರಾಗವನ್ನು ಬದಲಾಯಿಸಿದರು. ಪರಾಭವಗೊಂಡಿದ್ದ ಸರ್ವಾಧಿಕಾರಿಯನ್ನು ಕೈಬಿಟ್ಟ ಪಕ್ಷಾಂತರಿಗಳಂತೆ ಅವರೆಲ್ಲ ಆಪ್ ಯಶಸ್ಸು ಕುರಿತಂತೆ 'ಪ್ರಾಜ್ಞ' ವಿವರಣೆಗಳನ್ನು ಕೊಡಲಾರಂಭಿಸಿದರು.

ಈ ಗಾಂಪರ 'ಪ್ರಾಜ್ಞೆ' ಹಿನ್ನೋಟಕ್ಕೆ ಸಂಬಂಧಿಸಿದ್ದು. ಆದರೆ ನಿಜವಾಗಲೂ ಪ್ರಾಜ್ಞನಾದವನಿಗೆ ಮುನ್ನೋಟಕ್ಕೆ ಇರುತ್ತದೆ. ಆಪ್ ಪರವಾಗಿ ಪ್ರಚಾರದಲ್ಲಿ ತೊಡಗಲು ನನ್ನ ಅಳಿಯ ಸಮರ್ಥ್‌ನೊಂದಿಗೆ ನಾನು ದೆಹಲಿಗೆ ಹೋಗಿದ್ದಾಗ ಅಂತಹ ಹಲವಾರು ಪ್ರಾಜ್ಞರನ್ನು ಭೇಟಿಯಾದೆ. ನನ್ನ ಅನುಭವದ ಪ್ರಕಾರ ದೆಹಲಿಯ ಹತ್ತು ಜನರಲ್ಲಿ ಶೇಕಡಾ ಏಳು ಜನ ಆಪ್ ಪರ ಅಲೆ ಬೀಸುತ್ತಿರುವುದನ್ನು ಗ್ರಹಿಸಿದ್ದರು. ನಿಚ್ಚಳವಾಗಿ ಟಿವಿ ಚಾನೆಲ್‌ಗಳಲ್ಲಿ ಮಾತನಾಡುತ್ತಿದ್ದ 'ಪಂಡಿತ'ರಿಗಿಂತ ರಸ್ತೆಯಲ್ಲಿದ್ದ ಜನಸಾಮಾನ್ಯನಿಗೆ ರಾಜಕೀಯ ಹವಾ ಯಾವ ದಿಕ್ಕಿನತ್ತ ಬೀಸುತ್ತಿದೆ ಎಂಬುದರ ಬಗ್ಗೆ ಸ್ಪಷ್ಟ ಅರಿವಿತ್ತು.

ಆಪ್ ಪರವಾಗಿ ಪ್ರಚಾರದಲ್ಲಿ ಭಾಗವಹಿಸಲು ಭಾರತದ ವಿವಿಧ ಕಡೆಗಳಿಂದ ಸಾವಿರಾರು ಕಾಲಾಳುಗಳು ಸ್ವಯಂ ಇಚ್ಛೆಯಿಂದ ದೆಹಲಿಯಲ್ಲಿ ಜಮೆಗೊಂಡಿದ್ದರು. ಪ್ರತಿಷ್ಠಿತ ಐಐಟಿ ಸಂಸ್ಥೆಗಳ ಪ್ರತಿಭಾವಂತ ವಿದ್ಯಾರ್ಥಿಗಳು ಬಿಹಾರದ ಗ್ರಾಮಗಳಿಂದ ಬಂದಿದ್ದ ರೈತರೊಂದಿಗೆ ನಿಂತು ಮೆಟ್ರೋ ಸ್ಟೇಷನ್‌ಗಳಲ್ಲಿ ಆಪ್ ಟೋಪಿಗಳನ್ನು ಹಂಚುತ್ತಿದ್ದರು. ಪುಟ್ಟ ಮಕ್ಕಳನ್ನೂ ಕಟ್ಟಿಕೊಂಡು ಮಧ್ಯ ಪ್ರದೇಶದಿಂದ ಬಂದಿದ್ದ ಗೃಹಿಣಿಯರು ಊರುಗೋಲು ಹಿಡಿದಿದ್ದ ಹುಡುಗನೊಂದಿಗೆ ನಿಂತು 'ಪಾಂಚ್ ಸಾಲ್ ಕೇಜ್ರಿವಾಲ್' ಎಂಬ ಸ್ಲೋಗನ್‌ಅನ್ನು ಕೂಗುತ್ತಿದ್ದರು. ಮುಂಬೈನಿಂದ ಬಂದಿದ್ದ ಮಧ್ಯವಯಸ್ಕ ಮಹಿಳೆಯರು ಹಿಮಾಚಲ ಪ್ರದೇಶದ ಯುವತಿಯರೊಂದಿಗೆ ಜೊತೆಗೂಡಿ ಸಂಗೀತ ನಿರ್ದೇಶಕ ವಿಶಾಲ್ ದದ್ಲಾನಿ ಸಂಯೋಜಿಸಿದ್ದ ಆಪ್ ಚುನಾವಣಾ ಹಾಡಿಗೆ ರಸ್ತೆಗಳಲ್ಲಿ ಹೆಜ್ಜೆ ಹಾಕುತ್ತಿದ್ದರು. ಕನಾಟ್ ಪ್ಲೇಸ್ ಹತ್ತಿರ ತಮಿಳುನಾಡಿನಿಂದ ಬಂದಿದ್ದ ಹಿರಿಯ ಪುರುಷರು ರಾಜಸ್ಥಾನದ ಯುವಕರೊಂದಿಗೆ ಆಪ್ ಪೋಸ್ಟರ್‌ಗಳನ್ನು ತಮ್ಮ ತಲೆ ಮೇಲೆ ಎತ್ತಿ ಹಿಡಿದು ನಿಂತಿದ್ದರು. "ಹಾಗೆ ಎಷ್ಟು ಹೊತ್ತು ನಿಲ್ಲುತ್ತೀರಿ? ಕೈ ನೋಯುವುದಿಲ್ಲವೆ?" ಎಂದು ನಾನು ಅಲ್ಲಿದ್ದ ಒಬ್ಬನನ್ನು ಪ್ರಶ್ನಿಸಿದಾಗ ಆತ ಥಟ್ ಅಂತ "ಸಾರ್, ನಮ್ಮಲ್ಲಿರುವ ಉತ್ಸಾಹ ಎಲ್ಲ ನೋವನ್ನೂ ತೊಡೆದುಹಾಕುತ್ತದೆ. ಭಾರತದಲ್ಲಿ ಈಗ ಒಂದು ಕ್ರಾಂತಿ ನಡೆಯುತ್ತಿದೆ. ಇಪ್ಪತ್ತು ವರ್ಷಗಳ ನಂತರ ನಾನೂ ಈ ಕ್ರಾಂತಿಯಲ್ಲಿ ಭಾಗವಹಿಸಿದ್ದೆ ಎಂದು ಹೆಮ್ಮೆಯಿಂದ ನನ್ನ ಮಕ್ಕಳಿಗೆ ಹೇಳುತ್ತೇನೆ" ಎಂದು ಉತ್ತರಿಸಿದ!

ಈ ಕಾರಣಕ್ಕೇ ಯಾವುದೇ ಸ್ವಾರ್ಥದ ಅಭಿಲಾಶೆಗಳಿಲ್ಲದೆ ಮಧ್ಯ ಪ್ರದೇಶ, ಮೈಸೂರಿನಿಂದಲೂ ಬಂದಿದ್ದ ಜನ ಆಪ್ ಪಕ್ಷದ ಪರವಾಗಿ ನಿಂತದ್ದು. ಒಂದು ರೀತಿಯಲ್ಲಿ ಇದು ಬದಲಾವಣೆಗೆ ಹಂಬಲಿಸಿದ ಜನರ ನಿಸ್ವಾರ್ಥ ಮತ್ತು ಭಾವೋದ್ರಿಕ್ತ ಪಾಲುಗೊಳ್ಳುವಿಕೆಯಾಗಿತ್ತು.

ಸ್ವಸಂತೋಷದಿಂದ ಬಂದಿದ್ದ ಆಪ್ ತಂಡದ ಸದಸ್ಯರಲ್ಲಿದ್ದ ಉತ್ಸಾಹ ಬಿಜೆಪಿಯ ಕಾರ್ಯಕರ್ತರಲ್ಲಿ ಕಿಂಚಿತ್ತೂ ಇರಲಿಲ್ಲ. ಅವರೆಲ್ಲರೂ ಯಾಂತ್ರಿಕವಾಗಿ ಪ್ರಚಾರ ಕ್ರಿಯೆಯಲ್ಲಿ ತೊಡಗಿದ್ದರು. ರಾಜೀವ್ ಚೌಕದಲ್ಲಿ ಆಪ್ ಪ್ರಚಾರದಲ್ಲಿ ತೊಡಗಿದ್ದಾಗ ಒಮ್ಮೆ ಕುತೂಹಲದಿಂದ ನಾನು ತೊಟ್ಟಿದ್ದ ಆಪ್ ಟೋಪಿಯನ್ನು ಜೇಬಿನಲ್ಲಿ ಇಟ್ಟುಕೊಂಡು ಬಿಜೆಪಿಯ ಕಾರ್ಯಕರ್ತರಿದ್ದಲ್ಲಿಗೆ ಹೋಗಿ ಒಂದು ಕಲ್ಲು ಬೆಂಚಿನ ಮೇಲೆ ಕೂತೆ. ಸ್ಥಳೀಯ ಬಿಜೆಪಿ ಕಾರ್ಯಕರ್ತರು ಹೊರಗಿನಿಂದ ಬಂದಿದ್ದ ಕಾರ್ಯಕರ್ತರ ವಿರುದ್ಧ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರು. ಆದರಲ್ಲೂ ಕಿರಣ್ ಬೇಡಿಯನ್ನು ಅಚಾನಕ್ಕಾಗಿ ಅವರೆಲ್ಲರ ಮೇಲೆ ಪಕ್ಷದ ನಾಯಕರು ಹೇರಿದ್ದರ ವಿರುದ್ಧ ಅವರೆಲ್ಲ ಗೊಣಗಾಡುತ್ತಿದ್ದರು.






ಆಪ್ ಕಾರ್ಯಕರ್ತರಿಂದ ಪ್ರಚಾರ ಮತ್ತು ಫ್ಲಾಶ್ ಡ್ಯಾನ್ಸ್

ಒಂದು ಪ್ರಬಲ ಆದರ್ಶ ಸೂಜಿಗಲ್ಲಿನಂತೆ ಜನರನ್ನು ಆಕರ್ಷಿಸುತ್ತದೆ. ಪ್ರಾಮಾಣಿಕ ರಾಜಕೀಯ, ಸಹಭಾಗಿತ್ವದ ಪ್ರಜಾತಂತ್ರ, ವಂಶಾಡಳಿತರಹಿತ ನಿಲುವು, ಆಡಳಿತದಲ್ಲಿ ನವೀನ ಪ್ರಯೋಗಗಳು... ಆಪ್‌ನ ಈ ಎಲ್ಲ ಆದರ್ಶಗಳು ಜನರನ್ನು ಆಕರ್ಷಿಸುವ ಅಂತಹ ಸೂಜಿಗಲ್ಲುಗಳಾಗಿವೆ.

ಒಮ್ಮೆ ಆಕ್ರಮಣಕಾರಿ ಪ್ರವೃತ್ತಿಯ ಬಿಜೆಪಿ ಕಾರ್ಯಕರ್ತರು ಇಬ್ಬರು ಯುವತಿಯರನ್ನು ತಡೆದು ಮೋದಿಯ ಕಟ್‌ಔಟ್ ಜೊತೆಗೆ 'ಸೆಲ್ಫೀ' ತೆಗೆದುಕೊಳ್ಳಬೇಕೆಂದು ಅವರನ್ನು ಒತ್ತಾಯಿಸಿದರು. ಆ ಯುವತಿಯರು "ನಾವ್ಯಾಕೆ ಬಿಜೆಪಿಗೆ ಓಟ್ ಹಾಕಬೇಕು?" ಎಂದು ರೇಗಿ ಜಾಗ ಖಾಲಿ ಮಾಡಿದರು. ದೆಹಲಿಯಾದ್ಯಂತ ಜನರು ಇಂತಹ ಪ್ರಶ್ನೆಗಳನ್ನು ಕೇಳುತ್ತಿದ್ದರು. ಇನ್ನೊಮ್ಮೆ ಓರ್ವ ಸಾಹುಕಾರ್ತಿ ಹೆಂಗಸು ರಸ್ತೆಬದಿಯಲ್ಲಿ ತಿಂಡಿ ಮಾರುತ್ತಿದ್ದ ಯುವಕನನ್ನು "ನೀನು ಯಾಕೆ ಆಪ್ ಬೆಂಬಲಿಸುತ್ತೀಯಾ?" ಎಂದು ಜೋರು ಮಾಡಿದಳು. ಆ ಯುವಕನೋ ಸಂಕೋಚದಿಂದ ಅರೆ ನಗೆ ಬೀರಿ ಉತ್ತರಿಸದೆ ಸುಮ್ಮನಾದ. ಸಾಮಾನ್ಯವಾಗಿ ಕೆಳವರ್ಗದ ಜನರು ಮೇಲುವರ್ಗದ ಜನರ ಇಂತಹ ಜೋರು ಪ್ರಶ್ನೆಗಳ




ದೆಹಲಿಯಲ್ಲಿ ಪ್ರಚಾರದಲ್ಲಿ ತೊಡಗಿರುವ ವಿಶ್ವಾಸ್ ಶಿವಪುರ್



...ದೇ ಮೌನವಹಿಸುತ್ತಾರೆ. ಪ್ರಾಯಶಃ ಆ ಕಾರಣಕ್ಕೇ ...ಸರ್ವೇಗಳು ಆಪ್ ಪಕ್ಷಕ್ಕೆ ಇದ್ದ ಜನ ಬೆಂಬಲವನ್ನು ...ವಲ್ಲಿ ವಿಫಲವಾದವು. ಕಳೆದ ಬಾರಿ (2013ರಲ್ಲಿ) ...ಗಳು ಆಪ್ ಪಕ್ಷಕ್ಕೆ ನಾಲ್ಕು ಸೀಟುಗಳನ್ನು ...ಸಿಸಿದ್ದವು. ಆದರೆ ವಾಸ್ತವವಾಗಿ ಆಪ್ ಗೆದ್ದದ್ದು 28 ...ಗಳನ್ನು. ಹಾಗೆಯೇ ಈ ಬಾರಿಯೂ ಸರ್ವೇಗಳು ... ಹೆಚ್ಚೆಂದರೆ 53 ಸೀಟುಗಳು ಸಿಗುತ್ತವೆಂದು ...ದ್ದವು. ಆದರೆ ಕೊನೆಗೆ ಆಪ್ ಗೆದ್ದದ್ದು ಬರೋಬ್ಬರಿ ...ಟುಗಳನ್ನು.

...ತದಾನಕ್ಕೂ ಮುನ್ನ ದೆಹಲಿಯಲ್ಲಿ ಆಪ್ ಪರವಾಗಿ ...ಕ ಅಲೆ ಬೀಸುತ್ತಿತ್ತೆಂದರೆ ಒಮ್ಮೆ ಹರಕು ಬಟ್ಟೆಯಲ್ಲಿದ್ದ ...ನೊಬ್ಬ ಮೋದಿಯ ಕಟ್‌ಔಟ್‌ಅನ್ನು ನೆಲಕ್ಕೆ ದೂಡಿ ...ಚ್ ಸಾಲ್ ಕೇಜ್ರಿವಾಲ್' ಎಂದು ಚೀರುತ್ತಾ ...ಹೋದ. ಎಲ್ಲೆಡೆ ಜನರು ತಮ್ಮ ಕೈ ಚಾಚಿ, ಐದೂ ...ಗಳನ್ನು ಬೀಸುತ್ತಾ 'ಪಾಂಚ್ ಸಾಲ್ ಕೇಜ್ರಿವಾಲ್' ... ಜನಪ್ರಿಯ ಪದುಗಚ್ಛಗಳನ್ನು ಹೇಳುತ್ತಾ ಇತರರನ್ನು ...ಮಗೊಳ್ಳುತ್ತಿದ್ದರು. ಬಿಜೆಪಿಯ ಎರಡು ಬೆರಳುಗಳ ...ದ ಸನ್ನೆಯನ್ನು ಆಪ್ ಪರವಾದ ಐದು ಬೆರಳುಗಳು ...ಸಿಕೊಂಡಿದ್ದವು.

...ಲ್ಲಕ್ಕಿಂತ ಕಿರಣ್ ಬೇಡಿ ಸ್ಪರ್ಧಿಸಿದ್ದ ಕ್ಷೇತ್ರದಲ್ಲಿನ ... ಮಜಬೂತಾಗಿತ್ತು. ಆಪ್ ಪಕ್ಷದ ಸದಸ್ಯೆಯೂ, ...ವುಡ್ ನಟಿಯೂ ಆಗಿರುವ ಗುಲ್ ಪನಾಂಗ್ ...ದಾಗಿ ಮೊಳಗುತ್ತಿದ್ದ ಬೃಹತ್ ಮೋಟಾರ್ ಸೈಕಲ್ ... ಏರಿ ಹೋಗುತ್ತಿದ್ದರೆ ಆಕೆಯ ಹಿಂದೆ ಸಾವಿರಾರು ...ಗಳು ಪಕ್ಷದ ಬಾವುಟಗಳನ್ನು ಹಿಡಿದು ಓಡುತ್ತಿದ್ದರು. ...ತ್ರದ ಹಲವಾರು ಕಡೆ ಆಪ್ ಪರ ಜರುಗುತ್ತಿದ್ದ ... ಡ್ಯಾನ್ಸ್' (ಇದ್ದಕ್ಕಿದ್ದಂತೆ ಜನರಿಂದ ಕಿಕ್ಕಿರಿದ ಸ್ಥಳದಲ್ಲಿ ...ು ಜನ ಸೇರಿ ನೃತ್ಯಮಾಡುವುದು)ಗಳು, ಬೀದಿ ...ಗಳು, ಸಂಗೀತ ಗೋಷ್ಠಿಗಳು ಮತದಾರರನ್ನು ...ತ್ತಿದ್ದವು. ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿ ... ಬೇಡಿಯ ಕ್ಷೇತ್ರದಲ್ಲೂ ಆಪ್ ದಿಟ್ಟ ಸವಾಲು ...ತ್ತಿದೆ ಎಂಬ ಸಂದೇಶವನ್ನು ಸಾರುವುದೇ ಈ ಎಲ್ಲ ...ಟಕೆಗಳ ಉದ್ದೇಶವಾಗಿತ್ತು. ಫಲಿತಾಂಶ ಹೊರಬಿದ್ದು ... ಬೇಡಿ ಕೇವಲ ಎರಡೂವರೆ ಸಾವಿರ ಓಟುಗಳ ಅಂತರದಿಂದ ಸೋತಿದ್ದು ಗೊತ್ತಾದಾಗ ನಾನು ಆ ಕ್ಷೇತ್ರದಲ್ಲಿ ಆರು ಗಂಟೆಗಳ ಕಾಲ ಪ್ರಚಾರದಲ್ಲಿ ಕಳೆದದ್ದು ಸಾರ್ಥಕವಾಯಿತು ಅನ್ನಿಸಿತು.



ಆಪ್ ಪರ ನಿಂತ ಜನಸಾಮಾನ್ಯ ಕಾರ್ಯಕರ್ತರು

ಒಂದು ದೊಡ್ಡ ರ್‍ಯಾಲಿಯ ಅನುಭವವಿಲ್ಲದೆ ಯಾವ ಚುನಾವಣಾ ಅನುಭವವೂ ಸಂಪೂರ್ಣವಾಗುವುದಿಲ್ಲ. ಆದ್ದರಿಂದ ಉತ್ತಮ್ ನಗರ್‌ದಲ್ಲಿ ಜರುಗಲಿದ್ದ ಕೇಜ್ರಿವಾಲ್ ಅವರ ರ್‍ಯಾಲಿಯಲ್ಲಿ ಭಾಗವಹಿಸಲು ಹೊರಟೆ. ಧೂಳುಭರಿತವಾದ, ಕಿರುಗುಟ್ಟುವ ಉತ್ತಮ್ ನಗರ್ ದೆಹಲಿಯ ಕೇಂದ್ರ ಭಾಗದಿಂದ ಸುಮಾರು ಇಪ್ಪತ್ತು ಕಿಲೋಮೀಟರ್ ದೂರದಲ್ಲಿದೆ. ಅಲ್ಲಿಗೆ ಹೋಗುವ ರಸ್ತೆಗಳು ಗಲೀಜಿನಿಂದ ತುಂಬಿರುವುದನ್ನು ನೋಡಿ, ದೆಹಲಿಯ ಇತರ ಭಾಗಗಳಂತೆ ಇಲ್ಲಿಯೂ 'ಸ್ವಚ್ಛ ಭಾರತ ಆಂದೋಲನ' ಮಖಾಡೆ ಬಿದ್ದಿದೆ ಅನ್ನಿಸಿತು.

ದಾರಿಯಲ್ಲಿ ಒಂದು ಬಿಜೆಪಿ ರ್‍ಯಾಲಿಯನ್ನು ಕಂಡೆ. ಆ ರ್‍ಯಾಲಿಯಲ್ಲಿ ಪ್ರೇಕ್ಷಕರಿಗಿಂತ ಭದ್ರತಾ ಪಡೆಯವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಬಿಜೆಪಿಯ ನಾಯಕನೊಬ್ಬ ಮೈಕ್ ಮುಂದೆ ನಿಂತು 'ಕೇಜ್ರಿವಾಲ್ ಒಬ್ಬ ಪಲಾಯನವಾದಿ' ಎಂದು ಅರಚುತ್ತಿದ್ದ. ಈ 'ಪಲಾಯನವಾದಿ' ಆರೋಪ ತನ್ನ ಅವಧಿ ಕಳೆದುಕೊಂಡು ಅದೆಷ್ಟೋ ಸಮಯವಾಗಿರುವುದರಿಂದ ಯಾರ ಕಿವಿಗಳಿಗೂ ಆತನ ಮಾತು ತಾಕುತ್ತಿರಲಿಲ್ಲ. ಈ ಇಡೀ ಚುನಾವಣೆಯಲ್ಲಿ ಬಿಜೆಪಿ ಇಂತಹ ನಕಾರಾತ್ಮಕ ತಂತ್ರಗಳನ್ನೇ ಅನುಸರಿಸಿತು. ಇಂತಹ ತಂತ್ರಗಳಿಂದ ಲಾಭಕ್ಕಿಂತ ನಷ್ಟ ಹೆಚ್ಚಾಗುತ್ತಿದೆ ಎಂದು ಅರ್ಥವಾದ ನಂತರವೂ ಅದು ತಾನು ಹಿಡಿದಿದ್ದ ಮಾರ್ಗವನ್ನು ಬದಲಾಯಿಸಿಕೊಳ್ಳಲಿಲ್ಲ. ಪ್ರತಿಫಲವಾಗಿ ಮಾಡುದ್ದುಣ್ಣೋ ಮಹಾರಾಯ ಎಂಬ ಗಾದೆ ಮಾತಿನಂತೆ ನೆಲಕಚ್ಚಿತು.

ಅದೇನೇ ಇರಲಿ, ಅಂದಿನ ರ್‍ಯಾಲಿಗೆ ಕೇಜ್ರಿವಾಲ್ ಒಂದು ಗಂಟೆ ತಡವಾಗಿ ಬಂದರು. ಅವರು ಆಗಮಿಸುತ್ತಿದ್ದಂತೆ ಅಲ್ಲಿದ್ದ ವಾತಾವರಣ ವಿದ್ಯುತ್ ಹರಿದಂತೆ ಪುಳಕಗೊಂಡಿತು. ಸುಮಾರು ಹದಿನೈದು ಸಾವಿರದಷ್ಟಿದ್ದ ಜನರಲ್ಲಿ ಒಂದು ತರಹದ ಸಂಚಲನ ಉಂಟಾಯಿತು. ಕೇಜ್ರಿವಾಲ್ ಅವರ ಮಾತನ್ನು ಕೇಳಿಸಿಕೊಳ್ಳಲು ಜನ ಕಟ್ಟಡಗಳ ಮೇಲೆ, ಮರಗಳ ಮೇಲೆ, ಕೊನೆಗೆ ಟ್ರಾನ್ಸ್‌ಫಾರ್ಮರ್‌ಗಳ ಮೇಲೂ ಜಮೆಗೊಂಡಿದ್ದರು. ಸಾಮಾನ್ಯ ಜನರ ಉಡುಪುಗಳನ್ನು ಧರಿಸುವ, ಭಾಷಣ ಬಿಗಿಯುವ ಬದಲಾಗಿ ಜನರೊಂದಿಗೆ ಸಂಭಾಷಣೆ ನಡೆಸುವ ಕೇಜ್ರಿವಾಲ್ ಅವರು ಅವತ್ತು ಆಡಿದ ಪ್ರತಿ ಮಾತಿಗೂ ಜನ ಹರ್ಷೋದ್ಗಾರ ವ್ಯಕ್ತಪಡಿಸುತ್ತಿದ್ದರು.

"ಪ್ರಧಾನ ಮಂತ್ರಿ ಅವರು ಬಡವರಿಗಾಗಿಯೇ 'ಜನ್‌ಧನ್ ಬ್ಯಾಂಕ್'ಗಳನ್ನು ಪ್ರಾರಂಭಿಸಿದ್ದೇನೆ ಎಂದು ಹೇಳಿದ್ದಾರೆ. ಅಷ್ಟೇ ಅಲ್ಲ, ಆ ಬ್ಯಾಂಕ್ ಖಾತೆಗಳಿಗೆ ಹಣವನ್ನೂ ಜಮೆ ಮಾಡುತ್ತೇನೆ ಎಂದಿದ್ದಾರೆ. ಆದರೆ ವಾಸ್ತವವಾಗಿ ಆ ಖಾತೆಗಳಿಗೆ ವಿಜಯ ಹಣ ಜಮೆಯಾಗುವುದು ನೀವು ಮರಣ ಹೊಂದಿದ ನಂತರವೇ. ಇಂತಹ ಭರವಸೆ ಕೊಡುವುದು ಸರಿಯೇ?" ಎಂದು ಕೇಜ್ರಿವಾಲ್ ಪ್ರಶ್ನಿಸಿದಾಗ ಅಲ್ಲಿ ನೆರೆದಿದ್ದ ಜನರೆಲ್ಲರೂ "ತಪ್ಪು, ತಪ್ಪು" ಎಂದು ದನಿಗೂಡಿಸಿದರು. ಕೇಜ್ರಿವಾಲ್ ಸ್ಥಳೀಯ ಮಟ್ಟದ ಭ್ರಷ್ಟಾಚಾರದಿಂದ ಹಿಡಿದು ಹಣದುಬ್ಬರದ ಬಗ್ಗೆಯೂ ಮಾತನಾಡುತ್ತಾ ಹೋದಂತೆ ಜನ ಸ್ಪಂದಿಸುತ್ತಿದ್ದದ್ದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಜನರೆಲ್ಲ ಕೇಜ್ರಿವಾಲ್ ಅವರಿಗೆ ಮಾರುಹೋಗಿದ್ದರು. ಎಷ್ಟರಮಟ್ಟಿಗೆ ಎಂದರೆ, ಆಪ್ ಹವಾಲಾ ಮೂಲಕ ಎರಡು ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದೆ ಎಂದು ಬಿಜೆಪಿ ಆರೋಪಿಸಿದ ಮಾರನೆ ದಿನವೂ ಜನರು 66 ಲಕ್ಷ ರೂಪಾಯಿಗಳನ್ನು ಆಪ್‌ಗೆ ದಾನ ಮಾಡಿದರು. ಯಾಕೆಂದರೆ ಬಿಜೆಪಿ ಸುಳ್ಳು ಹೇಳುತ್ತಿದೆ ಎಂದು ಸಾಮಾನ್ಯ ಜನರಿಗೆ ಗೊತ್ತಾಗಿತ್ತು, ಅವರೆಲ್ಲ ಆಗಲೇ ಆಪ್ ಪರ ನಿಲ್ಲಲು ನಿರ್ಧರಿಸಿಯಾಗಿತ್ತು.


ಚುನಾವಣಾ ಫಲಿತಾಂಶ ಪ್ರಕಟಗೊಂಡ ದಿನ ಮಿತ್ರರೊಬ್ಬರು ವಾಟ್ಸ್ ಆಪ್ ಮೂಲಕ ಒಂದು ಸಂದೇಶವನ್ನು ಕಳುಹಿಸಿದರು. ಅದು ಹೀಗಿತ್ತು: "ಚುನಾವಣಾ ಪ್ರಚಾರಕ್ಕೆಂದು 500 ಕೋಟಿ ರೂಪಾಯಿಗಳನ್ನು ಚೆಲ್ಲಿದ ಬಿಜೆಪಿ ಕೇವಲ ಮೂರು ಸ್ಥಾನಗಳನ್ನು ಗೆದ್ದಿತು. ಆದರೆ ಕೇವಲ 25 ಕೋಟಿಗಳನ್ನು ವೆಚ್ಚ ಮಾಡಿದ ಆಪ್ 67 ಸ್ಥಾನಗಳನ್ನು ಗೆದ್ದಿದೆ. ಇದರಿಂದಲೇ ನಿರ್ಧರಿಸಿ ಯಾರು ಬುದ್ಧಿವಂತರು, ಯಾರು ದಕ್ಷ ಆಡಳಿತ ನೀಡಬಲ್ಲರು ಎಂದು. ಆಪ್ ಬೆಂಬಲಿಸಿ."

ಯಾವಾಗ ಬಿಜೆಪಿ ಕಿರಣ್ ಬೇಡಿಯನ್ನು ತನ್ನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಿತೋ ಆಗ ಹಲವು ಮಾಧ್ಯಮಗಳು ಆ ನಿರ್ಧಾರವನ್ನು 'ಮಾಸ್ಟರ್ ಸ್ಟ್ರೋಕ್' (ಚಮತ್ಕಾರಿಕ ಹೊಡೆತ) ಎಂದು ಬಣ್ಣಿಸಿದ್ದವು. ಆದರೆ ವಾಸ್ತವದಲ್ಲಿ ಅದು ಬಿಜೆಪಿಗೆ 'ಪ್ಯಾರಲಿಟಿಕ್ ಸ್ಟ್ರೋಕ್' (ಲಕ್ವಾ ಹೊಡೆತ) ಆಗಿ ಪರಿಣಮಿಸಿತು!

ಈಗ ದೆಹಲಿ ಮತದಾರರಿಂದ ನರೇಂದ್ರ ಮೋದಿ ಮತ್ತು ಅಮಿತ್ ಶಾ ಜೋಡಿ ಲಕ್ವಾ ಹೊಡೆಸಿಕೊಂಡಿದ್ದಾರೆ!! ■

...ಕಟ್ಟಿಕೊಂಡ ವೇಷ?

...ಳೆ ಕನ್ನಡ ಚಿತ್ರಗೀತೆಯೊಂದರ ಸಾಲು ಹೀಗಿದೆ: "ಕಟ್ಟಿಕೊಂಡ ...ಬಹಳ ಕಾಲ ನಿಲ್ಲೋಲ್ಲ, ಹಚ್ಚಿಕೊಂಡ ಬಣ್ಣ ಎಂದೂ ಹೀಗೆ ಉಳಿಯೋಲ್ಲ ...ದ ನಾಟಕ ಮುಗಿಯಲೇ ಬೇಕು, ನೋಡುವ ಜನ ನಿಜ ತಿಳಿಯಲೇ ...' ಎಂದು. ಡೆಲ್ಲಿಯ ಈ ಚುನಾವಣಾ ಫಲಿತಾಂಶ ಜನ ನಾಟಕೀಯತೆಯೇ ...ಾಳವಾಗಿಸಿಕೊಂಡಿದ್ದ ಸರಕಾರವೊಂದರ ವಿರುದ್ಧ ನೀಡಿದ ಭರ್ಜರಿ .... ಇವನ್ನೆಲ್ಲ ನೋಡಿದಾಗ ಬೇಡವೆಂದರೂ ಈ ಗೀತೆ ನೆನಪಿಗೆ ಬಂತು.



...ಲ್ಲಿಯಂತಹ ಪುಟಾಣಿ ರಾಜ್ಯದಲ್ಲಿ ನೂರಾರು ಬಿಜೆಪಿ ಸಂಸದರು ...ರುಗಳು ಸೇರಿ ಭರ್ಜರಿ ಪ್ರಚಾರ ಮಾಡಿದರೂ ಅಲ್ಲಿನ ಜನರ ಮನಸ್ಸನ್ನು ...ಲ್ಲ. ಚುನಾವಣೆಯೆಂದರೆ ಸೋಲು ಗೆಲುವು ಇದ್ದದ್ದೇ. ಆದರೆ ಇಂದಿನ ...ಶ ಕೇವಲ ಗೆಲುವಷ್ಟೇ ಆಗಿದ್ದಿರಲಿಲ್ಲ. ಲೋಕಸಭಾ ಚುನಾವಣೆಯಲ್ಲಿ ... ಬಹುಮತದಿಂದ ಗೆದ್ದು ಅಧಿಕಾರ ಹಿಡಿದ ಆ ಗೆಲುವಿನ ಗುಂಗಿನಲ್ಲೇ ... ರಾಷ್ಟ್ರೀಯ ಪಕ್ಷವೊಂದು ಅದೇ ಡೆಲ್ಲಿಯಲ್ಲಿ ವಿಪಕ್ಷ ಸ್ಥಾನಕ್ಕೂ ...ಲ್ಲದಂತೆ ಕೇವಲ 3 ಸ್ಥಾನಕ್ಕಿಳಿದದ್ದು ಪಕ್ಷದ ಮೇಲೆ ಜನರಿಗಿರುವ ...ಸ್ಸು ತೋರಿಸುತ್ತಿದೆಯೇ ವಿನಃ ಬೇರಿನ್ಯಾವುದೇ ಬೇಡಿ-ಗಾಡಿಗಳು ...ಕಾರಣವಲ್ಲವೇ ಅಲ್ಲ.

...ಚ್ಛೇ ದಿನ್ ಆಯೇಗಾ' ಹೆಸರಲ್ಲೇ ಅಧಿಕಾರಕ್ಕೇರಿದ ಪಕ್ಷವೊಂದರ ...ತ್ತು ಜನರಿಗೆ ಅರ್ಥವಾಗಲು ಕಷ್ಟವೇನಲ್ಲ. ತಾನೊಬ್ಬ ಚಾಯ್ ...ಳಮಟ್ಟದವನೆಂದು ಮೋದಿ ಬಿಂಬಿಸಿಕೊಂಡರೇ ವಿನಃ ಅಧಿಕಾರಕ್ಕೇರಿದ ...ಣೆ ಹಾಕಿದ್ದು, ಅಚ್ಛೆ ದಿನಗಳು ಬಂದದ್ದು ಅಂಬಾನಿ-ಅಧಾನಿಯಂತವರಿಗೆ ... ಕಣ್ಣಿಗೆ ರಾಚುವಂತಿತ್ತು. ಪ್ರಧಾನ ಮಂತ್ರಿ ಎನ್ನುವ ಬದಲು ... ಸೇವಕ ಎಂದು ಮೋದಿ ತನ್ನನ್ನು ತಾನು ಸ್ವಯಂ ಘೋಷಿಸಿಕೊಂಡರೇ ...ಧಾನ್ ಸೇವಕನಂತೆ ವರ್ತಿಸಿದ್ದು, ಶೃಂಗಾರಿಕೋದ್ಯಮಿ, ಶ್ರೀಮಂತ ...ಗೆ ಎಂಬುದನ್ನು ಮುಚ್ಚಿಡಲಾಗಲೇ ಇಲ್ಲ.

...ಪೇಜಹೋದಲ್ಲಿ ಪ್ರಾಯೋಜಿತ ಅಥವಾ ಭೂಬಿಟ್ಟ ಜನರಿಂದ ...ಲ್ಲಿ ಹೊಗಳಿಸಿಕೊಳ್ಳುತ್ತಿದ್ದ ಕೋತಿ, ಮಂಚಿ, ಪಲಾಯನವಾದಿ ಎಂದು ...ದ ಹೇಳಿಸಿಕೊಳ್ಳುತ್ತಿದ್ದ ಡೆಲ್ಲಿಯ ಗೌರವಾನ್ವಿತ ಮಾಜಿ ಸಿಎಂ ಕೇಜ್ರಿವಾಲ್ ಪ್ರಾಮಾಣಿಕವಾಗಿ ಜನರ ಮನಗೆದ್ದರೆ ಮೋದಿ ಯಾರೋ ನಿರ್ದೇಶಿಸಿದ್ದನ್ನ (ಲೋಕ ಸಭಾ ಚುನಾವಣೆಯಲ್ಲೂ ಅವರ ಹಿಂದೆ ಇಂತಹ ಟೀಮ್ ಒಂದು ಸಿದ್ಧವಾಗಿತ್ತು) ಉಸುರುವುದನ್ನು ಕ್ಯಾರೇ ಅನ್ನಲಿಲ್ಲ (ಮೋದಿ ಪ್ರಚಾರ ಮಾಡಿದ ಸ್ಥಳಗಳಲ್ಲೇ ಪಕ್ಷ ಗೆಲ್ಲಲಾಗಿಲ್ಲ) ಪ್ರತಿದಿನ ಕೇಜ್ರಿವಾಲ್‌ರಿಗೆ ಐದು ಪ್ರಶ್ನೆಗಳನ್ನು ಎಸೆಯುತ್ತಿದ್ದ ಬಿಜೆಪಿಗೆ ಜನ ತಮ್ಮ ಓಟಿನ ಮೂಲಕ ತಕ್ಕ ಉತ್ತರ ಕೊಟ್ಟರು. ಯಾಕೆಂದರೆ, ಈ ಕೇಜ್ರಿವಾಲ ಭೂಮಿಗಿಳಿದ ಭಗವಂತನೇನೂ ಅಲ್ಲ ಆದರೆ ಪ್ರಶ್ನೆ ಕೇಳುವವರ ಹಿಕ್ಮತ್ತುಗಳನ್ನು ಅರ್ಥೈಸಿಕೊಳ್ಳದಷ್ಟು ಈ ಡೆಲ್ಲಿಯ ಜನ ದಡ್ಡರೇನೂ ಆಗಿರಲಿಲ್ಲ.

ಇನ್ನೂ ಒಂದು ತಮಾಷೆಯೆಂದರೆ, ತಾನೊಬ್ಬ ಅಂತಾರಾಷ್ಟ್ರೀಯ ಮಟ್ಟದ ನಾಯಕ ಎಂಬ ಭ್ರಮೆಗೆ ಬಿದ್ದ ಮೋದಿ ಸಾಹೇಬರು ಮೊನ್ನೆ ಮೊನ್ನೆ ಜನವರಿ 26 ರಂದು ಡೆಲ್ಲಿಯಲ್ಲಿ ಮಾಡಿಕೊಂಡಿದ್ದ ಎಡವಟ್ಟು ಕೂಡ ಜನರ ಮೇಲೆ ಪರಿಣಾಮ ಬೀರಿತ್ತು. ದೊಡ್ಡಣ್ಣ ಅಮೆರಿಕದ ಒಬಾಮಾ ಅತ್ಯಂತ ಸಹಜತೆ ಹಾಗು ಸರಳತೆಯಿಂದ ವರ್ತಿಸಿದರೆ ನಮ್ಮ ಪ್ರಧಾನಿಗಳು ಮುತ್ಸದ್ದಿತನದ ಬದಲು ತಮ್ಮ ನಾಟಕೀಯ ನಡವಳಿಕೆಗಳಿಂದಲೇ ಹೆಚ್ಚು ಗಮನ ಸೆಳೆದಿದ್ದರು. ತಾನು ಚಾಯ್ ವಾಲಾನೂ ಹೌದು (ಒಬಾಮನಿಗೆ ಚಾ ಮಾಡಿಕೊಟ್ಟು) ಜತೆಗೆ ಚಿನ್ನದ ನೂಲಲ್ಲಿ ಹೆಸರು ಬರೆಸಿದ ಬಟ್ಟೆ ತೊಟ್ಟ ಷೋ ಮ್ಯಾನ್ ಕೂಡ ಹೌದೆಂದು ತೋರಿಸಿ ಡೆಲ್ಲಿ ಜನರಲ್ಲೇ ಗೊಂದಲ ಹುಟ್ಟಿಸಿದ್ದರು. ತನ್ನ ಬೇಳೆ ಬೇಯುತ್ತೆಂದರೆ ಅಮೆರಿಕಕ್ಕೆ ಇಡಿ ಡೆಲ್ಲಿಯನ್ನೇ ಅಡವಿಡಲು ಹಿಂಜರಿಯದವರು ಎಂದು ಜನರಾಡುವ ಮಟ್ಟಕ್ಕೆ ಈ ಪ್ರಧಾನ್ ಸೇವಕನ ನಾಟಕೀಯ ನಡೆ ಡೆಲ್ಲಿ ಜನತೆಯ ಮುಜುಗರಕ್ಕೆ ಕಾರಣವಾಗಿತ್ತು. ಅದಕ್ಕೇ ಹೇಳಿದ್ದು ಆ ಹಳೆಯ ಚಿತ್ರಗೀತೆ ಬೇಡವೆಂದರೂ ನೆನಪಿಗೆ ಬರುತ್ತದಂತ. ನಿಮಗೂ ಹಾಗನಿಸುವುದಿಲ್ಲವೇ?

-ಆರ್.ಎಸ್.ಪಿ. ಮಂಗಳೂರು

ಸಾಕಿನ್ನು ಭಟ್ಟಂಗಿತನ


ಕೋಮುವಾದಿ ಪತ್ರಿಕೆಗಳಲ್ಲಿ ಮೋದಿ ಮಹಾಶಯ ಮತ್ತು ಸಂಘ ಪರಿವಾರವನ್ನು ವೈಭವೀಕರಿಸಲೆಂದೇ ಅಂಕಣಕಾರರಿರುತ್ತಾರೆ. ದೇಶದ ತುಂಬ ಇಂತಹ ಭಟ್ಟಂಗಿಗಳೆ ಇಂದು ತುಂಬಿದ್ದಾರೆ. ಇವರಾರಿಗೂ ದಿಲ್ಲಿಯಲ್ಲಿ ಆಮ್ ಆದ್ಮಿ ಪಕ್ಷ ಗೆಲ್ಲುವುದೆಂಬ ಸತ್ಯವನ್ನು ಗ್ರಹಿಸಲಾಗಲಿಲ್ಲ. ಇವರಿಗೆ ನಾಚಿಕೆ ಎನ್ನುವುದಿದ್ದರೆ ಇವರು ಇನ್ನು ಮುಂದೆ ಆರ್.ಎಸ್.ಎಸ್. ಮತ್ತು ಮೋದಿಯನ್ನು ಹೀನಾಯ ಹೊಗಳುವುದನ್ನು ಬಿಟ್ಟು ಜನರ ಆಶೋತ್ತರಗಳಿಗೆ ಜಾತ್ಯತೀತವಾಗಿ, ಸಕಾರಾತ್ಮಕವಾಗಿ ಸ್ಪಂದಿಸುವ ಸಂವೇದನೆ ಬೆಳೆಸಿಕೊಳ್ಳಲಿ. ಆಮ್ ಆದ್ಮಿ ಪಕ್ಷದ ಗೆಲುವಿನಲ್ಲಿ ಯಾವ ಜಾತಿ, ಧರ್ಮಗಳ ಲೆಕ್ಕಾಚಾರವೇ ಕೆಲಸ ಮಾಡಿಲ್ಲ, ಪ್ರಜಾಪ್ರಭುತ್ವದ ಮತಗಳ ಮೂಲಕವೇ ಎಲ್ಲರನ್ನು ಒಗ್ಗೂಡಿಸಿದ ಆ ಪಕ್ಷದ ಸಾಧನೆ ಅಧ್ಯಯನ ಯೋಗ್ಯವಾಗಿದೆ.

ಆಮ್ ಆದ್ಮಿ ಪಕ್ಷದ ಗೆಲುವಿನಲ್ಲಿ ನಮ್ಮ ಪತ್ರಿಕೆಯ ಮುನ್ನೋಟದ ಗೆಲುವೂ ಇದೆ. 'ಆಮ್ ಆದ್ಮಿ ಪಕ್ಷ ಕಲಿಸಿದ ಪಾಠ' ಲೇಖನ(18.02.2015ರ ಪತ್ರಿಕೆ)ವನ್ನು ಓದಿದಾಗಲೆ ಚೋರರ ಗುರು ಮತ್ತು ಖೂಳ ಶಿಷ್ಯನಿಗೆ ಕಾದಿದೆ ನಿರಾಶೆ ಎಂಬುದು ಖಾತರಿಯಾಗಿತ್ತು.

-ರವಿಕುಮಾರ್, ಹಾಸನ

'ಅರಾಜಕತಾವಾದಿ'ಗಳಿಗೆ ಕಾಲದ ಕರೆ

ಕೇಜ್ರಿವಾಲರ ಪ್ರಕಾರ ದೆಹಲಿಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸೋಲಲು ಕಾರಣ ಅಹಂಕಾರ. ಇದು ಅವರ ವಿಶ್ಲೇಷಣೆ. ಕಳೆದಬಾರಿ ಆಪ್ ಪಕ್ಷಕ್ಕೆ ಈ ಎರಡೂ ಪಕ್ಷಗಳು ಸೇರಿ ಮಾಡಿದ ಬಂಡವಾಳಶಾಹಿಗಳ ಪರವಾದ ಕುತಂತ್ರವನ್ನು ದೆಹಲಿ ಜನತೆ ಮರೆತಿಲ್ಲ. ಕೋಮುವಾದ ಜಾಗತೀಕರಣದ ಪರವಾಗಿರುವ ಇವುಗಳ ಬಣ್ಣ ಬಯಲಾಗುತ್ತಲಿದೆ. ಜನತೆಯ ಮೂಲ ಸಮಸ್ಯೆಗಳನ್ನು ಅಂದರೆ ನೀರು-ವಿದ್ಯುಚ್ಛಕ್ತಿಗಳನ್ನು ಅಗ್ಗಗೊಳಿಸುವ ಕನಸು ಬಹಳ ಆಕರ್ಷಕ.



ಜನತೆ ನೋಡುವುದು ನಿತ್ಯ ಸಮಸ್ಯೆಗಳ ಪರಿಹಾರಕ್ಕೆ. 56 ಇಂಚುಗಳಷ್ಟು ಎದೆಗಾರಿಕೆಯನ್ನಲ್ಲ. ಹಿಂದೂ ಕೋಮುವಾದಿಗಳ ಅಟ್ಟಹಾಸದ ಬಗೆಗೆ ಪ್ರತಿಕ್ರಿಯೆ ನೀಡದ ಈ ಧರ್ಮನಿರಪೇಕ್ಷ ದೇಶದ ಪ್ರಧಾನ ಮಂತ್ರಿ ಕೇಜ್ರೀವಾಲರನ್ನು ಅರಾಜಕತಾವಾದಿ ಎಂದು ಜರಿದು ಅವರು ಮಾವೋವಾದಿಗಳನ್ನು ಸೇರಿಕೊಳ್ಳಲು ಕರೆನೀಡಿದ್ದರು.

ನಿಜ, ಅನೇಕ ಸೈದ್ಧಾಂತಿಕ ಪ್ರಶ್ನೆಯಲ್ಲಿ ಅವರು ಅರಾಜಕತಾವಾದಿಯೇ. ಬಿಜೆಪಿ ಮತ್ತು ಕಾಂಗ್ರೆಸ್‌ನಂತಹ ಬಂಡವಾಳಶಾಹಿ ಪಕ್ಷಗಳ ವಿರುದ್ಧದ ಹೋರಾಟದಲ್ಲಿ ಇತಿಹಾಸದುದ್ದಕ್ಕೂ ಅರಾಜಕತಾವಾದಿಗಳು ಕಿವಿಗೊಟ್ಟಿದ್ದಾರೆ. ಆಪ್ ಪಕ್ಷಕ್ಕೆ ಎಡ ಪಕ್ಷಗಳು ನೀಡಿದ ಬೆಂಬಲ ವಿವೇಚನಾಪೂರ್ಣವಾದದ್ದು. ಈಶಾನ್ಯ ಭಾರತದ ಜನತೆಯನ್ನು ವಲಸೆಗಾರರು ಎಂದ ಬಿಜೆಪಿ ಹಿಂದೂ ಅತಿಪ್ರೇಮಿ ಮನಸ್ಥಿತಿಯನ್ನು ಪ್ರಕಟಿಸಿದ ಮೇಲೆ ಅದರ ಅಪಜಯ ನಿರೀಕ್ಷಿತವಾಯಿತು. ಇಂದು ಕಾಂಗ್ರೆಸ್ ಐತಿಹಾಸಿಕವಾಗಿ ಅಪ್ರಸ್ತುತವಾಗುತ್ತಿದ್ದು ದೇಶದಲ್ಲೆಲ್ಲಾ ಜನತೆಯ ಆಶೋತ್ತರವನ್ನು ಪ್ರತಿನಿಧಿಸುವ ಮೂರನೆಯ ಶಕ್ತಿ ಅನಿವಾರ್ಯವಾಗುತ್ತಿದೆ. ಕೋಮುವಾದಿ ಹಿಂದುತ್ವಕ್ಕೆ ಮತ್ತು ಕಾಂಗ್ರೆಸ್‌ಗೆ ಪರ್ಯಾಯವಾಗಿ ಕಮ್ಯುನಿಸ್ಟ್ ಪಕ್ಷಗಳು ಮತ್ತು ಆಪ್ ನಂತಹ 'ಅರಾಜಕತಾವಾದಿ' ಪಕ್ಷಗಳು ಈ ಸ್ಥಾನವನ್ನು ತುಂಬಬೇಕು. ಇದು ಕಾಲದ ಕರೆ.

-ಡಾ. ವಿ.ಲಕ್ಷ್ಮೀನಾರಾಯಣ, ಮೈಸೂರು

ಎಮ್ಮೆಲ್ಲೇ ಅಶ್ವತ್ಥ್‌ನಾರಾಯಣ ಅಂಡ್ ಕಂಪನಿ!

ಮಲ್ಲೇಶ್ವರಂ ಬ್ಯಾಂಕ್ ಮುಳುಗಲು ಮೂರೇ ಗೇಣು


ಎಂಎಲ್‌ಎ ಅಶ್ವತ್ಥ ನಾರಾಯಣ

ಹಡಗಿನ ಸಮೇತ ಮುಳುಗ ಹೊರಟವರು ಮೂಳೆ ಚಕ್ಕಳಕ್ಕಾಗಿ ಕಚ್ಚಾಡುತ್ತಿದ್ದಾರೆ. ಹಡಗೇ ಮುಳುಗಿದ ಮೇಲೆ ತಾವೆಲ್ಲಿ ಉಳಿಯಲು ಸಾಧ್ಯ ಎಂಬ ಕನಿಷ್ಠ ಪ್ರಜ್ಞೆಯೂ ಇಲ್ಲದೆ!

ಅಂದಹಾಗೆ ಮುಳುಗಹೊರಟ ಆ ಹಡಗಿನ ಹೆಸರು ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್. ಇನ್ನು ಐದು ವರ್ಷಕ್ಕೆ ಅದು ಸ್ಥಾಪನೆಯಾಗಿ ನೂರು ವರ್ಷ ತುಂಬಲಿದೆ. ಸರ್ ಎಂ. ವಿಶ್ವೇಶ್ವರಯ್ಯನವರ ಆದರ್ಶ ಹೊತ್ತು ಡಿ.ವಿ. ಅಯ್ಯಸ್ವಾಮಿ ಅಯ್ಯರ್, ಕೆ.ವಿ. ಆಚಾರ್, ಮಲ್ಲೇಶ್ವರಕ್ಕೆ ಶಾಸಕರಾಗಿದ್ದ ದಿ. ಪಿ. ರಾಂದೇವ್, ಬಿ. ಆನಂದರಾವ್, ಎಸ್.ವಿ. ರಾಜಾರಾವ್ ಮುಂತಾದ ಸಜ್ಜನರೆಲ್ಲ ಸೇರಿಕಟ್ಟಿದ 95 ವರ್ಷಗಳ ಇತಿಹಾಸದ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕು ತನ್ನ ಶತಮಾನೋತ್ಸವದ ಸಂಭ್ರಮಕ್ಕೂ ಮೊದಲೇ ಮುಳುಗಿಬಿಟ್ಟರೆ ಅದರ ಅವಶೇಷಗಳನ್ನಾದರೂ ಮಾರಿ ತಿನ್ನುವ ದುರಾಸೆ ಮಲ್ಲೇಶ್ವರದ ಹಾಲೀ ಬಿಜೆಪಿ ಶಾಸಕ ಅಶ್ವತ್ಥನಾರಾಯಣ ಅಂಡ್ ಕಂಪನಿಗೆ!

ಇದೇ ಫೆಬ್ರವರಿ 15ರ ಭಾನುವಾರಕ್ಕೆ ಅದರ ಆಡಳಿತ ಮಂಡಳಿಗೆ ಚುನಾವಣೆ ನಿಗದಿಯಾಗಿದೆ. ಕಳೆದ ಎರಡೂವರೆ ವರ್ಷದಿಂದ ಇದಕ್ಕೆ ಅಧ್ಯಕ್ಷನಾಗಿ ಇನ್ನಿಲ್ಲದಂತೆ ಬ್ಯಾಂಕನ್ನು ದಿವಾಳಿಯೆಬ್ಬಿಸಿದ ಎ.ಆರ್. ಅನಂತನ್ ಸದ್ಯ ಮಲ್ಲೇಶ್ವರಂ ಶಾಸಕ ಅಶ್ವತ್ಥನಾರಾಯಣರ ಪ್ರತಿನಿಧಿಯಾಗಿ ಮತ್ತೆ ಚುನಾವಣೆಗೆ ನಿಂತಿದ್ದಾನೆ. ಈತನ ಸಿಂಡಿಕೇಟೆಂದರೆ ಅದು ಬಿಜೆಪಿ ಸಿಂಡಿಕೇಟೂ ಹೌದು ಎಮ್ಮೆಲ್ಲೇ ಸಾಹೇಬರ ಖಾಸಗಿ ಪಟಾಲಮ್ಮು ಕೂಡ. ಒಂದಲ್ಲ ಎರಡು ಬಾರಿ ಮಲ್ಲೇಶ್ವರಕ್ಕೆ ಎಮ್ಮೆಲ್ಲೆಯಾಗಿ ಗೆದ್ದ ಅಶ್ವತ್ಥನಾರಾಯಣರಿಗೆ ದಿಕ್ಕೆಟ್ಟು ದಿವಾಳಿಯೆದ್ದ ಈ ಬ್ಯಾಂಕಿನ ಚುಕ್ಕಾಣಿಯನ್ನು ಕನಿಷ್ಠ ತನ್ನ ಚೇಲಾಗಳ ಮೂಲಕವಾದರೂ ಹಿಡಿಯಲೇಬೇಕೆಂಬ ದುರಾಸೆ ಹುಟ್ಟುವುದಕ್ಕೂ ಕಾರಣವಿದೆ.

ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕೆಂದರೆ ಅದು ಸಣ್ಣ ಸಂಗತಿಯೇನಲ್ಲ. ಅದರ 20 ಸಾವಿರಕ್ಕೂ ಅಧಿಕ ಮತದಾನದ ಹಕ್ಕುಳ್ಳ ಸದಸ್ಯರದ್ದೇ ಒಂದು ತೂಕವಾದರೆ ಜೊತೆಗೆ 16 ಸಾವಿರಕ್ಕೂ ಅಧಿಕ ಅಸೋಸಿಯೇಟ್ ಸದಸ್ಯರದ್ದೇ ಪ್ರತ್ಯೇಕ ಜಂಗುಳಿಯಿದೆ. ಇಂಥ ಸದಸ್ಯರ ಸಂಬಂಧಿಕರು ಕುಟುಂಬಸ್ಥರು-ಸ್ನೇಹಿತರೆಲ್ಲರೂ ಬಹುತೇಕ ಮಲ್ಲೇಶ್ವರದ ಮತದಾರರೆ. ಅಕ್ಕಪಕ್ಕದ ಶೇಷಾದ್ರಿಪುರ, ಕುಮಾರಪಾರ್ಕ್, ಶ್ರೀರಾಂಪುರ, ಗಾಂಧಿನಗರ, ರಾಜಾಜಿನಗರದವರೆಗೂ ಮಲ್ಲೇಶ್ವರಂ ಬ್ಯಾಂಕಿನ ಪ್ರಭಾವವಿದೆ. ಸಾಲದ್ದಕ್ಕೆ ಗಂಗೇನಹಳ್ಳಿ, ಯಶವಂತಪುರ, ವಿಜಯನಗರ, ವೈಯ್ಯಾಲಿಕಾವಲ್ ಮತ್ತು ರಾಜಾಜಿನಗರದಲ್ಲಿ ಇದರ ಶಾಖೆಗಳಿವೆ.


ಗ್ರಾಹಕರ ಠೇವಣಿ, ಸದಸ್ಯರ ಷೇರುಗಳು, ಬೇರೆ ಬೇರೆ ಬ್ಯಾಂಕುಗಳಲ್ಲಿಟ್ಟ ಫಿಕ್ಸೆಡ್ ಡಿಪಾಸಿಟ್, ಸ್ಥಿರ-ಚರಾಸ್ತಿ ಎಲ್ಲವೂ ಸೇರಿದರೆ ಬರೋಬ್ಬರಿ ಐನೂರು ಕೋಟಿ ರೂಪಾಯಿಗಳ ಮೊತ್ತವಾಗುವ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕನ್ನು ಶಾಸಕ ಅಶ್ವತ್ಥನಾರಾಯಣರ ಗ್ಯಾಂಗ್ ಶತಗತಾಯ ಆಕ್ರಮಿಸಿಕೊಳ್ಳಲು ಇರುವ ಮತ್ತೂ ಒಂದು ಕಾರಣವೆಂದರೆ ಅದು ಮಾಡಿದ ಲೂಟಿ ಹೊಡೆದ ಕೊಳ್ಳೆ ಮತ್ತು ಅದನ್ನು ಮುಚ್ಚಿ ಹಾಕುವ ಹುನ್ನಾರ!

ಸದ್ಯ ಬ್ಯಾಂಕಿಗೆ ಅಧ್ಯಕ್ಷನಾದ ಅನಂತನ್, ಡೈರೆಕ್ಟರುಗಳಾದ ಸಿಂಗ್ರಿ ಅಯ್ಯಂಗಾರ್, ಶ್ರೀಧರ್, ಲೊಡ್ಡೆ ಚಂದ್ರ ಉರ್ಫ್ ಸಿ. ಚಂದ್ರಶೇಖರ್, ಅನಂತ ಪದ್ಮನಾಭನ್, ವಿಜಯ್‌ಕುಮಾರ್ ಇತ್ಯಾದಿಗಳೆಲ್ಲ ಹೇಗೆ ಶಾಸಕ ಅಶ್ವತ್ಥನಾರಾಯಣರ ಚೇಲಾಗಳೋ ಅದೇ ರೀತಿ ಬ್ಯಾಂಕಿನ ದಿವಾಳಿಗೂ ಕಾರಣಕರ್ತರು. ಬ್ಯಾಂಕಿನ ದುರ್ಗತಿ ನೋಡಿಯೇ ರಿಸರ್ವ್ ಬ್ಯಾಂಕ್ ಡಿವಿಡೆಂಡುಗಳನ್ನು ತಿರಸ್ಕರಿಸಿದ್ದರೆ ಕೋ-ಆಪರೇಟಿವ್ ಆಡಿಟ್ಟು ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳು ಕಾನೂನುಕ್ರಮದ ಎಚ್ಚರಿಕೆಯನ್ನು ನೀಡಿದ್ದಾರೆ. ನಕಲಿ ದಾಖಲೆಗಳ ಮೇಲೆ ಕೋಟಿಗಟ್ಟಲೆ ಸಾಲ, ಕೊಟ್ಟ ಸಾಲಕ್ಕೆ ನಿಖರ ಶ್ಯೂರಿಟಿಗಳಿಲ್ಲದೆ ಮೋಸ, ನಿರ್ದೇಶಕರ ಪ್ರತಿನಿತ್ಯದ ಊಟತಿಂಡಿಗೂ ಲೆಕ್ಕ, ಜೀರೋ ಬಾಂಡ್ ಹಗರಣ, ಯೂನಿಟ್ ಖರೀದಿ ಕರ್ಮಕಾಂಡ, ಲಂಚ ಪಡೆದು ಬೇಕಾಬಿಟ್ಟಿ ಸಿಬ್ಬಂದಿ ನೇಮಕಾತಿ ದೋಖಾ, ಹೊಸ ಸಾಲ ಕೊಟ್ಟು ಹಳೇ ಸಾಲ ತೀರಿಸುವ ದಗಾ, ಪ್ರಾಮಾಣಿಕ ಬ್ಯಾಂಕ್ ಅಧಿಕಾರಿಗಳಿಗೆ ಕಿರುಕುಳ, ಸಾಲಕ್ಕೂ ಕಮೀಶನ್, ಬಡ್ಡಿ ಮನ್ನಾ ದಂಧೆ; ಹೀಗೆ ಠೇವಣಿದಾರರ



ಅರ್ಥವಾಗುವುದಿಲ್ಲ.

ಇದು ಒಂದು ಟೈಪಿನ ಬ್ಯಾಂಕ್ ಲೂಟಿಯಾದರೆ ಮಲ್ಲೇಶ್ವರಂ ಬ್ಯಾಂಕಿನಲ್ಲಿ ನಕಲಿ ದಾಖಲೆಗಳ ಮೇಲೆ ಎಷ್ಟು ಬೇಕಾದರೂ ಸಾಲ ಸಿಗುತ್ತದೆ. ಇದಕ್ಕೆ ಉದಾಹರಣೆ ಕಂದಸ್ವಾಮಿ ಎಂಬ ತಮಿಳು ಪುಂಗವನ ಪ್ರಕರಣ. ವೈಯ್ಯಾಲಿಕಾವಲ್‌ನಲ್ಲಿ ಪಾಲಿಕೆ ಸೊತ್ತನ್ನು ಆಕ್ರಮಿಸಿ ಅಲ್ಲೊಂದು ಮುನೇಶ್ವರನ ದೇವಸ್ಥಾನ ಎಬ್ಬಿಸಿದ ಕಂದಸ್ವಾಮಿಗೆ ಬ್ಯಾಂಕಿನ ಡೈರೆಕ್ಟರ್ ಸಿ. ಚಂದ್ರಶೇಖರ್‌ನೇ ಗಾಡ್‌ಫಾದರ್. ಅಧ್ಯಕ್ಷ ಅನಂತನ್ ಮತ್ತು ಡೈರೆಕ್ಟರ್ ಚಂದ್ರಶೇಖರ್ ಸೇರಿಕೊಂಡು ಮುನೇಶ್ವರನ ದೇವಸ್ಥಾನ ಎಂಬುದನ್ನು ಮರೆಮಾಚಿ ಅದನ್ನು ಪಾಲಿಕೆ ಆಸ್ತಿ ಎಂಬಂತೆ ನಕಲಿ ದಾಖಲೆ ಸೃಷ್ಟಿಸಿದರು. ಅದೇ ದಾಖಲೆಗಳ ಆಧಾರದ

















ದುಡ್ಡನ್ನು ತಮ್ಮ ಶೋಕಿ, ತೀಟೆ, ಐಷಾರಾಮಕ್ಕೆಂದು ಹುದಿ ಹಾರಿಸಿದ ಕಳ್ಳರ ಗ್ಯಾಂಗು ಈಗ ಮತ್ತೆ ವಕ್ಕರಿಸಲೆತ್ನಿಸುತ್ತಿದೆ.

ಯುಟಿಐನಿಂದ ಅಧಿಕ ಬೆಲೆ ತೆತ್ತು ಷೇರುಗಳನ್ನು ಖರೀದಿಸಿದ ಮೇಲೆ ಕನಿಷ್ಠ ಅದೇ ರೇಟಿಗಾದರೂ ಅಂಥ ಯೂನಿಟ್‌ಗಳನ್ನು ಮಾರಬೇಕಲ್ಲವೇ? ಯಾವ ಅನಕ್ಷರಸ್ಥನೂ ನಷ್ಟ ಮಾಡಿಕೊಂಡು ತನ್ನ ವಸ್ತು ಮಾರಲಾರ. ಆದರೆ ಅಧ್ಯಕ್ಷ ಅನಂತನ್ ಉಲ್ಟಾ ವರಸೆಯ ಬುದ್ಧಿವಂತ. ಮೊದಲು ಹೆಚ್ಚು ಕಮೀಷನ್ ತೆತ್ತು ಯೂನಿಟ್‌ಗಳನ್ನು ಖರೀದಿಸುವುದು ತದನಂತರ ಅದೇ ಷೇರುಗಳನ್ನು ಕಮ್ಮಿ ಬೆಲೆಗೆ ಮಾರಿ ಆ ಮೊತ್ತವನ್ನು ಇನ್ನೆಲ್ಲೋ ಠೇವಣಿಯಿಟ್ಟು ಕಮೀಷನ್ ಗಿಟ್ಟಿಸುವುದು. ನೂರು ರೂಪಾಯಿಯ ವಸ್ತುವನ್ನು 130 ರೂಪಾಯಿ ತೆತ್ತು ಖರೀದಿಸಿ ಅದನ್ನು ಆ ರೇಟಿಗೇ ಮಾರಬೇಕಲ್ಲವೆ?

ಆದರೆ ಮಲ್ಲೇಶ್ವರಂ ಬ್ಯಾಂಕಿನದ್ದು ವಿಚಿತ್ರ ಶೈಲಿ. 130 ರೂಪಾಯಿಗೆ ಖರೀದಿಸಿದ ಅದೇ ವಸ್ತುವನ್ನು ಮತ್ತೆ 90 ರೂಪಾಯಿಗೆ ಮಾರಿ ಅದನ್ನೇ ಮತ್ತೆಲ್ಲೋ ಠೇವಣಿಯಿಟ್ಟು ಅದಕ್ಕೂ ಕಮೀಶನ್ ಹೊಡೆಯುತ್ತಾರೆ. ಇಲ್ಲಿ ಹೆಚ್ಚು ರೇಟಿಗೆ ಖರೀದಿಸಿದ್ದಕ್ಕೆ ಒಂದು ಸುತ್ತಿನ ಕಮೀಶನ್ನಾದರೆ ನಂತರ ಕಮ್ಮಿ ರೇಟಿಗೆ ಮಾರಿದ್ದಕ್ಕೆ ಎರಡನೇ ಸುತ್ತಿನ ಕಮೀಶನ್ ಗಿಟ್ಟುತ್ತದೆ. ಅಂದರೆ ನೂರಕ್ಕೆ ಅದರ 40 ರೂಪಾಯಿಯಷ್ಟು ಕಮೀಶನ್ ರೂಪದಲ್ಲೇ ಲೂಟಿಯಾಗಿ ಕೊನೆಗ ಬ್ಯಾಂಕಿಗೆ ಉಳಿಯುವುದು 60 ರೂಪಾಯಿ ಮಾತ್ರ!

ಇದು ಹಗಲುದರೋಡೆಯ ಹೈಟೆಕ್ ವಿಧಾನ. ಹೀಗೆ ಕೋಟಿ ಲೆಕ್ಕದಲ್ಲಿ ಷೇರು ಖರೀದಿಸಿ ಮತ್ತೆ ಅದನ್ನು ಕಮೀಷನ್ ಆಸೆಗೆ ಠೇವಣಿಯಿಟ್ಟಿದ್ದರ ಫಲವಾಗಿ ಬ್ಯಾಂಕಿಗೆ ಬಿದ್ದ ಹೊರೆ ಕೋಟಿ ಲೆಕ್ಕದ್ದು. ಮೇಲುನೋಟಕ್ಕೆ ಇದು ಖರೀದಿಯ ಯಡವಟ್ಟಿನಿಂದಾದ ನಷ್ಟ ಅನ್ನಿಸಿದರೂ ಹಗಲು ದರೋಡೆಯ ಹುನ್ನಾರ ಮಾತ್ರ ಯಾರಿಗೂ

ಮೇಲೆ ಕಂದಸ್ವಾಮಿಗೆ 50 ಲಕ್ಷದ ಸಾಲ ಮಂಜೂರಾಯಿತು. ಎಷ್ಟೇ ವರ್ಷಗಳಾದರೂ ಕಂದಸ್ವಾಮಿ ಸಾಲ ಕಟ್ಟಲಿಲ್ಲ, ಕೊನೆಗೆ ಗ್ಯಾರಂಟಿ ಇಟ್ಟಿದ್ದ ಆಸ್ತಿಯನ್ನು ಜಪ್ತಿ ಮಾಡಲೆಂದು ಅಧಿಕಾರಿಗಳು ಹೋದಾಗಲೇ ಗೊತ್ತಾಗಿದ್ದು ಅದು ಪಾಲಿಕೆಯ ಸೊತ್ತು!

ಮೊದಲೇ ಪಾಲಿಕೆಯ ಸೊತ್ತು ಅದರಲ್ಲಿ ದೇವಸ್ಥಾನ ಬೇರೆ. ಇನ್ನು ಕೊಟ್ಟ ಸಾಲ ಗೋವಿಂದಾರ್ಪಣವಾದಂತೆಯೆ. ಈ ಬಗ್ಗೆ ಕೆದಕಿದ ಒಂದಿಬ್ಬರು ಬ್ಯಾಂಕ್ ಹಿತೈಷಿಗಳಿಗೆ ಗೊತ್ತಾಗಿದ್ದೇನೆಂದರೆ ಕಂದಸ್ವಾಮಿ ಹೆಸರಲ್ಲಿ ಮಂಜೂರಾದ ಸಾಲದ ಪೈಕಿ 10 ಲಕ್ಷ ಅಧ್ಯಕ್ಷ ಅನಂತನ್ ಅಕೌಂಟಿಗೆ ಜಮೆಯಾಗಿದ್ದರೆ ಉಳಿದ 10 ಲಕ್ಷ ಡೈರೆಕ್ಟರ್ ಲೊಡ್ಡೆ ಚಂದ್ರನ ಅಕೌಂಟಿಗೆ ಹೋಗಿತ್ತು!

ಈ ಬಗ್ಗೆ ಕ್ರಿಮಿನಲ್ ಕೇಸು ದಾಖಲಿಸುವಂತೆ ರಿಸರ್ವ್ ಬ್ಯಾಂಕ್ ಆದೇಶಿಸಿದೆ. ಸಹಕಾರ ನಿರ್ದೇಶನಾಲಯ, ಸಹಕಾರಿ ಲೆಕ್ಕ ಪರಿಶೋಧಕರೂ ಈ ವಂಚನೆಯ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸುವಂತೆ ಒತ್ತಾಯಿಸಿದ್ದಾರೆ. ಆದರೆ ಬ್ಯಾಂಕ್ ಅಧ್ಯಕ್ಷ ಅನಂತನ್ ಮಾತ್ರ ಈ ಬಗ್ಗೆ ತುಟಿಪಿಟಿಕ್ಕೆನ್ನುತ್ತಿಲ್ಲ, ಏಕೆಂದರೆ ಕ್ರಿಮಿನಲ್ ಕ್ರಮ ಜರುಗಿಸಿದರೆ ಅಧ್ಯಕ್ಷ ಅನಂತನ್ ಜೊತೆ ಡೈರೆಕ್ಟರ್ ಚಂದ್ರಶೇಖರನೂ ಮೊದಲು ಜೈಲು ಪಾಲಾಗುತ್ತಾರೆ. ಇದೇ ಜೋಡಿಯ ಬ್ಯಾಂಕ್ ಉದ್ಧಾರದ ಮತ್ತೊಂದು ಕೈಚಳಕಕ್ಕೆ ಉದಾಹರಣೆ ಅಂತಿದ್ದರೆ ಅದು ವೆಂಕಟೇಶ್ ಜೋಯಿಸನ ಆಸ್ತಿ ಸಾಲದ ಹಗರಣ. ಯಾರೋ ಮುಸ್ಲಿಂ ಬೇನಾಮಿಯೊಬ್ಬನ ಹೆಸರಲ್ಲಿ ಮೂರೂವರೆ ಕೋಟಿಯಷ್ಟು ಸಾಲ ಎತ್ತಿದ ಅನಂತನ್-ಚಂದ್ರಶೇಖರ್ ಜೋಡಿ ಅದಕ್ಕೆ ಗ್ಯಾರಂಟಿಯಾಗಿ ವೆಂಕಟೇಶ್ ಜೋಯಿಸ್ ಎಂಬಾತನ ಮನೆಯ ದಾಖಲೆಗಳನ್ನು ಬಳಸಿತ್ತು. ಮೊದಲೇ ಮೋಸದ ಸಾಲ. ಎಷ್ಟು ವರ್ಷ ಕಳೆದರೂ ಸಾಲಗಾರ ಅಸಲನ್ನೂ ಪಾವತಿಸಲಿಲ್ಲ ಬಡ್ಡಿಯನ್ನೂ ಕಟ್ಟಲಿಲ್ಲ. ಕೊನೆಗಿದು

→12

ಕೇಂದ್ರ ಕಚೇರಿಯ ಸೊತ್ತೆ ಶಿವಾರ್ಪಣ!







ಅಧ್ಯಕ್ಷ ಅನಂತನ್ ಮತ್ತು ಶಾಸಕ ಅಶ್ವತ್ಥ ನಾರಾಯಣರ ನೇತೃತ್ವದ ಆಡಳಿತ ಮಂಡಳಿ ಮಾಡಿದ ಮತ್ತೊಂದು ಕೈಚಳಕವೆಂದರೆ ಮಲ್ಲೇಶ್ವರದ ಬ್ಯಾಂಕ್ ಕೇಂದ್ರ ಕಚೇರಿಯ ಸೊತ್ತಿನ ಮೂಲ ದಾಖಲೆಗಳನ್ನೇ ನಾಪತ್ತೆ ಮಾಡಿರುವುದು.

ಅಂದರೆ ಬ್ಯಾಂಕ್ ಕೇಂದ್ರ ಕಚೇರಿಯ ಸೊತ್ತಿನ ಮೂಲ ದಾಖಲೆಗಳನ್ನೇ ಒತ್ತೆ ಇಟ್ಟು ಸಾಲ ಪಡೆದು ಲಪಟಾಯಿಸಿರುವ ಸಾಧ್ಯತೆಯಿದೆ. ಕಳೆದ ಎರಡೂವರೆ ವರ್ಷದಿಂದ ಶೇ. 60ರಷ್ಟು ಸಾಲಗಾರರು ಸಾಲ ಮರುಪಾವತಿಸುತ್ತಿಲ್ಲ, ಇನ್ನೂ ಕೆಲವೆಡೆ 2 ಕೋಟಿಯ ಸೊತ್ತನ್ನು ನಾಲ್ಕು ಕೋಟಿ ಎಂದು ಕಳ್ಳ ಮೌಲ್ಯಮಾಪನ ಮಾಡಿಸಿ ಸಾಲ ನೀಡಿದ್ದಾರೆ. ಶೇಕಡ ಹತ್ತು, ಹನ್ನೆರಡು ಅಥವಾ 13 ಪರ್ಸೆಂಟ್ ಬಡ್ಡಿಯ ಆಮಿಷ ತೋರಿಸಿ 250 ಕೋಟಿಯಷ್ಟು ಠೇವಣಿ ಪಡೆದು ಅದೇ ದುಡ್ಡನ್ನು ಕಮೀಶನ್ ಆಸೆಗೆ ಬಿದ್ದು ಬೇರೊಂದು ಬ್ಯಾಂಕಿನಲ್ಲಿ ಆರು ಅಥವಾ ಏಳು ಪರ್ಸೆಂಟ್ ಬಡ್ಡಿಗೆ ಠೇವಣಿಯಿಟ್ಟಿದ್ದಾರೆ. ಇಲ್ಲಿ ಕಮೀಶನ್ ಕೊಟ್ಟರೆ ಮಾತ್ರವೇ ಸಾಲ. ಇಂಥ ವಂಚಕ ಸಾಲಗಾರರು ಬಡ್ಡಿ ಕಟ್ಟುವುದಿರಲಿ ಅಸಲನ್ನೂ ಕಟ್ಟುವುದಿಲ್ಲ, ಡೈರೆಕ್ಟರ್‌ಗಳ ಚೇಲಾಗಳೇ ಇಲ್ಲಿನ ನೌಕರರಾದ್ದರಿಂದ ಯಾರೂ ಕೆಲಸ ಮಾಡುವುದಿಲ್ಲ, 15 ವರ್ಷಗಳಿಂದ ಬ್ಯಾಂಕಿಗೊಬ್ಬ ಜನರಲ್ ಮ್ಯಾನೇಜರ್ ಗತಿಯಿಲ್ಲ.

ಇಂಥಾ ದುರ್ಗತಿಯ ವಿರುದ್ಧ ಶುರುವಿನಿಂದಲೂ ಹೋರಾಡುತ್ತಿರುವುದು ಡಾ. ರಂಗೇಗೌಡ, ಡಾ. ವಿ.ಶಂಕರ್ ಮತ್ತು ಬಿ.ಎಸ್. ಸುಧೀಂದ್ರರ ತಂಡ. ಸಮಾಜ ಸೇವಕ ಬದ್ರಿನಾಥ್, ಕುಮಾರ್ ಆರ್.ಎಸ್, ಹಾಲಿ ಡೈರೆಕ್ಟರ್ ಅಶೋಕ್ ಕುಮಾರ್ ಮುಂತಾದವರೆಲ್ಲ ಬ್ಯಾಂಕ್ ಉಳಿಸಲು ಹರಸಾಹಸ ಮಾಡುತ್ತಿದ್ದರೆ ಶಾಸಕ ಅಶ್ವತ್ಥನಾರಾಯಣರಿಗೆ ಬ್ಯಾಂಕ್ ಸಮಾಧಿ ಮೇಲೆ ಕೂತೇ ಓಟಿನ ಊಟದ ಬಯಕೆ.

ಹಿಡಿಸಿಕೊಟ್ಟ ಹೋಟೇಲಿಯರ್ ಯಾರು?

ಬನ್ನಂಜೆ: ರಕ್ತದ ಆಟ ಅಂತ್ಯ



ಬೆಂಗಳೂರಿನ ಜಗಜೀವನರಾಂ ನಗರ, ಕಾಟನ್‌ಪೇಟೆ, ಸಂಜಯನಗರ, ಬನಶಂಕರಿ, ಕಬ್ಬನ್ ಪಾರ್ಕ್ ಮಾತ್ರವಲ್ಲದೆ ಮಂಗಳೂರು, ಉಡುಪಿ, ಕಾರವಾರ, ಅಂಕೋಲಾ ಸೇರಿದಂತೆ ರಾಜನ ವಿರುದ್ಧ ದಾಖಲಾದ ಪ್ರಕರಣಗಳ ಸಂಖ್ಯೆಯೇ ನಲವತ್ತಕ್ಕೂ ಅಧಿಕ. ರೈ ಬದುಕನ್ನೇ ಯಥಾವತ್ ಅನುಕರಿಸುತ್ತಾ, ಜೊತೆಗೆ ಕೊಲ್ಲುವುದನ್ನೇ ತನ್ನ ಕಾಯಕವಾಗಿಸಿಕೊಂಡಿದ್ದರ ಲಾಭ ಆಕರ್ಷಕವೆ. ನಡುನಡುವೆ ಮಂಗಳೂರಿನ ಒಂದಿಬ್ಬರು ಬಿಲ್ಡರ್‌ಗಳ ಮೇಲೆ ಹುಸಿ ಶೂಟೌಟ್ ಮಾಡಿಸಿ ಅದನ್ನು ತಾನೇ ಮಾಡಿಸಿದ್ದೆಂದು ಟೀವಿಗಳಿಗೆ ಫೋನ್ ಮಾಡಿ ಪೌರುಷ ಕೊಚ್ಚಿಕೊಂಡ. ಆದರೆ ಕಾನೂನು ಬಿಡಬೇಕಲ್ಲ,



...ಣ್ಣಾಮುಚ್ಚಾಲೆ ಅಂತ್ಯಗೊಂಡಿದೆ. ಕೊಲ್ಲುವ ...ತೆರೆಬಿದ್ದಿದೆ. ಕಾನೂನಿನ ಕೈಗೆ ಎಟುಕದವನಿಗೆ ...ರ್ಘಫಲಗಳೇ ಸಂಕೋಲೆಯಾಗಿ ...ಬಿದಿದ್ದರ ಪರಿಣಾಮಕ್ಕೆ ಈಗ ಬನ್ನಂಜೆ ರಾಜನ

...ಿ ದುಬೈ ಸೇರಿಕೊಂಡ ಮಾತ್ರಕ್ಕೆ ...ಯಲ್ಲಿ ಎಷ್ಟು ತಲೆ ತೆಗೆದರೂ ನಡೆಯುತ್ತದೆ ...ಆತನ ಭ್ರಮೆ ಕಳಚಿ ಬಿದ್ದದ್ದು ಮೊನ್ನೆ ಫೆಬ್ರವರಿ ...ಿ. ಮೊರಾಕ್ಕೋದ ಕಾಸಾಬ್ಲಾಂಕಾದ ತನ್ನ ...ಅಡ್ಡೆಯಲ್ಲಿ ತನ್ನದೇ ಲೋಕದಲ್ಲಿದ್ದ ರಾಜನ್ ...ೀ ಕುಖ್ಯಾತ ಸುಲಿಗೆಕೋರ ಬನ್ನಂಜೆ ರಾಜ ...ಿ ದುಬೈ ಪೊಲೀಸರಿಗೆ ನಿಕ್ಕಿಯಾಗಿತ್ತು. ...ಕ್ಕೋ ಪೊಲೀಸರ ಜೊತೆ ಐದು ಮಂದಿಯ ...ಪೊಲೀಸ್ ತಂಡ ಮಿಸುಕಾಡುವುದಕ್ಕೂ ಬಿಡದೆ ...ಹೆಡೆಮುರಿ ಕಟ್ಟಿ ಎಳೆದೊಯ್ಯುತ್ತಿತ್ತು. ನಾನು ...ಹೆಗಡೆ, ಏನೂ ತಪ್ಪು ಮಾಡಿಲ್ಲ, ಯೂ ಆರ್ ...ನ್, ಐ ಆ್ಯಮ್ ನಾಟ್ ಗಿಲ್ಟೀ.... ಎಂದು ...ಷ್ಟೇ ಗೋಗರೆದರೂ ದುಬೈ ಪೊಲೀಸರು ...ಯಾಮಾರುವಂತಿರಲಿಲ್ಲ.

...ದರೆ ಆತ ತುರ್ತಾಗಿ ಬೇಕಾಗಿದ್ದದ್ದು ...ಪೊಲೀಸರಿಗಿಂತಲೂ ದುಬೈ ಪೊಲೀಸರಿಗೆ!

...ದುಬೈನಲ್ಲಿದ್ದುಕೊಂಡೇ ಕಾರವಾರದ ಶಾಸಕ ...ಸೈಲ್ ಮನೆ ಮೇಲೆ 2012ರ ಮೇ ...ಿ ಫೈರಿಂಗ್ ಮಾಡಿಸಿದ್ದ. ಇದಾದ ವರ್ಷಕ್ಕೇ ...ಪಕ್ಕದ ಅಂಕೋಲಾದ ಜನೋಪಕಾರಿ ...ಸ್. ನಾಯಕ್‌ರನ್ನು ಸುಪಾರಿ ಹಂತಕರ ...ಕೊಲ್ಲಿಸಿದ್ದ. ಎಂತೆಂಥದೋ ರಕ್ತಪಾತ, ...ಕೊಲೆಗಳನ್ನು ಕಂಡ ಕರ್ನಾಟಕದ ಮಟ್ಟಿಗೆ ...ಸ್. ನಾಯಕ್ ಹತ್ಯೆ ಎಷ್ಟೊಂದು ...ದಾಗಿತ್ತೆಂದರೆ ತನ್ನ ಬೆಂಗಾವಲಿಗೆಂದು ...ಧಾರಿ ಅಂಗರಕ್ಷಕರನ್ನು ಇಟ್ಟುಕೊಂಡಿದ್ದರೂ ...ನಾಯಕ್ ಬದುಕುಳಿಯಲಿಲ್ಲ.

...ತ್ತರ ಪ್ರದೇಶದ ಅರ್ಧ ಡಜನ್ ಸುಪಾರಿ ...ನ್ನು ಕರಾವಳಿಗೆ ಕರೆಸಿ, ತಿಂಗಳುಗಟ್ಟಲೆ ...ಅಂಕೋಲಾದಲ್ಲಿ ವಸತಿ ಊಟ ಕಲ್ಪಿಸಿ, ...ನಿಕ ರೈಫಲ್, ರಿವಾಲ್ವರುಗಳನ್ನೂ ...ಕೊಟ್ಟು ಉದ್ಯಮಿ ಆರ್.ಎನ್.ನಾಯಕ್‌ರನ್ನು ...ಕೊಲ್ಲಿಸಿದ ರೀತಿಯೇ ಹಾಗಿತ್ತು. ನಾಯಕ್ ...ಕನೊಬ್ಬನ ಗುಂಡಿಗೆ ರಾಜನ ಸುಪಾರಿ ಹಂತಕ ...ಬಿ ತಿಂದು ಸ್ಥಳದಲ್ಲೇ ಹೆಣವಾಗಿದ್ದ. ...ಳ್ಳಲೆತ್ನಿಸಿದ ಮತ್ತೊಬ್ಬ ಶೂಟರ್‌ನನ್ನು ಊರ ...ಸುತ್ತುವರಿದು ಪೊಲೀಸರಿಗೊಪ್ಪಿಸಿದ್ದರು.

...ಹತ್ಯೆಯಾದ ಸುದ್ದಿ ನ್ಯೂಸ್ ಚಾನಲ್ಲುಗಳಲ್ಲಿ ...ಪ್ರೆ ಆತ್ತ ದುಬೈನಿಂದ ಟೀವಿ ಚಾನಲ್ಲಿಗೆ ...ಮಾಡಿ 'ಹೌದು, ಕೊಂದದ್ದು ನಾನೇ. ನಾನೇ ...ರಾಜ. ಅವನು ನನ್ನ ಮಾತನ್ನು ಕೇಳಲಿಲ್ಲ, ...ಕೇರ್ ಅಂದ. ನನಗೇ ಎದುರುತ್ತರ ಕೊಟ್ಟ. ...ದೋ ನಂಬರ್ ದಂಧೆ. ಕಾರವಾರದ ...ಅವನೇ ಡಾನ್. ಪ್ರತಿ ಶಿಪ್ಪಿಗೂ ಮೈನಿಂಗ್ ...ಂದ ಅವನು ರೋಲ್‌ಕಾಲ್ ಮಾಡುತ್ತಾನೆ. ...ಬಂದರಿನ ಲೇಬರ್ ಯೂನಿಯನ್ನಿಗೂ ...ಲೀಡರ್. ದೋ ನಂಬರ್ ದಂಧೆ ಬಿಟ್ಟು ...ದು ವಾರ್ನ್ ಮಾಡಿದ್ದ, ನನಗೇ ದೋಂಟ್ ...ಕೇರ್ ಎನ್ನುತ್ತಾ... ಮುಗಿಸಿಬಿಟ್ಟೆ!'

...ಅವನು ಟೀವಿ ಚಾನಲ್ಲುಗಳಿಗೆ ಫೋನ್ ...[illegible] 1991ರಲ್ಲಿ

ಮೆಜೆಸ್ಟಿಕ್‌ನ ದುರ್ಗಾ ಟ್ರಾವಲ್ಸ್ ಮೇಲೆ ಗುಂಡು ಹಾರಿಸಿದವನು. ಅದಕ್ಕೂ ಮುನ್ನ ಕಾಲೇಜಿನಲ್ಲಿದ್ದಾಗಲೇ ತನ್ನ ಎದುರಾಳಿಯನ್ನು ಮಹಡಿಯಿಂದ ತಳ್ಳಿ ಸಾಯಿಸಲೆತ್ನಿಸಿದವನು. ಅದಾದನಂತರ 1991ರ ಹೊತ್ತಿಗೆ ತನ್ನ ಇಪ್ಪತ್ತೆರಡನೇ ವಯಸ್ಸಿಗೇ ಕೊಕ್ಕರ್ಣೆಯ ಕುಶಾಲಶೆಟ್ಟಿ ಕೊಲೆ ಕೇಸಿನಲ್ಲಿ ಭಾಗಿಯಾದವನು. ಮುಂದೆ ಡಾನ್ ಮುತ್ತಪ್ಪ ರೈ ಶಿಷ್ಯನಾಗಿ ಶೇಷಾದ್ರಿಪುರದ ಬಿಲ್ಡರ್ ಸುಬ್ಬರಾಜುವನ್ನು ಆತನ ರಿಯಲ್ ಎಸ್ಟೇಟ್ ಅಡ್ಡೆಗೇ ನುಗ್ಗಿ ಕೊಂದವನು.




ಎಲ್ಲಕ್ಕೂ ಮಿಗಿಲಾಗಿ ಭೂಗತ ಲೋಕದ ಡಾನ್ ಶ್ರೀಧರ್ ಎಂದು ತಪ್ಪಾಗಿ ಲೆಕ್ಕ ಹಾಕಿ ಬನಶಂಕರಿಯ ಶ್ರೀನಿವಾಸ್ ಎಂಬ ನಿಷ್ಪಾಪಿಯನ್ನು ಚಲಿಸುತ್ತಿದ್ದ ಆತನ ಕಾರಿನಲ್ಲೇ ಫೈರ್ ಮಾಡಿ ಮುಗಿಸಿದವನು.

ಬೆಂಗಳೂರಿನ ಜಗಜೀವನರಾಂ ನಗರ, ಕಾಟನ್‌ಪೇಟೆ, ಸಂಜಯನಗರ, ಬನಶಂಕರಿ, ಕಬ್ಬನ್ ಪಾರ್ಕ್ ಮಾತ್ರವಲ್ಲದೆ ಮಂಗಳೂರು, ಉಡುಪಿ, ಕಾರವಾರ, ಅಂಕೋಲಾ ಸೇರಿದಂತೆ ರಾಜನ ವಿರುದ್ಧ ದ್ಾಖಲಾದ ಪ್ರಕರಣಗಳ ಸಂಖ್ಯೆಯೇ ನಲವತ್ತಕ್ಕೂ ಅಧಿಕ. ರೈ ಬದುಕನ್ನೇ ಯಥಾವತ್ ಅನುಕರಿಸುತ್ತಾ, ಜೊತೆಗೆ ಕೊಲ್ಲುವುದನ್ನೇ ತನ್ನ ಕಾಯಕವಾಗಿಸಿಕೊಂಡಿದ್ದರ ಲಾಭ ಆಕರ್ಷಕವೆ. ನಡುನಡುವೆ ಮಂಗಳೂರಿನ ಒಂದಿಬ್ಬರು ಬಿಲ್ಡರ್‌ಗಳ ಮೇಲೆ ಹುಸಿ ಶೂಟೌಟ್ ಮಾಡಿಸಿ ಅದನ್ನು ತಾನೇ ಮಾಡಿಸಿದ್ದೆಂದು ಟೀವಿಗಳಿಗೆ ಫೋನ್ ಮಾಡಿ ಪೌರುಷ ಕೊಚ್ಚಿಕೊಂಡ. ಆದರೆ ಕಾನೂನು ಬಿಡಬೇಕಲ್ಲ,

2009ರ ಹೊತ್ತಿಗೆ ದುಬೈ ಪೊಲೀಸರ ಕೈಗೆ ಅಚಾನಕ್ ಸಿಕ್ಕಿಬಿದ್ದ ರಾಜನ ಪಾಪದ ಕೊಡವಿನ್ನೂ ತುಂಬಿ ಬಂದಿರಲಿಕ್ಕಿಲ್ಲ, ಆರು ತಿಂಗಳು ದುಬೈ ಜೈಲಿನಲ್ಲೇ ಕಳೆದ. ಬಹುಶಃ ಆ ಹೊತ್ತಿಗಿನ್ನೂ ಆತನ ಮೇಲೆ ಇಂಟರ್‌ಪೋಲ್ ರೆಡ್‌ಕಾರ್ನರ್ ನೋಟಿಸು ಜಾರಿಗೊಳಿಸಿರಲಿಲ್ಲ, ಭಾರತದಿಂದ ಆತನ ಕ್ರೈಂ ಡೀಟೇಲ್ಸ್ ಬರುವುದು ತಡವಾಗಿದ್ದರಿಂದ ದುಬೈ ಪೊಲೀಸರಿಗೂ ವಿಧಿಯಿಲ್ಲದೆ ಆತನನ್ನು ಬಿಡುಗಡೆಗೊಳಿಸಿಯಾಗಿತ್ತು, ಮಂಗಳೂರು ಪೊಲೀಸರು ದುಬೈ ತಲುಪುವ ಹೊತ್ತಿಗೆ ಕಾಲ ಮಿಂಚಿತ್ತು. ಇದರಿಂದ ಪಾಠಾದ ಪೊಲೀಸರು ಆತನ ಮೂರೂ ಪಾಸ್‌ಪೋರ್ಟ್‌ಗಳನ್ನು ಕಿತ್ತರೆ ಬೇರೆ ಬೇರೆ ಹೆಸರುಗಳಡಿ ಮುಂಬಯಿಯಿಂದಲೇ ನಕಲಿ ಪಾಸ್‌ಪೋರ್ಟ್‌ಗಳನ್ನು ಗಿಟ್ಟಿಸಿದ್ದ.

ಈ ಮೂರು ಪಾಸ್‌ಪೋರ್ಟ್‌ಗಳನ್ನು ಬೆನ್ನಟ್ಟಿದ್ದು ಮಂಗಳೂರಿನ ಪೊಲೀಸ್ ಇನ್‌ಸ್ಪೆಕ್ಟರ್ ವೆಂಕಟೇಶ್ ಪ್ರಸನ್ನ. 2009ರಲ್ಲಿ ಆತ ಮೂರು ಪಾಸ್‌ಪೋರ್ಟುಗಳನ್ನು ಪಟ್ಟಿ ಮಾಡಿ ರೆಡ್‌ಕಾರ್ನರ್ ನೋಟಿಸು ಜಾರಿಗೊಳಿಸುವಂತೆ ಇಂಟರ್‌ಪೋಲ್ ಮೇಲೆ ಒತ್ತಡ ತಂದದ್ದೂ ಅವರೆ. ಇದನ್ನು ಸೂಕ್ಷ್ಮವಾಗೇ ಗ್ರಹಿಸಿದ ಬನ್ನಂಜೆ ತನ್ನ ದುಬೈ ನಿವಾಸವನ್ನು ಬದಲಿಸಿದ್ದ. ಹೆಸರನ್ನೂ ಬದಲಾಯಿಸಿಕೊಂಡ. ಪತ್ನಿ ಮತ್ತು ಮಕ್ಕಳನ್ನು ದುಬೈನ ಮನೆಯಲ್ಲೇ ಇರಿಸಿ ತಾನು ಆಫ್ರಿಕಾದ



ಸಣ್ಣಪುಟ್ಟ ದೇಶಗಳಲ್ಲಿ ಓಡಾಡುತ್ತಲೇ ಮತ್ತೊಂದು ಟೈಪಿನ ಸುಲಿಗೆಗಿಳಿದ. ಅದು ದುಬೈನ ಹೋಟೇಲಿಯರ್‌ಗಳ ಸುಲಿಗೆ. ಮಂಗಳೂರು ಮೂಲದ ದುಬೈನ ಹೋಟೇಲಿಯರ್‌ಗಳ ಪೈಕಿ ತೀರ ಸಂಭಾವಿತ ಎಂದೇ ಗುರುತಿಸಿಕೊಂಡವನು ಪ್ರವೀಣ್ ಶೆಟ್ಟಿ. ಮುಂಬಯಿಯಲ್ಲಿ ಮೂರು ಲೇಡಿಸ್ ಬಾರ್ ಮತ್ತು ಎರಡು ಡ್ಯಾನ್ಸ್ ಬಾರ್‌ಗಳು ಮಾತ್ರವಲ್ಲದೆ ರಿಯಲ್ ಎಸ್ಟೇಟ್ ದಂಧೆಯೂ ಇದೆ. ಮಂಗಳೂರು ಮೂಲದ ಬೇರೆಲ್ಲ ಹೋಟೇಲಿಯರ್‌ಗಳು ಒಂದಲ್ಲ ಒಂದು ಮೂಲದಿಂದ ಪಾತಕ ಜಗತ್ತಿನ ಲಿಂಕಿನಲ್ಲಿರುತ್ತಾರೆ. ಆದರೆ ಪ್ರವೀಣ್ ಶೆಟ್ಟಿಯದು ಪೊಲೀಸ್, ರಾಜಕಾರಣಿ, ಅಧಿಕಾರಿಗಳ ಜೊತೆಗೆ ಒಡನಾಟ.

ಇಲ್ಲಿಗೆ ಐದು ವರ್ಷದ ಹಿಂದೆ ದುಬೈನಲ್ಲಿ ಐಷಾರಾಮಿ ಹೋಟೇಲೊಂದನ್ನು ತೆರೆದ ಪ್ರವೀಣ್ ಶೆಟ್ಟಿಯ ಮೇಲೆ ಬನ್ನಂಜೆ ಕಣ್ಣು ಹಾಕಿದ್ದು ಆರು ತಿಂಗಳ ಹಿಂದೆ. ಐದು ಕೋಟಿ ಕೊಡದೇ ಹೋದರೆ ಮುಂಬಯಿಯ ನಿನ್ನ ತಮ್ಮನನ್ನು ಮುಗಿಸುತ್ತೇನೆ ಎಂದು ಬನ್ನಂಜೆ ಗುಡುಗಿದ್ದಾನೆ. ಯಾರೋ ಬೇಕಾರ್ ಗಿರಾಕಿ ಎಂದೇ ಮೊದಮೊದಲು ನಿರ್ಲಕ್ಷಿಸಿದ್ದಾನೆ ಹೋಟೇಲಿಯರ್ ಶೆಟ್ಟಿ. ಇತ್ತ ಮುಂಬಯಿಯಲ್ಲಿದ್ದ ಆತನ ತಮ್ಮನಿಗೆ ಮೂರು ತಿಂಗಳ ಹಿಂದೆ ಫೋನ್ ಮಾಡಿದ ಬನ್ನಂಜೆ ನಿನ್ನ ಅಣ್ಣನಿಗೆ ಬುದ್ಧಿ ಹೇಳು ಇಲ್ಲಾ ಅಂದ್ರೆ ನಿನ್ನ ಹೆಣ ಬೀಳಿಸ್ತೀನಿ ಎಂದಿದ್ದಾನೆ.

ಅಲ್ಲಿಗೆ ಹೋಟೇಲಿಯರ್ ಶೆಟ್ಟಿಗೆ ರಾಜನ ಹಿನ್ನೆಲೆ, ಇತಿಹಾಸ ಗೊತ್ತಾಗಿದೆ. ಇನ್ನು ನಿರ್ಲಕ್ಷಿಸಿದರೆ ಪ್ರಯೋಜನವಿಲ್ಲ ಎಂದಿದ್ದೇ ಭಾರತದ ರಾಜತಾಂತ್ರಿಕ ಅಧಿಕಾರಿಯೊಬ್ಬರ ಮೂಲಕ ದುಬೈನ ಪೊಲೀಸ್ ವರಿಷ್ಠರೊಬ್ಬರ ಮೊರೆ ಹೊಕ್ಕಿದ್ದಾನೆ. ದುಬೈ ಪೊಲೀಸರಿಗೂ ಭಾರತದ ಪೊಲೀಸರಿಗೂ ವ್ಯತ್ಯಾಸವಿದೆ. ಇಲ್ಲಿನಂತೆ ನಿಧಾನವಲ್ಲ ನಿರ್ಲಕ್ಷಿಸುವುದೂ ಇಲ್ಲ. ರಾಜನನ್ನು ಮಟ್ಟಾ ಹಾಕಲು ದುಬೈ ಪೊಲೀಸರ ತಂಡವೇ ಅಣಿಯಾಗಿದೆ. ಆತನ ಮೊಬೈಲ್ ಕರೆಗಳ ಮೇಲೂ ಟ್ರಾ ಕಿಂಗ್ ಶುರುವಾಗಿದೆ. ದುಬೈನಲ್ಲಿದ್ದ ಆತನ ಪತ್ನಿಯ ಟೆಲಿಫೋನ್ ಕರೆಗಳ ಮೇಲೆ ನಿಗಾ ಇಟ್ಟ ದುಬೈ ಪೊಲೀಸರಿಗೆ ಇಂಟರ್‌ಪೋಲ್‌ನ ರೆಡ್‌ಕಾರ್ನರ್ ನೋಟಿಸಿನಿಂದಾಗಿ ಬನ್ನಂಜೆ ರಾಜನೇ ದುಬೈನ ಹೆಗಡೆ ಎಂಬುದು ಖಚಿತಗೊಂಡಿದೆ.

ಇತ್ತ ಐದು ಕೋಟಿಯ ಮಿಕದ ಶಿಕಾರಿಗೆ ನಿಂತೇ ಮೊರಾಕ್ಕೋ ಸೇರಿಕೊಂಡಿದ್ದ ಬನ್ನಂಜೆಗೆ ದುಬೈ ಪೊಲೀಸರ ಕೈ ಇಷ್ಟೊಂದು ಉದ್ದವಿದ್ದೀತು ಎಂಬ ಅಂದಾಜಿರಲಿಕ್ಕಿಲ್ಲ. ಮಾಮೂಲಿನಂತೆ ಪ್ರವಾಸಿಗರ ಕಾಸಾಬ್ಲಾಂಕಾದ ಹೋಟೇಲುಗಳಲ್ಲಿ ಮೋಜು ಮಸ್ತಿ ಮಾಡಿ ಕೊಂಡಿದ್ದವನನ್ನು ಫೆಬ್ರವರಿ 10ರ ಅಪರಾಹ್ನ ದುಬೈ ಪೊಲೀಸರು ಮುತ್ತಿಕೊಂಡಿದ್ದಾರೆ. ತಾನು ರಾಜ ಅಲಿಯಾಸ್ ರಾಜೇಂದ್ರ ಅಲ್ಲವೇ ಅಲ್ಲ. ನಾನು ಮಿಸ್ಟರ್ ಹೆಗಡೆ. ಆಯ್ಯಾಮ್ ಎ ಹಂಬಲ್ ಬಿಜಿನೆಸ್ ಮನ್.... ಇತ್ಯಾದಿಯಾಗಿ ರಾಜ ಏನೇ ಬೊಬ್ಬೆಯಿಟ್ಟರೂ ಮೊರಾಕ್ಕೋ ಪೊಲೀಸರು ಮಣಿಯಲಿಲ್ಲ. ಯಾವ ಅನುಮಾನವೂ ಇಲ್ಲದಂತೆ ಕೈಗೆ ಕೊಳ ತೊಡಿಸಿದ್ದಾರೆ. ಸದ್ಯ ದುಬೈ ಪೊಲೀಸರ ಲಾಕಪ್ಪಿನಲ್ಲಿ ಗಾಯ ನೆಕ್ಕುತ್ತಿದ್ದಾನೆ ಬನ್ನಂಜೆ. ಮಂಗಳೂರು ಪೊಲೀಸ್ ಕಮೀಷನರ್ ಮುರುಗನ್ ವಿಶೇಷ ತಂಡವನ್ನೇ ದುಬೈ ವಿಮಾನ ಹತ್ತಿಸಿದ್ದಾರೆ. ಕಾನೂನಿನ ಕೈಗೆ ಎಟುಕದೇ ಹೋದರೇನು ತಾನೇ ತೋಡಿಕೊಂಡ ಹಳ್ಳಕ್ಕೆ ಬಿದ್ದಿದ್ದಾನೆ ಬನ್ನಂಜೆ.

● ರಾ. ಸೋಮನಾಥ್

ಮೊರಾಕ್ಕೋ ಪೊಲೀಸರ ಕಪಿಮುಷ್ಠಿಯಲ್ಲಿ

ಸದ್ಯ ಮೊರಾಕ್ಕೋ ಪೊಲೀಸರ ವಶದಲ್ಲೇ ಇರುವ ಬನ್ನಂಜೆ ಕೊಂಚ ಯಡವಟ್ಟಾದರೂ ಮತ್ತೆ ತಪ್ಪಿಸಿಕೊಳ್ಳುವ ಸಾಧ್ಯತೆಗಳೇ ಹೆಚ್ಚು. ಏಕೆಂದರೆ ಮೊರಾಕ್ಕೋ ಮತ್ತು ಭಾರತದ ಮಧ್ಯೆ ಕ್ರಿಮಿನಲ್ ಕ್ರಮಗಳ ಬಗ್ಗೆ ಒಡಂಬಡಿಕೆಯಾಗಿಲ್ಲ. ಹಾಗೊಮ್ಮೆ ದುಬೈ ಪೊಲೀಸರಿಗೊಪ್ಪಿಸಿದ ಪಕ್ಷದಲ್ಲಿ ಮಾತ್ರವೇ ಭಾರತದ ಪೊಲೀಸರ ದಾರಿ ಸಲೀಸಾಗಬಹುದು. ಆದರೆ ದುಬೈ ಪೊಲೀಸರು ರಿಸ್ಕ್ ತೆಗೆದುಕೊಳ್ಳುತ್ತಾರಾ?

ಈ ಮಧ್ಯೆ ರಾ ಅಧಿಕಾರಿಗಳ ತಂಡವೊಂದು ಮೊರಾಕ್ಕೋಗೆ ಪಯಣ ಬೆಳೆಸಿದೆ. ಅವರಿಗೆ ಬೆಂಗಳೂರು ಪೊಲೀಸ್ ಕಮಿಷನರ್ ಎಂ.ಎನ್. ರೆಡ್ಡಿ ಮತ್ತು ಮಂಗಳೂರು ಕಮೀಷನರ್ ಮುರುಗನ್ ಎಲ್ಲಾ ದಾಖಲೆಗಳನ್ನು ಒದಗಿಸಿದ್ದಾರೆ. ಇದಿಷ್ಟೇ ಅಲ್ಲದೆ ಮುಂಬಯಿಯಲ್ಲೂ ಬನ್ನಂಜೆ ವಿರುದ್ಧ ಸುಲಿಗೆ ಪ್ರಕರಣಗಳಿವೆ. ಮುಂಬಯಿಯ ಇಬ್ಬರು ಬಿಲ್ಡರುಗಳು ಮತ್ತು ಆರು ಮಂದಿ ಹೋಟೆಲಿಯರ್‌ಗಳಿಂದ ರಾಜ ಕೋಟಿಗಟ್ಟಲೇ ಸುಲಿದಿದ್ದಾನೆ. ಮಂಗಳೂರು ಮೂಲದ ಹೋಟೇಲಿಯರ್ ಒಬ್ಬರ ಕಾರಿನ ಮೇಲೆ ಬಾವಿಗೆ ಶೂಟರ್‌ಗಳನ್ನು ಬಿಟ್ಟು [illegible] ಮಾಡಿಸಿದ ಪ್ರಕರಣವೊಂದು ಮುಂಬಯಿಯಲ್ಲಿ ದಾಖಲಾಗಿದೆ. ಇದೆಲ್ಲಕ್ಕೂ ಮಿಗಿಲಾಗಿ ಇಂಟರ್‌ಪೋಲ್ ರೆಡ್‌ಕಾರ್ನರ್ ನೋಟಿಸ್ ರಾ ಅಧಿಕಾರಿಗಳಿಗೆ ನೆರವಾಗಲಿದೆ.

ಮಲ್ಲೇಶ್ವರಂ ಬ್ಯಾಂಕ್...

↳10

ರಿಸರ್ವ್ ಬ್ಯಾಂಕ್ ಗಮನಕ್ಕೆ ಬಂದು ಇನ್ನೆಲ್ಲಿ ಬ್ಯಾಂಕ್ ಮಾನ್ಯತೆಗೇ ಕುತ್ತಾಗುತ್ತೋ ಎಂದು ಅನಂತನ್-ಚಂದ್ರು ಗ್ಯಾಂಗ್ ವಿಚಿತ್ರ ಸ್ಕ್ಯಾಮೊಂದಕ್ಕೆ ಕೈಯಿಟ್ಟಿತು.

ಅದು ಹಳೇ ಸಾಲ ತೀರಿಸಲು ಹೊಸ ಸಾಲ!

ಅಂದರೆ ಅಪ್ಪನ ಸಾಲವನ್ನು ಮಗನ ಹೆಸರಲ್ಲಿ ತೀರಿಸಲು ಮಗನಿಗೆ onetime ಸೆಟಲ್‌ಮೆಂಟ್ ಎಂದು 80 ಲಕ್ಷದ ಬಡ್ಡಿ ಮನ್ನಾ ಮಾಡುವುದು. ಮತ್ತು ಮಗನ ಹೆಸರಿಗೆ ವೆಂಕಟೇಶ್ ಜೋಯಿಸನ ಅದೇ ಆಸ್ತಿಯ ಮೇಲೆ ಮೂರೂವರೆ ಕೋಟಿ ಹೊಸ ಸಾಲ ಮಂಜೂರು ಮಾಡುವುದು!

ಇದು ಹಳೇ ಸಾಲಕ್ಕೆ ಹೊಸ ಲೆಕ್ಕ ಬರೆಯುವ ದೋಖಾ. ಬ್ಯಾಂಕಿಗೆ 80 ಲಕ್ಷದಷ್ಟು ಬಡ್ಡಿಯೂ ಮೋಸವಾಯ್ತು. ಹೊಸ ಸಾಲದ ಹೆಸರಲ್ಲಿ ಹಳೇ ಸಾಲವನ್ನೂ ತೀರಿಸಿದಂತಾಯ್ತು. ಅದೇ ಆಸ್ತಿಯ ಮೇಲೆ ಮತ್ತೆ ಮತ್ತೆ ಸಾಲ ಕೊಟ್ಟು 80 ಲಕ್ಷ ಮೊತ್ತದ ಬಡ್ಡಿಯನ್ನು ವಂಚಿಸಿ ಬ್ಯಾಂಕಿಗೆ ಕನ್ನ ಕೊರೆದದ್ದು ಅಧ್ಯಕ್ಷ ಅನಂತನ ನರಿಬುದ್ಧಿಗೆ ನಿದರ್ಶನವಷ್ಟೆ.

ಹೀಗೆ ವಾಪಸ್ಸಾಗದ ಸಾಲ, ಮೋಸದ ಸಾಲ, ಷೇರು ಖರೀದಿ ದೋಖಾ, ಬೇಕುಬೇಕಾದವರಿಗೆಲ್ಲ ಬಡ್ಡಿ ಮನ್ನಾ ಮಾಡಿದ ಫಲವಾಗಿ 2013ರ ಹೊತ್ತಿಗೇ ಬ್ಯಾಂಕು ದಿವಾಳಿಯೆದ್ದಿತು. ಇದನ್ನು ಗಂಭೀರವಾಗೇ ಪರಿಗಣಿಸಿದ್ದ ರಿಸರ್ವ್ ಬ್ಯಾಂಕ್ ಷೇರುದಾರರಿಗೆ ಡಿವಿಡೆಂಡ್ ಕೊಡುವುದರ ಮೇಲೆ ನಿರ್ಬಂಧ ಹೇರಿತು. ಏಕೆಂದರೆ ಠೇವಣಿದಾರರು ಮತ್ತು ಖಾತೆದಾರರ ಪೈಕಿ ಶೇ. 36ರಷ್ಟು ನಿಷ್ಕ್ರಿಯ ಖಾತೆಗಳಿದ್ದವು. ಎನ್‌ಪಿಎ ಅಕೌಂಟ್ಸ್ ಅಂದರೆ ನಿಷ್ಕ್ರಿಯ ಖಾತೆಗಳ ಪಾಲೇ ಶೇ. 36ರಷ್ಟಾಯಿತೆಂದರೆ ಅದು ಬರೋಬ್ಬರಿ 72 ಕೋಟಿಗಳಷ್ಟು ಮೊತ್ತದ ಸಾಲ ವಾಪಸ್ಸು ಬಾರದೆ ಗೋವಿಂದಾರ್ಪಣಗೊಂಡಂತೆಯೆ. ಇದನ್ನು ಸೂಕ್ಷ್ಮವಾಗೇ ಗಮನಿಸಿದ ಸಹಸ್ರಾರು ಠೇವಣಿದಾರರು ಸದ್ದಿಲ್ಲದೆ ತಮ್ಮ ಠೇವಣಿಯನ್ನು ಹಿಂಪಡೆಯತೊಡಗಿದರು. ಮೊದಲೇ ಡಿವಿಡೆಂಡ್ ಇಲ್ಲ. ಹಗರಣದ ಮೇಲೆ ಹಗರಣಗಳು. ಇಂಥಾ ದುರ್ಗತಿಯಲ್ಲೂ ಹೊಸ ಸಿಬ್ಬಂದಿಯನ್ನು ನೇಮಿಸಿಕೊಂಡು ಪ್ರತಿ ನೇಮಕಾತಿಗೂ ಕಮೀಶನ್ ಗಿಟ್ಟಿಸುವ ಮತ್ತೊಂದು ಸುತ್ತಿನ ಊಟಗೆ ಅನಂತನ ಗ್ಯಾಂಗ್ ಮುಂದಾಯಿತು.

ಜನರಲ್ ಬಾಡಿಯಲ್ಲಿ ಕೇವಲ 12 ಮಂದಿಯನ್ನಷ್ಟೇ ನೇಮಿಸಿಕೊಳ್ಳಲು ನಿರ್ಣಯವಾಗಿತ್ತು. ಆದರೆ ಆಡಳಿತ ಮಂಡಳಿಯಲ್ಲಿದ್ದದ್ದು 15 ಮಂದಿ. ತಲಾ ಡೈರೆಕ್ಟರ್‌ಗೆ ಒಂದೊಂದು ಹುದ್ದೆ ಮಾರಿಕೊಳ್ಳಲು ಅನುವಾಗಲೆಂದೇ ನೇಮಕಾತಿ ಸಂಖ್ಯೆಯನ್ನು 12ರ ಬದಲಿಗೆ 17ಕ್ಕೆ ಏರಿಸಲಾಯ್ತು. ಪ್ರತಿ ಹುದ್ದೆಗೂ 3 ಲಕ್ಷದಂತೆ ಲಂಚ ಕಿತ್ತರು. ಉಳಿಕೆ ಎರಡು ಹುದ್ದೆಗಳನ್ನು ಎಮ್ಮೆಲ್ಲೆಗೆ ಬಿಟ್ಟುಕೊಟ್ಟರು. ಮುಳುಗುವ ಬ್ಯಾಂಕಿಗೆ ಹೊಸ ಸಿಬ್ಬಂದಿ ಬೇರೆ ಕೇಡು! ನೂರಾರು ಸಂಖ್ಯೆಯ ಹಳೇ ಸಾಲಗಳನ್ನು ಸರಿದೂಗಿಸಲು ಅಷ್ಟೇ ಸಂಖ್ಯೆಯ ಹೊಸ ಸಾಲಗಳನ್ನು ಕೊಟ್ಟು ಸರಿದೂಗಿಸಿ ರಿಸರ್ವ್ ಬ್ಯಾಂಕಿನ ಕಣ್ಣಿಗೆ ಮಣ್ಣೆರಚಿದರು. ಇದರ ಫಲವಾಗಿ ರಿಸರ್ವ್ ಬ್ಯಾಂಕ್ ಡಿವಿಡೆಂಡ್‌ಗೆ ಸಮ್ಮತಿಸಿತಾದರೂ ಕೊಟ್ಟದ್ದು ಮಾತ್ರ ಶೇ.9 ರಷ್ಟು ಡಿವಿಡೆಂಡು.

ಈ ಮಧ್ಯೆ, ದಿವಾಳಿಯೆದ್ದ ಬ್ಯಾಂಕನ್ನು ಉದ್ಧರಿಸುತ್ತೇವೆಂದು ಅಶೋಕ್‌ರಾವ್ ಎಂಬ ಬ್ಯಾಂಕ್ ಅಧಿಕಾರಿಯೊಬ್ಬರನ್ನು ಜನರಲ್ ಮ್ಯಾನೇಜರ್ ಹುದ್ದೆಗೆ ತಂದರು. ನಿಷ್ಠೂರಿ ಬ್ಯಾಂಕ್ ಅಧಿಕಾರಿ ಅಶೋಕ್ ರಾವ್ ಪ್ರಾಮಾಣಿಕವಾಗೇ ಬ್ಯಾಂಕಿನ ರಿಪೇರಿಗೂ ಕೈಯಿಟ್ಟರು. ಆದರೆ ಪ್ರತಿ ಸಾಲದ ಮೇಲೆ ಶೇ. 8ರಷ್ಟು ಕಮೀಶನ್ ಗಿಟ್ಟಿಸುತ್ತಿದ್ದ ಆಡಳಿತ ಮಂಡಳಿಯ ವಂಚನೆಗೇ ಅಶೋಕ್ ರಾವ್ ತಿರುಗಿಬಿದ್ದ ಫಲವಾಗಿ ಅನಂತನ್ ಗ್ಯಾಂಗ್ ಅವರನ್ನೇ ಹೊಡೆದೋಡಿಸಿತ್ತು. ಸಾಲದ ಅರ್ಜಿಗಳು ನಕಲಿ ದಾಖಲೆಗಳು ಎಲ್ಲವನ್ನೂ ಪಟ್ಟಿ ಮಾಡಿದ ಅಶೋಕ್ ರಾವ್ ಈ ಬಗ್ಗೆ ಸರಕಾರಿ ಇಲಾಖೆಗೆ ದೂರು ಕೊಟ್ಟರು. ಸರ್ಕಾರ ಯಾವುದೇ ಹೊಸ ಸಾಲ ನೀಡದಂತೆ ಆದೇಶಿಸಿತು. ಆದರೆ ಖತರ್‌ನಾಕ್ ಅನಂತನ್ ಗ್ಯಾಂಗ್ ಹಳೇ ದಿನಾಂಕ ನಮೂದಿಸಿ 30 ಕೋಟಿಗೂ ಅಧಿಕ ಮೊತ್ತದ ಸಾಲಕೊಟ್ಟು ತೇಗಿಯಾಗಿತ್ತು,

ಇಂಥದು ಒಂದಲ್ಲ, ಎರಡಲ್ಲ, ನೂರಾರು ಹಗರಣ, ವಂಚನೆ, ಮೋಸದ ಫಲವಾಗಿ ನೂರು ವರ್ಷಗಳ ಇತಿಹಾಸದ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ ದಿವಾಳಿಯೆದ್ದಿದೆ. ಸಹಸ್ರಾರು ಠೇವಣಿದಾರರ ಕನಸಿಗೂ ದುಡ್ಡಿಗೂ ಒಟ್ಟೊಟ್ಟಿಗೆ ಬೆಂಕಿ ಬಿದ್ದಿದೆ. ಇಂಥ ಪಾಪಗಳನ್ನೆಲ್ಲ ಮುಚ್ಚಿಕೊಳ್ಳಲು ಅನಂತನ್, ಚಂದ್ರಶೇಖರ್, ಸಿಂಗ್ರಿ ಅಯ್ಯಂಗಾರ್, ಅನಂತ ಪದ್ಮನಾಭನ್, ಭಾಷ್ಯಂ, ಸುಬ್ರಹ್ಮಣ್ಯರ ತಂಡ ಶಾಸಕ ಅಶ್ವತ್ಥನಾರಾಯಣರನ್ನು ಗುರಾಣಿಯಾಗಿ ಬಳಸುತ್ತಿದೆ. 20 ಸಾವಿರದಷ್ಟು ಮತದಾರರು ಮತ್ತು 16 ಸಾವಿರದಷ್ಟು ಠೇವಣಿದಾರರ ಗಳಿಕೆಯ ಐನೂರು ಕೋಟಿ ಚರ-ಸ್ಥಿರಾಸ್ತಿಗೆ ಮತ್ತೆ ಕಳ್ಳರ ಗ್ಯಾಂಗೇ ವಕ್ಕರಿಸಿತೆಂದರೆ ಐತಿಹಾಸಿಕ ಮಲ್ಲೇಶ್ವರಂ ಬ್ಯಾಂಕು ಟೈಟಾನಿಕ್ ಹಡಗಿನಂತೆ ಮುಳುಗಿಹೋಗುತ್ತದೆ.

ಬ್ಯಾಂಕು ಮುಳುಗಬೇಕಾ ಉಳಿಯಬೇಕಾ ಮತದಾರರೇ ನಿರ್ಧರಿಸಬೇಕಿದೆ.

● ರಾ. ಸೋಮನಾಥ್

ಗಾಂಧಿ ಕೊಂದೋನಿಗೆ ಗುಡಿ ಕಟ್ಟ್ಕೊದ್ರೆ ಹಿಂಗೆ ಆಗದು

ಥೂತ್ತೇರಿ

ಯಾಹೂ

ಮಳೆ ನಿಂತರೂ ಮಳೆ ಹನಿ ನಿಲ್ಲಲಿಲ್ಲ ಎನ್ನುವಂತೆ ಶ್ರವಣಬೆಳಗೊಳದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ, ಒಳ್ಳೆ ಮನುಷ್ಯನಿಗೆ ಸಂತೆಯಲ್ಲಿ ಗೂಸಬಿದ್ದೊ ಎನ್ನುವಂತೆ ಸಂತೆಶಿವರದ ಭೈರಪ್ಪನಿಗೆ ಮಹಿಳೆಯರು ಮುಖಮುಸಡಿ ನೋಡದೆ ಇಕ್ಕಿದರಂತಲ್ಲಾ, ಅಂದಿನಿಂದ ಭೈರಪ್ಪನವರ ಮುಖ ಅನಾಮಿಕರಿಂದ ಗೂಸ ತಿಂದ ಅವಮಾನವನ್ನು ಅನುಭವಿಸುತ್ತಿದೆಯಂತಲ್ಲಾ, ಕನ್ನಡದ ಸೂಕ್ಷ್ಮಸಂವೇದನೆಯ ಆಶಾದೇವಿ, ಕವಯತ್ರಿ ಕೆ. ಷರೀಫ, ಹೋರಾಟಗಾರ್ತಿ ಕೆ.ಎಸ್. ವಿಮಲಾ ಮತ್ತು ತುಸು ಕಿಡಿಗೇಡಿ ಸ್ವಭಾವದ ಗೌರಿ ಲಂಕೇಶ್ ಇವರೆಲ್ಲಾ ಸೇರಿ "ಭೈರಪ್ಪ ಲೇಖಕನೇ ಅಲ್ಲ, ಆತನದ್ದು ಚಡ್ಡಿ ಮನಸ್ಸು. ಆ ಕಾರಣಕ್ಕೆ ಆತ ಮಾನವತಾವಾದಿಯಲ್ಲ, ಒಟ್ಟಿನಲ್ಲಿ ಕೊಳಕು ಮನಸ್ಸಿನ ಲೇಖಕ" ಎಂದದ್ದು ಭೈರಪ್ಪನಿಗಿಂತಲೂ ಚಡ್ಡಿ ಭಟ್ಟರಿಗೆ ಶಾನೆ ತುರಿಕೆ ಆಯಿತಂತಲ್ಲಾ, ಆ ಕಾರಣಕ್ಕೆ ಸುಳ್ಳುಸುಳ್ಳೆ ಜನಾಭಿಪ್ರಾಯ ರೂಪಿಸಿ, ಮಹಿಳಾವಾದಿಗಳನ್ನು ಹಣಿಯಲು ಯತ್ನಿಸಿ. ಆತನ ಕಸದತೊಟ್ಟಿಗೆ ಅದೊಂದು ವ್ಯರ್ಥ ಸಂಚಿಕೆಯಾಗಿ ಹೋಯ್ತಂತಲ್ಲಾ, ಅದೇನೇ ಆಗಲಿ ಭೈರಪ್ಪ ತನ್ನ ಕೃತಿಯೊಳಗೆ ಧರ್ಮದ ಅಫೀಮನ್ನು ಬೆರೆಸಿ ಹೊಸೆಯುವ ಲೇಖಕ. ಇದಕ್ಕೆ ಹೊರತಾದ ಕೃತಿಯೆಂದರೆ 'ಗೃಹಭಂಗ'ವೊಂದೆ. ಇನ್ನುಳಿದ ಕೃತಿಯೊಳಗೆ ಚಡ್ಡಿಗಳ ಅಜೆಂಡ ಇದ್ದ ಕಾರಣಕ್ಕೆ ಕನ್ನಡ ಸಾಹಿತ್ಯ ಲೋಕದ ಮನಸ್ಸು ಈತನ ತಂಟೆಗೇ ಹೋಗಲಿಲ್ಲ. ಭೈರಪ್ಪ ಮೆರೆಯಬೇಕಾದರೆ ಚಡ್ಡಿಗಳೇ ಅಧಿಕಾರಕ್ಕೆ ಬರಬೇಕಾಯ್ತು. ಅವರೇ ಗುರುತಿಸಿ ಆತನ 'ಆವರಣ', 'ಸಾರ್ಥ', 'ಯಾನ'ಗಳನ್ನ ಹೊತ್ತು ಮಾರಬೇಕಾಯ್ತು. ಕಾದಂಬರಿಯ ಕಲೆಗಾರಿಕೆ ತೆಗೆದರೆ ಗೋಳವಲ್ಕರನ ಕೃತಿಯಂತೆ ಕಾಣುವ ಭೈರಪ್ಪನ ಬರಹ, ಹೂ.ವೆ. ಶೇಷಾದ್ರಿಯ ಬರಹದಂತೆಯೂ ಕಾಣುತ್ತದೆ. ಅದೇನೇ ಆಗಲಿ ಈತ ರಾಷ್ಟ್ರೋತ್ಥಾನದ ಶ್ರೇಷ್ಠ ಲೇಖಕ ಎಂಬುದೇ ನಿಜವಂತಲ್ಲಾ, ಥೂತ್ತೇರಿ!

****

"ಎಂಟೂನೂರು ವರ್ಷಗಳ ನಂತರ ದಿಲ್ಲಿ ನಮ್ಮ ಕೈವಶವಾಯ್ತು" ಎಂದು ಉತ್ತರ ಭಾರತದ ಚಡ್ಡಿಯೊಂದು ವದರುತ್ತಿರುವಾಗಲೇ ದಿಲ್ಲಿಯ ಜನ ಜಾತ್ಯತೀತ ಮನಸ್ಸಿನ ಪ್ರತಿನಿಧಿಗಳನ್ನು ಆರಿಸಿಕೊಂಡು ಬಿಜೆಪಿಗೆ ಮೂರುನಾಮ ಎಳೆದಿದ್ದಾರಲ್ಲ. ಮೂರು ನಾಮ ಎಂದರೆ ಅವ್ರೂ ಬಿಜೆಪಿಗಳ ನಾಮಗಳಲ್ಲ, ಎಲ್ಲಿ ನಿಂತರೂ ಯಾವುದೇ ರಾಜಕೀಯ ಪಕ್ಷದ ಹಂಗಿಲ್ಲದೆ ಗೆಲ್ಲಬಲ್ಲ ಅಭ್ಯರ್ಥಿಗಳ ಗೆಲುವೂ ಬಿಜೆಪಿ ಗೆಲುವಲ್ಲ ಅನ್ನುವುದಾದರೆ ಕಾಂಗ್ರೆ ತರಹ ಬಿಜೆಪಿಯನ್ನು ದೆಹಲಿ ಜನ ಗುಡಿಸಿ ಹಾಕಿದ್ದಾರಂತಲ್ಲಾ, ಕೇಜ್ರಿವಾಲನ ದಿಗ್ವಿಜಯ ಕೇಳಿದ ದೇವೇಗೌಡರು "ಸದರಿ ಫಲಿತಾಂಶ ರಾಷ್ಟ್ರೀಯ ಪಕ್ಷಗಳಿಗೆ ಎಚ್ಚರಿಕೆಯ ಗಂಟೆ" ಎಂದು ಪ್ರತಿಕ್ರಿಯಿಸಿ ಅಚ್ಚರಿ ಮೂಡಿಸಿದ್ದಾರಂತಲ್ಲಾ, ದೇವೇಗೌಡರು ಜೆಡಿಎಸ್‌ನ ರಾಷ್ಟ್ರೀಯ ಅಧ್ಯಕ್ಷ. ಪ್ರಧಾನಿಯಾಗಿದ್ದವರು. ರಾಷ್ಟ್ರೀಯ ಪಕ್ಷಗಳ ಪರವಿರಬೇಕಾಗುತ್ತದೆ. ಅದೆಲ್ಲಕ್ಕಿಂತ ಮುಖ್ಯವಾಗಿ ದೆಹಲಿಯ ಫಲಿತಾಂಶ ವಂಶಾಡಳಿತ ಮತ್ತು ಮತಾಂತರಿಗೆ ಕೊಟ್ಟ ಎಚ್ಚರಿಕೆ ಎಂಬುದೇ ಗೌಡರಿಗೆ ಇನ್ನೂ ಅರ್ಥವಾಗಿಲ್ಲವಲ್ಲ, ದೆಹಲಿ ರಿಸಲ್ಟಿನ ವಾಸನೆ ಹಿಡಿದೇ ಗೌಡರು ತಮ್ಮ ಅವಕೃಪೆಗೆ ಒಳಗಾಗಿದ್ದ ಚೆಲುವಣ್ಣನ ಟೀಮನ್ನು ಕರೆಸಿ ಮಾತನಾಡು ಎಂದು ಕುಮಾರಣ್ಣನಿಗೆ ಸೂಚನೆ ಕೊಟ್ಟಿದ್ದರಂತಲ್ಲಾ, ಈ ಕಾರಣವಾಗಿ ಕುಮಾರಣ್ಣನನ್ನ ಭೇಟಿಯಾದ ಭಿನ್ನಮತೀಯರು "ನಮಗೆ ನಿಮ್ಮ ಬ್ರದರ್ ಪ್ರೀತಿಯ ಬಗ್ಗೆ ಭಿನ್ನಭೇದವಿಲ್ಲ, ಆದರೆ ಹೋಗುವವನು ಹೋಗಲಿ ಅನ್ನಿಸಿಕೊಂಡು ಅಲ್ಲಿರುವುದು ಅಸಾಧ್ಯ" ಎಂದು ಹೇಳಿಕಳಿಸಿದರಂತಲ್ಲಾ, ಥೂತ್ತೇರಿ!!

****

ಕೇಜ್ರಿವಾಲನ ಗೆಲುವು ಶ್ರೀಸಾಮಾನ್ಯನ ಗೆಲುವೆಂದೇ ಚರ್ಚೆ ಆಗುತ್ತಿರುವ ಈ ಸಮಯದಲ್ಲಿ ಯಾರಾದರೂ ಶ್ರೀಸಾಮಾನ್ಯನನ್ನು ಮಾತನಾಡಿಸಿದರೆ ಹೇಗೆ ಅನ್ನಿಸಿತಲ್ಲಾ, ಆ ಕೂಡಲೇ ಹೊಳೆದ ಹೆಸರೇ ವಾಟಿಸ್ಸೆ, ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ಮುತ್ತು ಉರುಳಿ ಹೋಗಿ [illegible]ಯಿತು, ಚಡ್ಡಿ ಕಳಚಿ ಹೋಗಿ ಬಯಲಾಯಿತು...."

"ಹಲೋ ಯಾರು ಸಾರ್ ತಾವು?"

"ವಾಟಿಸ್ಸೆ, ನಾನು ಯಾಹೂ ಅಂತ ಪತ್ರಿಕೆಯಿಂದ."

"ವಳ್ಳೆ ಟೈಮಿಗೆ ಫೋನ್ ಮಾಡಿದ್ರಿ ಸಾರ್."

"ಆಯ್ತು, ಕರೆನ್ನಿ ಹಾಕುಸ್ತಿನಿ. ಈ ರಿಸಲ್ಟು ಬಗ್ಗೆ ಏನೇಳ್ತಿಯಾ?"

"ಏನೇಳನ ಸಾರ್. ಭಾಳ ಕಷ್ಟಬಿದ್ದೊ, ಹಗಲು ರಾತ್ರಿ ಓಡಾಡಿದ್ದೂ ಸಾರ್ಥಕವಾಯ್ತು."

"ಅಂಗಾದ್ರೆ ನೀನು ಡೆಲ್ಲಿಗೋಗಿದ್ಯಾ?"

"ಡೆಲ್ಲಿಗ್ಯಾಕೋಗ್ಲಿ ಸಾರ್? ನಾನೇಳಿದ್ದು ನಮ್ಮೂರ ಸೊಸೈಟಿ ಯಲಕ್ಷನ್ನು."

"ಥೂ ನಿನ್ನ, ನಾನು ಕೇಳಿದ್ದೂ ಕೇಜ್ರಿವಾಲನ ಗೆಲುವಿನ ಬಗ್ಗೆ."

"ಅವನ ಗೆಲುವು ಇಡೀ ದೇಶಕ್ಕೆ ಶಾಕ್ ಕೊಟ್ಟದೆ ಸಾರ್. ಅಷ್ಟೇ ಅಲ್ಲ, ಒಬಾಮಾನಿಗೂ ನಾಸ್ತ್ಯಾಕಲ್ಲಿಗೋಗಿದ್ದೆ ಅನ್ನಂಗಾಗ್ಯದೆ."

"ಅಂಗಂತಿಯಾ?"

"ಊ ಮತ್ತೆ. ದೆಹಲಿ ಜನಗಳು ಈಗಾಗ್ಲೆ ತಿರಸ್ಕರಿಸಿರೂ ವ್ಯಕ್ತಿ ಜೊತೆ ಕುತಗಂಡು



ಗಣರಾಜ್ಯೋತ್ಸವದ ಮೆರವಣಿಗೆ ನೋಡಿದ್ನಲ್ಲಾ, ಜನಾಭಿಪ್ರಾಯದ ವಾಸನೆ ಮದ್ಲೆ ಗೊತ್ತಿದ್ರೆ ತಪ್ಪಿಸಿಗಬವುದಿತ್ತಲ್ಲಾ ಅಂತ ಒಬಾಮನಿಗೆ ಅನ್ನಿಸಿಲ್ಲವ ಸಾರ್?"

"ಇರಬವುದು ಬುಡು."

"ಇರಬವುದೇನು. ಯೋಚನೆ ಮಾಡೇ ಇರತನೆ ಸಾರ್. ಅಲ್ಲ ಸಾರ್, ಇನ್ನೊಂದು ಮಾತು. ತಿರಕನಿಗೆ ಐಶ್ವರ್ಯ ಬಂದ್ರೆ ಅಥವಾ ಲಾಟರಿ ಹೊಡುದ್ರೇ ರಾತ್ರಲ್ಲ ಸೂಟು ಬಟ್ಟೆ ಮೆಟ್ಟು ಹಲಸಿಕೊಂಡ ಅನ್ನಂಗೆ ಇವುನಿಗೆ ಇಂಗ್ಲೆಂಡಿಂದ ಕೋಟು ಪ್ಯಾಂಟು ಬಂದಿತ್ತಂತಲ್ಲಾ ಸಾರ್."

"ಅಮೆರಿಕದ ಅಧ್ಯಕ್ಷನ ಜೊತೆ ನಿಂತಗಬೇಕಾದ್ರೆ ಇಂಗ್ಲೆಂಡ್ ಸೂಟು ಬೇಕು ಅಂತ ತರಿಸಿದ್ನಂತೆ."

"ಅಲ್ಲ ಸಾರ್. ಈ ಮೋದಿಗೆ ಯಾವ ಬಟ್ಟೆನೂ ಸೂಟಾಗಿ ಕಾಣದಿಲ್ಲ, ಒಂಥರಾ ನಮ್ಮ ಕುಮಾರಣ್ಣನಂಗೆ. ಆ ಸೂಟಲ್ಲವ್ರುನು ಎತ್ತಿಗೆ ಗೌನಾಕಿದಂಗೆ ಕಾಣತಿದ್ದ. ಅದರಬದ್ಲು ಬಿಳಿ ಅಂಗಿ, ಖಾಕಿ ಚಡ್ಡಿ, ಕರಿ ಟೋಪಿ ಹಾಯ್ಕಂಡಿದ್ರೆ ಎಷ್ಟು ಚೆನ್ನಾಗಿ ಕಾಣನು. ಒಬಾಮ ಹೋಗುವಾಗ ಹೇಳಿದ ಮಾತಿಗೂ, ಇವನ ಯಾಸಕೂ ಒಗತ್ತಾಗದು. ಆ ಸೂಟಿನ ಮ್ಯಾಲೆ ಮೋದಿ ಅಂತ ಮಿಂಚಿದಂತಲ್ಲಾ ಸಾರ್."

"ಹೌದು. ಅದನ್ನ ಚಿನ್ನದ ಯಳೆಲಿ ಮೋದಿ ಅಂತ ಯಣದಿದ್ರಂತೆ."

"ಅಲ್ಲ ಸಾರ್, ಈ ಮೋದಿ ಥೇಟ್ ಒಬಾಮ ತರನೇ ಇದ್ದು, ದೂರದಿಂದ ನಾವು ಗುರುತಿಡಿಯಕ್ಯಾಗದಿಲ್ಲ ಅಂದ್ರೆ ಮೋದಿ ಅಂತ ಬರಿಸಿಗಳ್ಳೆ. ನಮ್ಮ ರಾಮಾಯಣದಲ್ಲೂ ವಾಲಿ ಸುಗ್ರೀವ ಒಂದೆ ತರ ಇದ್ರಂತೆ. ಅವುರಿಬ್ರೂ ಯುದ್ಧ ಮಾಡುವಾಗ ಮರೆಲಿ ನಿಂತು ವಾಲಿಗೆ ಬಾಣ ಬುಡಕೆ ಕನ್‌ಫ್ಯೂಸಾದ ರಾಮ ಕಡಿಗೆ ಸುಗ್ರೀವನ ಕತ್ತಿಗೆ ಹೂವಿನಾರ ಹಾಕಿದ್ನಂತೆ. ಅಂಗೆ ಒಬಾಮ ಮೋದಿ ಅವುಳಿ ಜವಳಿ ತರ ಇದ್ರೆ ಕೋಟ್‌ಮ್ಯಾಲೆ ಮೋದಿ ಅಂತ ಮಿಂಚಾಕಿಸಿಕಳ್ಳೆ. ಅದು ಬುಟ್ಟು ದನಿನ ಡ್ರಸಲ್ಲಿದ್ದನಲ್ಲ, ಇದು ಸರಿನಾ ಸಾರ್?"

"ಸರಿಯಲ್ಲ ಅಂತ ಡೆಲ್ಲಿ ಜನನೆ ಅಂದವುರೆ ಬುಡು."

"ಬುಡದಿಲ್ಲ ಸಾರ್. ತಿರುಕ ದವ್ಲತ್ತು ವಳ್ಳೆದಲ್ಲ. ಅದೇ ನಮ್ಮ ದ್ಯಾವೇಗೌಡ್ರು ಪ್ರಧಾನಿಯಾಗಿ ಪ್ರಮಾಣವಚನ ತಗಳವಾಗ್ಲೂ ಜುಬ್ಬ ಪಂಚೆ ಟವಲ್ಲಲ್ಲಿದ್ರು. ವಿದೇಶಕ್ಹೊದ್ರೂ ಅಂಗೆಯಿದ್ರು. ಯಾಕೆ ಗೊತ್ತ?"

"ಅವ್ರುರಿಗೂ ಯಾವ ಡ್ರೆಸ್ಸೂ ಸಟ್ಟಾಗದಿಲ್ಲ ಅದಕೆ."

"ಅದಲ್ಲ ಸಾರ್. ಯಾವ ಡ್ರೆಸ್ಸು ನನಿಗೆ ಸೂಟ್ಟಾಯ್ತದೆ ಅಂತ ತಿಳಕಂಡವ್ರೆ. ಅಮೆರಿಕದೋನು ಬಂದ ಅಂತ ಕೋಟಾಕಲಿಲ್ಲ ನಮ್ಮ ಗೌಡ್ರು. ಅವ್ರರಾಗತು ತಂಜಾವೂರಿನ ಡೋಲ್ ಕಲಾವಿದನ ಡ್ರಸ್ಸಲ್ಲೇ ಮಿಂಚದು."

"ಇರಲಿ. ಕೇಜ್ರಿವಾಲ್ ಗೆದ್ದಿರದ್ಕೆ ಒಂದೆರಡು ಕಾರಣ ಹೇಳು ವಾಟಿಸ್ಸೆ."

"ನೋಡಿ ಸಾರ್, ಮೊದಲ್ನೆದಾಗಿ, ಈ ಮತಾಂಧನನ್ನ ಮಕ್ಕಳು ಗಾಂಧಿ ಮಾತ್ರನ್ನ ಕೊಂದೋನಿಗೆ ಗುಡಿ ಕಟ್ಟಕ್ಕೆ ಓಡಾಡಿದ್ರು. ಎರಡ್ನೆದಾಗಿ ಆ ಗರೀಬ ಸಾಬರ ಹಿಡಕಂಡು ಬಂದು ಗರ್‌ವಾಪಸಿ ಯಜ್ಞದ ಮುಂದೆ ಕುಂಡ್ರಿಸಿದ್ರು. ಮೂರನೆಯದಾಗಿ ಡೆಲ್ಲಿ ಜನಗಳೆದ್ರಿಗೆ ಈ ಚಡ್ಡಿಗಳು ಸುಳ್ಳು ಹೇಳ್ತಾ ಹೋದಂಗೂ ಕೇಜಿ ಪಡೆ ನಿಜ ಹೇಳ್ತಾ ಹೋಗಿದ್ದು, ನಾಕನೆದಾಗಿ ಇಡೀ ದೇಶದ ಮನೆ ಮುರುಕ ಚಡ್ಡಿಗಳೆಲ್ಲಾ ಡೆಲ್ಲಿಗೋಗಿ ಕೋಟ್ಯಾಂತರ ರೂಪಾಯಿ ಹಣ ಹಂಚುವಾಗ, ಕೇಜ್ರಿಪಡೆ ಬರಿಗೈಲಿ ಓಟು ಕೇಳಿದ್ದು. ಐದನೆದಾಗಿ ಕೇಜ್ರಿವಾಲ್ ಅಧಿಕಾರದಲ್ಲಿ ಇದ್ದ 49 ದಿನ ಡೆಲ್ಲಿಲಿ ಲಂಚನೆ ನಿಂತೋಗಿತ್ತಂತೆ. ಇದೇನು ಸಾಮಾನ್ಯವಾಗಿ ಕ್ಯಲಸ ಮಾಡಿಲ್ಲ. ಆರನೆದಾಗಿ, ಏಳನೆದಾಗಿ ಹಿಂಗೆ ಒಂದು ಡಜನ್ ಕಾರಣ ಕೊಡಬವುದು. ಅದ್ಯಲ್ಲಕ್ಕಿಂತ ಬಿಜೆಪಿ ಮತ್ತೆ ಕಾಂಗ್ರೆಸ್ ಓಟರ್ಸ್ ಇಬ್ರೂ ಜೊತೆಯಾಗಿ ಕೇಜ್ರಿವಾಲನ್ನ ಗೆಲ್ಸಿಸಿಬುಟ್ಟವುರೆ. ಚಡ್ಡಿಗಳ ಅಬ್ಬರದ ಎದ್ರಿಗೆ ದಾರಿನೇ ಕಾಣದೇಯಿದ್ದಾಗ, ನಮಿಗೆ ವಳ್ಳೆದೊಂದು ಪರಕೆ ಸಿಕ್ತು ಸಾರ್. ಇದರಲ್ಲಿ ಚಡ್ಡಿಗಳಿಗೂ ಚಚ್ಚಬವುದು, ಬೀದಿ ಮನೆನೂ ಗುಡುಸಬವುದು. ಸರ್ಕಾರಿ ಕಚೇರಿಗೂ ಇದ್ನೆ ತಗಂಡೋಗನಾ ಅಂತ ಇದ್ದಿನಿ."

"ಸರ್ಕಾರಿ ಕಚೇರಿಗೆ ಪರಕೆ ತಗಂಡೋಯ್ತಿಯಾ?"

"ಹೌದು ಸಾರ್. ಈ ಸಿದ್ದರಾಮಯ್ಯನ ಸರ್ಕಾರದಲ್ಲಿ ಯಾವ ಅಧಿಕಾರಿನೂ ಮಾತ ಕೇಳ್ತಾಯಿಲ್ಲ. ಅದ್ಕೆ ಪರಕೆ ತಗಂಡೋಗಿ ಬಾರಸನಾ ಅಂತ ಇದ್ದಿನಿ."

"ನೋಡು ವಾಟಿಸ್ಸೆ, ಸರ್ಕಾರಿ ಜನ ನಂಜುಂಡಸ್ವಾಮಿಯವರ ಹಸುರು ಟವಲಿಗೇ ಎದುರಲಿಲ್ಲ, ಇನ್ನ ನಿನ್ನ ಕಡ್ಡಿಪರಕೆಗೆ ಹೆದರತಾರಾ? ಅಂಗೇಸಾರ ಯಾರಿಗಾರ ಪಡದೀಯಾ, ಕೇಸಾಯ್ತದೆ."

"ಅಗ್ಗಿ ಬುಡಿ ಸಾರ್. ನಾವು ಪಬ್ಲಿಕ್ಕು ಯಾವ ಕೇಸು, ಕೋರ್ಟಿಗೂ ಹೆದರಲ್ಲ. ಕೋರ್ಟಿಗೆ ಹೆದರಕೆ ನಾನೇನು ರಾಘವೇಶ್ವರ ಸ್ವಾಮಿನ ಸಾರ್?"

"ಥೂತ್ತೇರಿ!!!"

ಹುಬ್ಬಳ್ಳಿ: ಶಾಸಕ ಅಬ್ಬಯ್ಯನ ಅಬ್ಬೇಪಾರಿ ಮಾತುಗಳು

...ದ ತಿಂಗಳ 29ರಿಂದ ಬಡ ಬೀಡಿ ಕಾರ್ಮಿಕರು ...ಟೋ ಚಾಲಕರು ಸೂರಿಗಾಗಿ ಹುಬ್ಬಳ್ಳಿ ಮಹಾನಗರ ... ಮುಂದೆ ಉಪವಾಸ ಸತ್ಯಾಗ್ರಹ ಆರಂಭಿಸಿದ್ದರ ...ತ್ರಿಕೆ ವರದಿ ಮಾಡಿತ್ತು. ನಾಲ್ಕನೇ ದಿನಕ್ಕೆ ಕಾಲಿಟ್ಟಿದ್ದ ...ಉಪವಾಸ ಧರಣಿ ಫೆಬ್ರವರಿ 1ರಂದು ಶಾಸಕನ ...ಭರವಸೆ ಹಿನ್ನೆಲೆಯಲ್ಲಿ ಅಂತ್ಯಗೊಂಡಿದೆ. ಆದರೆ ...ರತರನ್ನು ಸಂತೈಸಬೇಕಿದ್ದ ಹು-ಧಾ ಪೂರ್ವ ...ಭಾ ಕ್ಷೇತ್ರದ ಶಾಸಕ ಪ್ರಸಾದ್ ಅಬ್ಬಯ್ಯನ ಮಾತು ...ರ್ತನೆಗಳು ಧರಣಿ ನಿರತರ ಆಕ್ರೋಶಕ್ಕೆ ಗುರಿಯಾಗಿ ...ಚರ್ಚೆಯೊಂದನ್ನು ಹುಟ್ಟುಹಾಕಿವೆ.


...ಲಿಗೆ ಧರಣಿ ಆರಂಭವಾದ ದಿನದಿಂದಲೂ ಊರಲ್ಲೇ ...ಸಾದ್ ಅಬ್ಬಯ್ಯ ಸೌಜನ್ಯಕ್ಕಾದರೂ ಸತ್ಯಾಗ್ರಹಿಗಳತ್ತ ...ರಲಿಲ್ಲ. ಖಾಸಗಿ ಮದುವೆ ಸಮಾರಂಭಗಳಲ್ಲಿ ...ಪಾಕ ರಾತ್ರೋರಾತ್ರಿ ಬೆಂಗಳೂರು ಸೇರಿಕೊಂಡಿದ್ದ ...ದ್ದೇಶಪೂರ್ವಕವಾಗಿಯೇ ಹೋರಾಟವನ್ನು ಉಡಾಫೆ ...ಕ್ಕೆ 'ಎಷ್ಟು ದಿನ ತಾನೆ ಉಪವಾಸ ಕುಳಿತಾರು? ...ಜಾಗ ಖಾಲಿ ಮಾಡಿಹೋಗುತ್ತಾರೆ, ಅಲ್ಲಿವರೆಗೆ ...ರಿನಲ್ಲಿ ಜಾಲಿಟ್ರಿಪ್ ಮುಗಿಸಿ ಬಂದರಾಯ್ತು' ...ಕೊಂಡಿದ್ದವನಿಗೆ ಕಾರ್ಮಿಕರ ಅಚಲ ಹೋರಾಟ ...ಟ್ಟಿಸಿತ್ತು. ಧರಣಿ ನಿರತರ ಬಳಿ ಯಾವ ಕಾಂಗ್ರೆಸಿಗರು ...ಕೂಡದೆಂದು ಗುಪ್ತ ಫರ್ಮಾನು ಹೊರಡಿಸಿದ್ದನೆನ್ನುವ ...ಕೂಡ ಈಗ ಬಯಲಾಗಿದೆ.

...ಸಾದ್ ಅಬ್ಬಯ್ಯನ ಫರ್ಮಾನಿನ ಹೊರತಾಗಿಯೂ ...ಗರಾದ ಬಾಬಾಜಾನ ಮುಧೋಳ, ಎಂಎಲ್‌ಸಿ ...ಪ ಛಬ್ಬಿಯ ಶಿಷ್ಯ ಯುವ ಕಾಂಗ್ರೆಸ್ ಅಧ್ಯಕ್ಷ ನಾಗರಾಜ ... ಕೆಪಿಸಿಸಿ ರಾಜ್ಯ ಕಾರ್ಯದರ್ಶಿ ರಾಜಶೇಖರ ...ನಕಾಯಿಯಂತವರು ಹೋರಾಟಕ್ಕೆ ಕೈಜೋಡಿಸಿದ್ದರು. ... ಜಿಲ್ಲಾ ಉಸ್ತುವಾರಿ ಸಚಿವ ದಿನೇಶ ಗುಂಡೂರಾವ್ ...ನ್ ಮಾಜಿ ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಸದಾನಂದ ...ವತ ಧರಣಿಯ ಇಂಚಿಂಚೂ ಪ್ರಖರತೆಯನ್ನು ...ಗೆ ತಲುಪಿಸಿದ್ದರು. ಸ್ವಪಕ್ಷೀಯರಿಂದಲೇ ಛೀಮಾರಿ ...ಕೊಂಡ ಶಾಸಕ ಪ್ರಸಾದ ಅಬ್ಬಯ್ಯ ಅನಿವಾರ್ಯವಾಗಿ ...ನ ಧರಣಿ ನಿರತ ಸ್ಥಳಕ್ಕೆ ಧಾವಿಸಿದ್ದ.

...ಗೆ ಬಂದವನು ಪ್ರಸ್ತುತ ಸಮಸ್ಯೆ ಮತ್ತು ಹೋರಾಟ ... ಬೇಡಿಕೆಗಳ ಸಾಧಕ-ಬಾಧಕಗಳ ಬಗ್ಗೆ ಮಾತನಾಡು... ಬಿಟ್ಟು ರಾಜಕೀಯ ಭಾಷಣ ಶುರು ಮಾಡಿದ್ದ. ...ಸ ಕೂರುವಷ್ಟು ಆಕ್ರೋಶಿತರಾಗಿದ್ದ ಜನ ಅಬ್ಬಯ್ಯನ... ...ರಿ ಭಾಷಣ ಕೇಳುವಷ್ಟು ವ್ಯವಧಾನ ಉಳಿಸಿ ...ರಲಿಲ್ಲ. ಹಾಗಾಗಿ ಹೋರಾಟಗಾರರ ಮುಖಂಡ ...ರಂದ ಜಗಾಪೂರ 'ಮೊದಲು ವಿಷಯಕ್ಕೆ ಸಂಬಂಧಿಸಿ ...ಡಿ. ಅದನ್ನು ಬಿಟ್ಟು ಬೇರೆ ಏನು ಬೇಡ. ನಿಮ್ಮ ...ಯ ಭಾಷಣ ಕೇಳಲು ನಾವಿಲ್ಲಿ ಕುಳಿತಿಲ್ಲ' ಅಂತ ... ಮುಟ್ಟಿಸಿದ್ದರು.

...ಜ್ಞಾವಂತನಾಗಿದ್ದಿದ್ದರೆ ಅಲ್ಲಿ ಮಡುಗಟ್ಟಿರುವ ...ಶವನ್ನು ಆಗಲಾದರೂ ಅಬ್ಬಯ್ಯ ಅರ್ಥಮಾಡಿ...ತ್ತಿದ್ದ; ಅದಕ್ಕೆ ತಕ್ಕಂತೆ ವ್ಯವಹರಿಸುತ್ತಿದ್ದ. ಆದರೆ ...ೇ ಆತನಿಂದ ಹೊರಟಿದ್ದು 'ಸರಿ, ನಿಮಗೆ ಒಂದು ...ಯಿಗೆ 1 ಕೆಜಿ ಅಕ್ಕಿ ಬೇಕೆ? ಅಥವಾ ಮನೆ ... ಎಂಬ ಅಸಂಬದ್ಧ ಪ್ರಶ್ನೆ. ಇದನ್ನು ಕೇಳಿದ ಧರಣಿ ...ಗೆ ಶಾಸಕನ ಉದ್ದೇಶದ ತಲೆಬುಡ ಅರ್ಥವಾಗಲಿಲ್ಲ. ...ನೋ ಸಮಸ್ಯೆ ಬಗೆಹರಿಸಲು ಬಂದಿದ್ದಾನೋ ಅಥವಾ ...ಪಿಟ್ಟು ಹೋರಾಟವನ್ನೇ ಹತ್ತಿಕ್ಕಲು ಬಂದಿದ್ದಾನೋ ... ಗೊಂದಲು ಸತ್ಯಾಗ್ರಹಿಗಳಲ್ಲಿ ಮನೆಮಾಡಿತ್ತು.

...ದನ್ನು ಅರ್ಥ ಮಾಡಿಕೊಂಡವನಂತೆ ಉಪನ್ಯಾಸಕ್ಕಿಳಿದ ...ದ್ಯ, 'ಇಲ್ನೋಡಿ, 300 ಚದರ ಅಡಿ ...ರ್ಮೆಂಟ್) ಅಳತೆಯ ಒಂದು ಮನೆ ಕಟ್ಟಲು ... ಖರ್ಚು ಬರುತ್ತದೆ. ಅದಕ್ಕೋಸ್ಕರ ನೀವು 1 ...ರೆಗೆ ಹಣ ಕಟ್ಟಬೇಕಾಗುತ್ತದೆ. ನಿಮ್ಮಿಂದ ಇದು ...? ಎಂದು ತನ್ನ ಅಜೆಂಡಾ ಹೊರಹಾಕಿದ್ದ. ಹಣ ... ಯೋಗ್ಯತೆ ಇಲ್ಲದ ನಿಮಗೆ ಮನೆಯ ಉಸಾಬರಿ ...ಮ್ಮನೇ ಸಿದ್ರಾಮಣ್ಣ ಕೊಡುವ ರೂಪಾಯಿಗೊಂದು ಕೆಜಿ ಅಕ್ಕಿ ತಗೊಂಡು ತೆಪ್ಪಗಿರಿ, ರೇಶನ್ ಅಕ್ಕಿ ತಿನ್ನುತ್ತಾ ಗುಡಿಸಲಿನಲ್ಲಿ ಬದುಕಿ ಅದನ್ನು ಬಿಟ್ಟು ಹೊರಬರಬೇಡಿ, ನಾವು ಈ ಮನೆಗಳನ್ನು ಉಳ್ಳವರಿಗೆ ಮಾರಿಕೊಳ್ತೇನೆ ಎಂಬುದಷ್ಟೇ ಪ್ರಸಾದ್ ಅಬ್ಬಯ್ಯನ ಮನದೊಳಗಿದ್ದ ಹಕೀಕತ್ತು. ಸುತ್ತಿಬಳಸಿ ಅದು ಆ ರೂಪದಲ್ಲಿ ವ್ಯಕ್ತವಾಗಿತ್ತು.



ಧರಣಿ ನಿರತರಿಗೆ ಲಿಖಿತ ರೂಪದಲ್ಲಿ ಭರವಸೆ ನೀಡುತ್ತಿರುವ ಅಬ್ಬಯ್ಯ

ಶಿಗ್ಗಾಂವಿಯಲ್ಲಿ ಜಿ-1 ಮಾದರಿಯಲ್ಲಿ ಈಗಾಗಲೇ ಆಶ್ರಯ ಮನೆಗಳು ನಿರ್ಮಾಣಗೊಳ್ಳುತ್ತಿದ್ದು ಪ್ರತಿಯೊಂದು ಮನೆಯ ವೆಚ್ಚ 2 ಲಕ್ಷ 20 ಸಾವಿರ ಇದೆ. ಹುಬ್ಬಳ್ಳಿ ಮಹಾನಗರ ಆಗಿರೋದರಿಂದ ತುಸು ಹೆಚ್ಚೆಂದರೆ ಎರಡೂವರೆ ಬೇಡ ಮೂರು ಲಕ್ಷ ಖರ್ಚಾಗಬಹುದು ಅಂತಲೇ ಭಾವಿಸೋಣ. ಅಂತದ್ದರಲ್ಲಿ ಒಂದು ಮನೆ ನಿರ್ಮಿಸಲು ಐದು ಲಕ್ಷ ಖರ್ಚಾಗುತ್ತದೆಂದು ಅದ್ಯಾವ ಇಂಜಿನಿಯರ್ ಎಸ್ಟಿಮೇಟ್ ಕೊಟ್ಟನೋ ದೇವರೇ ಬಲ್ಲ. ಅದೆಲ್ಲ ಒತ್ತಟ್ಟಿಗಿರಲಿ, ಒಬ್ಬ ಜನಪ್ರತಿನಿಧಿಯಾಗಿ ನಿರ್ಮಾಣವೆಚ್ಚವನ್ನು ತೋರಿಸಿ ಜನರನ್ನು ಬೆದರಿಸುವ ಅಗತ್ಯವಾದರೂ ಏನಿದೆ. ಸರ್ಕಾರ ಮಂಜೂರು ಮಾಡುತ್ತೆ, ಅರ್ಹರಿಗೆ ತಲುಪಿಸಬೇಕಾದ್ದು ಸ್ಥಳೀಯ ಶಾಸಕನ ಹೊಣೆ. ಆದರೆ ಅದು ಪ್ರಾಮಾಣಿಕ ಫಲಾನುಭವಿಗಳಿಗೆ ತಲುಪು ವಂತಾಗಲಿ ಎಂಬುದಷ್ಟೇ ಧರಣಿ ನಿರತರ ಬೇಡಿಕೆಯಾಗಿತ್ತು. ಆದರೆ ಅಬ್ಬಯ್ಯನ ಮಾತುಗಳು ಹೋರಾಟಕ್ಕೇ ತದ್ವಿರುದ್ಧವಾಗಿ ಮೂಡಿಬಂದಿದ್ದವು.

ಮೊದಲೇ ರಿಯಲ್ ಎಸ್ಟೇಟ್ ದಲ್ಲಾಳಿಯಂತೆ ವರ್ತಿಸುತ್ತಿರುವ ಈ ಜನಗೇಡಿ ಶಾಸಕ ಇಂತಹ ಹುನ್ನಾರ ನಡೆಸಿರುವುದು ಖಾತ್ರಿಯಾಗುತ್ತಿದ್ದಂತೆಯೇ ಅವನ ಯಾವ ಮನವೊಲಿಕೆಗೂ ಜಗ್ಗದೆ 'ನೀವು ಲಿಖಿತ ರೂಪದಲ್ಲಿ ಬರೆದುಕೊಟ್ಟರೆ ಮಾತ್ರ ಧರಣಿ ವಾಪಾಸ್ ಪಡೀತಿವಿ. ಇಲ್ಲವಾದಲ್ಲಿ ಇಂತಹ ವಿತಂಡವಾದಗಳನ್ನು ವೇಸ್ಟ್ ಮಾಡಿಕೊಳ್ಳಬೇಡಿ' ಅಂತ ಜನ ಪಟ್ಟು ಬಿಗಿಗೊಳಿಸಿದ್ದರು. ವಿಧಿ ಇಲ್ಲದೆ ಶಾಸಕ ಲಿಖಿತವಾಗಿ ಬರೆದುಕೊಟ್ಟಿದ್ದಾನೆ. ಅಷ್ಟಕ್ಕೇ ಎಲ್ಲಾ ಸರಿಹೋಯಿತೆಂದು ಕೂರುವಂತಿಲ್ಲ, ಪರಿಸ್ಥಿತಿ ಅಷ್ಟು ನಾಜೂಕಾಗಿದೆ.

ಅಬ್ಬಯ್ಯನ ಅಜೆಂಡಾ

ಆಂಧ್ರದಿಂದ ಬಂದು ಇಲ್ಲಿ ನೆಲೆಯೂರಿದ್ದ ಅಬ್ಬಯ್ಯನ ತಂದೆ ರಾಜ್ಯ ಸರಕಾರಿ ನೌಕರಿಯಲ್ಲಿದ್ದುಕೊಂಡೇ ಸಾಕಷ್ಟು ಕಮಾಯಿ ಮಾಡಿಕೊಂಡಿದ್ದ. ಜೊತೆಗೆ ಹಿರಿಯ ಮಗನನ್ನು ಇಂಜಿನಿಯರಿಂಗ್ ಓದಿಸಿ ಪಿಡಬ್ಲೂಡಿಯಲ್ಲಿ ನೌಕರಿಯನ್ನೂ ಕೊಡಿಸಿದ್ದ. ಇನ್ನುಳಿದವರೂ ಸಿವಿಲ್ ಇಂಜಿನಿಯರಿಂಗ್ ಡಿಪ್ಲೊಮಾ ಮಾಡಿಕೊಂಡವರೆ. ಶಾಸಕ ಅಬ್ಬಯ್ಯ ಆ ಕುಟುಂಬದ 3ನೇ ಕಣ್ಣು. ನಾಲ್ಕನೆಯವನಾದ ಮಂಜುನಾಥ್ ಅಬ್ಬಯ್ಯ ಇಷ್ಟು ದಿನ ಬೇಸಾಯ, ವ್ಯವಹಾರ ಮಾಡಿಕೊಂಡಿದ್ದವ ಇದೀಗ ಅಣ್ಣ ಶಾಸಕನಾಗುತ್ತಿದ್ದಂತೆ ತಾನೇ ಎಂಎಲ್‌ಎ ಎನ್ನುವ ರೀತಿ ಮೆರೆದಾಡುತ್ತಿದ್ದಾನೆ. ಜನ ಸದ್ಯ ಈತನನ್ನು ಎಂಎಲ್‌ಎ ಮಂಜ ಅಂತಲೇ ಕರೆಯುತ್ತಿದ್ದಾರೆ. ಇದಿಷ್ಟು ಶಾಸಕನ ಸಾದಾ-ಟಿಪ್ಪಣಿ.

ಈ ಮಂಜುನಾಥ್ ಅಬ್ಬಯ್ಯನ ಟೀಮು ಬಲು ಚಾಲಾಕಿಯದ್ದು. ಸ್ಪಿರಿಟ್ ಕುಳ ಗಜು ಹಬೀಬ, ಕಾರ್ಪೊರೇಟರ್ ಕಂ ತೆಲುಗು ಬಿಡ್ಡ ಗಣೇಶ ಟಗರಗುಂಡಿ, ಪಾಟೀಲ, ಓಸಿ ಚೀಟಿ ಗ್ಯಾಂಬ್ಲಿಂಗ್ ದಂಧೆ ನಡೆಸುವ ಕಾರ್ಪೊರೇಟರ್ ಬಶೀರ ಗೂಡಮಾಲ ಮೊದಲಾದವರೇ ಇವನ ಆಪ್ತ ಬಳಗ. ಪ್ರಸಾದ್ ಅಬ್ಬಯ್ಯನ ಮತ್ತೊಬ್ಬ ಸಹೋದರ ರಿಯಲ್ ಎಸ್ಟೇಟ್ ಕುಳ ಧರ್ಮದಾಸ ಅಬ್ಬಯ್ಯ ಉರ್ಫ್ ಧರ್ಮಣ್ಣನ ಗ್ಯಾಂಗ್‌ನಲ್ಲಿ ನೇಕಾರ ನಗರದ ಹರಾಮಿ ಕಾರ್ಪೊರೇಟರ್ ಮಂಜುನಾಥ್ ಚಿತ್ರಗಿಂಜಲ್, ಕಮರಿಪೇಟೆಯ ಡಿ.ಕೆ. ಚವ್ಹಾಣನಂತಹ ಡೀಲಿಂಗ್ ಕುಳಗಳೇ ತುಂಬಿಕೊಂಡಿವೆ. ಮಾತೆತ್ತಿದ್ದರೆ ನನಗೆ ರಾಹುಲ್ ಗಾಂಧಿ ಗೊತ್ತು, ಹೈಕಮಾಂಡ್ ಮಟ್ಟದ ಕೆಲಸಗಳಿದ್ದರೆ ಹೇಳಿ ನಾನು ರಾಹುಲ್‌ನೊಡನೆ ಮಾತನಾಡಿ ಬಗೆಹರಿಸುತ್ತೇನೆ ಎಂಬ ಡೈಲಾಗ್ ಉದುರಿಸುವ ಧರ್ಮಣ್ಣ 'ನಮಗೆ ಎಲ್ಲಾ ಪಾರ್ಟಿಯವರು ಬೇಕು, ಯಾಕೆಂದರೆ ಪ್ರಸಾದ್‌ಗೇ ಎಲ್ಲರೂ ಮತ ಹಾಕಿದ್ದಾರೆ' ಎನ್ನುವ ಅವಕಾಶವಾದಿ ಒಕ್ಕಣೆ ಹಾಕುವುದು ಮರೆಯುವುದಿಲ್ಲ.

ದಲಿತ ಶಾಸಕ, ತಳಸಮುದಾಯದ ಶೋಷಿತ ವರ್ಗಗಳ ಆಶಯಗಳಿಗೆ ಧ್ವನಿಯಾಗುತ್ತಾನೆ ಎಂಬ ಭರವಸೆಗಳೇ ಪ್ರಸಾದ್ ಅಬ್ಬಯ್ಯನ ವಿಚಾರದಲ್ಲಿ ಬತ್ತಿಹೋಗಿವೆ. ಶಿಫಾರಸ್ಸು ಪತ್ರ ಕೊಟ್ಟು ಆಕಾಶ ತೋರುವ ಅಬ್ಬಯ್ಯ ಹಣದ ಥೈಲಿ ಕಡೆಗೆ ಸರಾಗವಾಗಿ ಹರಿದಾಡುತ್ತಾನೆ. 'ನನಗೆ ಸಾಕಷ್ಟು ಆಸ್ತಿ ಇದೆ, ಬೇರೆ ಯಾರದು ಹಣ ಬೇಡ, ಬಡವರ ಪರ ಕೆಲಸ ಮಾಡುತ್ತೇನೆ' ಎಂಬ ಆಶ್ವಾಸನೆ ಮೂಲಕ ಗೆದ್ದುಬಂದ ಅಬ್ಬಯ್ಯ ತನ್ನ ಸುತ್ತ ಜನಕಂಟಕರನ್ನೇ ಸಾಕಿಕೊಂಡಿದ್ದಾನೆ.


ಅಬ್ಬಯ್ಯ ಹುಬ್ಬಳ್ಳಿಯಲ್ಲಿ ಗುರುತಿಸಿಕೊಳ್ಳಲು ನೆರವಾದದ್ದು ಕೊಲೆಯಾಗಿ ಹೋದ ಕಾಂಗ್ರೆಸ್ ಮುಖಂಡ ಹೊನ್ನಪ್ಪ ಗಾಣದಾಳ, ಅವನ ಸಹೋದರ ರಾಜು ಗಾಣದಾಳ, ಗೋಪಾಲಥಗೆ, ಪ್ರಭು, ಪ್ರಭಾಕರ, ದೊಡಮನಿ ಸಹೋದರರು. ಇಂದು ಅವರನ್ನೆಲ್ಲಾ ಮೂಲೆಗುಂಪು ಮಾಡಿರುವ ಶಾಸಕ ಸ್ಪಿರಿಟ್ ಕುಳ ಗಜು ಹಬೀಬನನ್ನು ಕಾರಿನಲ್ಲಿ ಕೂರಿಸಿಕೊಂಡು ತಿರುಗಾಡುತ್ತಾನೆ. ವಿಪರ್ಯಾಸವೆಂದರೆ ಕಳೆದ ಚುನಾವಣೆಯಲ್ಲಿ ಇದೇ ಪ್ರಸಾದ್ ಅಬ್ಬಯ್ಯನನ್ನು ಸೋಲಿಸಬೇಕೆಂದು ಅರಚಾಡಿದ್ದ ಹಳೇ ಅಂಗಿ ಜಬ್ಬರ್‌ಖಾನ್ ಹೊನ್ನಳ್ಳಿ ಇವತ್ತು ಅಬ್ಬಯ್ಯನ ಪರ್ಯಾಪ್ತನ ಪಟ್ಟಿಯಲ್ಲಿದ್ದಾನೆ. ಆದರೆ ಅಬ್ಬಯ್ಯನ ಗೆಲುವಿಗೆ ಶ್ರಮಿಸಿದ್ದ ಮಹಾನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಾಜಿ ಸಚಿವ ಹಿಂಡಸಗೇರಿ ಮತ್ತವರ ಬಣದ ಎಫ್.ಎಚ್. ಜಕ್ಕಪ್ಪನವರ, ಮೋಹನ ಹಿರೇಮನಿ, ಸತೀಶ ಮೆಹರವಾಡೆರಂತಹವರು ಅಬ್ಬಯ್ಯನಿಗೆ ರುಚಿಸುತ್ತಿಲ್ಲ. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಎಲ್ಲಾ ಸುಖ ಅನುಭವಿಸಿ ಲಾಭ ಮಾಡಿಕೊಂಡು ಸೋತಾಗ ಬಿಜೆಪಿ ಸೇರಿದ್ದ ರಾಜಾ ದೇಸಾಯಿ, ಎಲ್ಲಾ ನಾಯಕರಿಗೂ ಬಕೇಟ್ ಹಿಡಿವ ಸಿರಾಜುದ್ದಿನ್ ಕುಡಚಿವಾಲಾನಂತವರು ಪ್ರಸಾದನ ಸುತ್ತ ಸುಳಿದಾಡುತ್ತಿದ್ದಾರೆ.

ಅಸಲಿಗೆ ಪ್ರಸ್ತುತ ಬಡ ಕಾರ್ಮಿಕರ ಸೂರಿಗಾಗಿ ಹೋರಾಟಕ್ಕೆ ದೊಡ್ಡ ಮುಳ್ಳಾಗಿರೋದು ಇದೇ ಸಿರಾಜುದ್ದೀನ್ ಕುಡಚಿವಾಲಾ. ಇವನ ತಾಯಿ ಬೀಡಿ ಕಾರ್ಮಿಕಳಾಗಿದ್ದರೆ, ತಂದೆ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಮೊಳೆ ಜೋಡಿಸುವ ಕೆಲಸ ಮಾಡಿಕೊಂಡಿದ್ದಾತ. ಆದರೆ ಸಿರಾಜ್ ಇವತ್ತು ಕೋಟಿ ಲೆಕ್ಕದಲ್ಲಿ ತೂಗುತ್ತಾನೆ. ಅವನ ಈ ಸಿರಿವಂತಿಕೆಯ ಹಿಂದಿರುವುದು ಇದೇ ಬೀಡಿ ಕಾರ್ಮಿಕರಿಂದ ವಂಚಿಸಿದ ಹಣ. ಹನ್ನೆರಡು ವರ್ಷಗಳ ಹಿಂದೆಯೇ ಜಬ್ಬರ್‌ಖಾನ್ ಹೊನ್ನಳ್ಳಿ ಶಾಸಕನಾಗಿದ್ದಾಗ ಈ ಸಿರಾಜ್ ಬೀಡಿ ಕಾರ್ಮಿಕರ ಹೆಸರಲ್ಲಿ ಸೊಸೈಟಿ ಪ್ರಾರಂಭಿಸಿ ಅದಕ್ಕೆ ಹೊನ್ನಳ್ಳಿಯನ್ನು ಅಧ್ಯಕ್ಷನನ್ನಾಗಿ, ತನ್ನನ್ನು ಕಾರ್ಯದರ್ಶಿಯನ್ನಾಗಿ ನಿಯೋಜಿಸಿಕೊಂಡಿದ್ದ. ಆಗ ರಾಜ್ಯ ಸರ್ಕಾರ ಬೀಡಿ ಕಾರ್ಮಿಕರಿಗೆಂದು ಅನುದಾನ ಬಿಡುಗಡೆ ಮಾಡಿತ್ತು. ಅದೇ ಅನುದಾನದಲ್ಲಿ 200 ಮನೆಗಳನ್ನು ನಿರ್ಮಿಸಿ ಬೀಡಿ ಕಾರ್ಮಿಕರಿಗೆ ಹಂಚುವುದೆಂದು ತೀರ್ಮಾನಿಸಲಾಗಿತ್ತು. ಆಗ ಮನೆ ಕೊಡಿಸುವುದಾಗಿ ತಾನು ಸ್ಥಾಪಿಸಿದ್ದ ಸೊಸೈಟಿಯ ಮೂಲಕ 1000 ಬೀಡಿ ಕಾರ್ಮಿಕರಿಂದ ತಲಾ ಹತ್ತು ಸಾವಿರದಂತೆ ಹಣ ಬಾಚಿಕೊಂಡಿದ್ದ ಸಿರಾಜ್ ಹುಬ್ಬಳ್ಳಿ ದೇನಾ ಬ್ಯಾಂಕ್‌ನ ತನ್ನ ಸ್ವಂತ ಖಾತೆಗೆ ತುಂಬಿಕೊಂಡು ರಾತ್ರೋರಾತ್ರಿ ಧನಿಕನಾಗಿದ್ದ. ಅದರಲ್ಲಿ 200 ಜನರಿಗೆ 12 ವರ್ಷಗಳ ನಂತರ ಮನೆಯೇನೊ ಸಿಕ್ಕಿದ್ದವು. ಆದರೆ ಉಳಿದವರು ಇವತ್ತಿಗೂ ಇವನ ಮನೆ ಎದುರು ದಿನಂಪ್ರತಿ ಜಮಾಯಿಸುತ್ತಿದ್ದಾರೆ. ಹೈಕೋರ್ಟ್‌ನಲ್ಲೂ ಕೇಸು ಜಡಿದಿದ್ದಾರೆ.

ಇತ್ತ ಯಾವಾಗ ಆಟೋಚಾಲಕರು ಮತ್ತು ಬೀಡಿ ಕಾರ್ಮಿಕರಿಗೆ ಹೊಸದಾಗಿ ಮನೆ ನಿರ್ಮಿಸಿಕೊಡಬೇಕೆಂದು ಒತ್ತಾಯ, ಧರಣಿಗಳು ಶುರುವಾದವೊ ಆಗಿಂದಲೇ ಈ ಸಿರಾಜ್ ಮತ್ತೆ ಆಕ್ಟಿವೇಟ್ ಆಗಿದ್ದಾನೆ. ಹೇಗೂ ಶಾಸಕ ಲಿಖಿತ ರೂಪದಲ್ಲಿ ಬರೆದುಕೊಟ್ಟಿರುವುದರಿಂದ ಮನೆ ಕಟ್ಟಿಸಿಕೊಡುವುದು ಕಾಯಂ. ಬೇರೆ ಯಾರಿಗೋ ಆ ಬಿಟ್ಟಿ ಮನೆಗಳು ಸಿಗುವ ಬದಲು ತನಗೆ ದುಡ್ಡುಕೊಟ್ಟಿದ್ದ ಹಳೆಯ ಗಿರಾಕಿಗಳಿಗೇ ಮನೆ ಸಿಕ್ಕುವಂತಾದರೆ ತಾನೆ ಮನೆ ಕೊಡಿಸಿದ್ದಾಗಿ ಬಿಟ್ಟಿ ಪ್ರಚಾರ ಪಡೆದುಕೊಂಡು ಅವರು ಹೇರಿರುವ ಕೇಸ್‌ನಿಂದಲೂ ಬಚಾವಾಗಬಹುದೆನ್ನುವುದು ಅವನ ಹುನ್ನಾರ. ಹಾಗಾಗಿ ಶಾಸಕನ ತಮ್ಮ ಮಂಜು ಅಲಿಯಾಸ್ ಎಂಎಲ್‌ಎ ಮಂಜನ ಬಳಿ 'ಪ್ರತಿಯೊಬ್ಬರಿಂದ 5 ಸಾವಿರ ಹಣ ಕೊಡಿಸುತ್ತೇನೆ. ನನ್ನ ಬಳಿ ಇರುವ ಬೀಡಿ ಕಾರ್ಮಿಕರಿಗೇ ಮನೆ ದಕ್ಕುವಂತೆ ಮಾಡಿ' ಎಂಬ ಡೀಲ್ ಕುದುರಿಸಿಕೊಂಡಿರುವ ವದಂತಿಗಳೂ ಹರಿದಾಡುತ್ತಿವೆ. ಈಗಾಗಲೇ ಯಲ್ಲಾಪುರ ಗ್ರಾಮದಲ್ಲಿರುವ ಆಶ್ರಯ ಬಡಾವಣೆಗೆಂದು ಖರೀದಿಸಿದ 35 ಎಕರೆ ಜಮೀನಿನಲ್ಲಿ 1ನೇ ಹಂತದಲ್ಲಿ 1000 ಮನೆ ನಿರ್ಮಾಣಕ್ಕೆ ಮಂಜೂರಾತಿ ದೊರೆತಿದೆ. 3 ಸಾವಿರ ಮನೆಗಾಗಿ 13 ಸಾವಿರ ಅರ್ಜಿ ಬಂದಿವೆ. ಈ ಡಿಮ್ಯಾಂಡನೇ ಎನ್‌ಕ್ಯಾಶ್ ಮಾಡಲು ಸಿರಾಜ್ ಕುಡಚಿವಾಲಾ, ಟಗರಗುಂಟೆ, ಗೂಡಮಾಲ್‌ನಂತವರು ಶಾಸಕನ ದಲ್ಲಾಳಿಗಳಾಗಲು ತಯಾರಾಗಿ ನಿಂತಿದ್ದಾರೆ.


ಅಸಲಿಗೆ ಈ ಮನೆ ನೀಡುವ ವಿವಿಧ ಯೋಜನೆಗಳ ಮಾನದಂಡಗಳೇ ಒಂದೊಂದು ತೆರನಾಗಿವೆ. ಬಿಪಿಎಲ್ ಕಾರ್ಡ್ ಪಡೆಯಲು ವಾರ್ಷಿಕ ಆದಾಯ 15 ಸಾವಿರದಿಂದ 17 ಸಾವಿರ ಇರಬೇಕೆನ್ನುವುದು ನಿಯಮವಾದರೆ ಆಶ್ರಯ ಮನೆ ಹೊಂದಬೇಕಾದರೆ ವಾರ್ಷಿಕ ಆದಾಯ 40 ಸಾವಿರದಿಂದ 50 ಸಾವಿರ ಇರಬೇಕಂತೆ. ಇನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಡಿ ವಸತಿ ಸೌಕರ್ಯ ಪಡೆಯಲು ಮಾಸಿಕ ಆದಾಯ ಗರಿಷ್ಠ ರೂ. 7300/- ವರೆಗೆ ಹೊಂದಿರಬೇಕು. ಒಬ್ಬ ವ್ಯಕ್ತಿ ಬಡವ, ನಿರ್ಗತಿಕ ಅಂತ ನಿರ್ಧರಿಸುವ ಇಂತಹ ಮಾನದಂಡಗಳಲ್ಲೇ ಸಾಮ್ಯತೆ ಇಲ್ಲದಿರುವುದು ಇಂತಹ ದಲ್ಲಾಳಿ ರಾಜಕಾರಣಕ್ಕೆ ಚಾಪೆ ಹಾಸಿಕೊಟ್ಟಂತಾಗಿದೆ. ಸಿದ್ದರಾಮಯ್ಯನವರ ಸರ್ಕಾರವಾದರೂ ಇತ್ತಕಡೆ ಗಮನ ಹರಿಸುತ್ತದಾ ಕಾದುನೋಡಬೇಕು.

● ವರದಿಗಾರ



ಹೋರಾಟನಿರತ ಬೀಡಿ ಕಾರ್ಮಿಕರು ಮತ್ತು ಆಟೋ ಚಾಲಕರು


ಕಳ್ಳರಿಗೆ–ಕೊಲೆಗಡುಕರಿಗೆ 'ಅಚ್ಛೇ ದಿನ್'



ಮೋದಿ ಸರ್ಕಾರದ ದರ್ಬಾರಿನಲ್ಲಿ ಅಂಕೆಯಿಲ್ಲದ ಕಪಿಗಳಂತಾಗಿರುವ ಚೆಡ್ಡಿ ಪಡೆಗಳು ಒಂದೆಡೆ ಮತೀಯ ದ್ವೇಷದ ನಡೆನುಡಿಗಳನ್ನು ಹಿಂದೆಂದೂ ಇರದಂಥ ಮಟ್ಟಕ್ಕೇರಿಸಿವೆ. ಇನ್ನೊಂದೆಡೆ ಸರ್ಕಾರವೆ ದೇಶದ ಜಾತ್ಯತೀತ ಪರಂಪರೆಯನ್ನು ಅಳಿಸಿಹಾಕಲು ವಿಧವಿಧದ ಜಾಣ ನಡೆಗಳನ್ನು ಅನುಸರಿಸುತ್ತಿದೆ. ಮಗುದೊಂದೆಡೆ ಮೋದಿಯ ಗುಜರಾತ್ ಆಡಳಿತದ ಕಾಲದಲ್ಲಿ ಹಲವಾರು ನಕಲಿ ಎನ್ಕೌಂಟರ್ ನಡೆಸಿ ಜೈಲುಪಾಲಾಗಿದ್ದ ಪೊಲೀಸ್ ಅಧಿಕಾರಿಗಳು ಮತ್ತಿತರರು ಈಗ ಒಬ್ಬೊಬ್ಬರಾಗಿಯೇ ಜಾಮೀನು ಪಡೆದುಕೊಂಡು ಹಳೆ ಹುದ್ದೆಗಳಿಗೆ ಮರಳುತ್ತಿದ್ದಾರೆ ಅಥವಾ ಅವರ ಕೇಸುಗಳು ಖುಲಾಸೆಯಾಗುತ್ತಿವೆ. ಬಹಳ ವ್ಯವಸ್ಥಿತವಾಗಿ ನಡೆಯುತ್ತಿರುವ ಈ ಎಲ್ಲ ಕಾರ್ಯಾಚರಣೆಗಳನ್ನು ಪೋಣಿಸುವ ದಾರ ಒಂದೇ ಆಗಿದೆ. ಅದುವೆ ಆರೆಸ್ಸೆಸ್‌ನ 'ಹಿಂದೂ ರಾಷ್ಟ್ರ' ಸ್ಥಾಪನೆಯ ಕಲ್ಪನೆ. ಕೋಮು ಸೌಹಾರ್ದಕ್ಕಾಗಿ ಜೀವಬಿಟ್ಟ ತತ್ತ ಗಾಂಧೀಜಿಯನ್ನು ಮೋದಿ ಸರ್ಕಾರ ಸ್ವಚ್ಛತೆಯ ಕ್ಷುಲ್ಲಕ ವಿಷಯಕ್ಕೆ ಸೀಮಿತಗೊಳಿಸಿದ್ದು ಕೂಡ ಇದೇ ಕಾರಣಕ್ಕಾಗಿ.

ಅದೇ ರೀತಿ ಭಗವದ್ಗೀತೆಯನ್ನು ರಾಷ್ಟ್ರೀಯ ಧರ್ಮಗ್ರಂಥವೆಂದು ಘೋಷಿಸುವ ಹುನ್ನಾರ, 'ಘರ್ ವಾಪಸಿ', ಕ್ರಿಸ್‌ಮಸ್ ದಿನವನ್ನು ಉತ್ತಮ ಆಡಳಿತ ದಿನವಾಗಿ ಬದಲಾಯಿಸುವ ನಿರ್ಧಾರ ಇತ್ಯಾದಿಗಳೆಲ್ಲವೂ ಪ್ರತ್ಯಪ್ರತ್ಯೇಕ ಘಟನೆಗಳಲ್ಲ; ಅದೇ 'ಹಿಂದೂ ರಾಷ್ಟ್ರ' ಹಾರದ ಮಣಿಗಳು. ಇದಕ್ಕೆ ಇತ್ತೀಚಿನ ಸೇರ್ಪಡೆಯೆಂದರೆ ಸಂವಿಧಾನಕ್ಕೆ ಬಗೆದ ಅಪಚಾರ. ಈ ಬಾರಿಯ ಗಣತಂತ್ರ ದಿನದಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಮಂತ್ರಾಲಯ ಬಿಡುಗಡೆ ಮಾಡಿದ ಜಾಹೀರಾತಿನಲ್ಲಿ ಹಿನ್ನೆಲೆಯಾಗಿ ಹಳೆಯ (1950ರ) ಸಂವಿಧಾನದ ಪೀಠಿಕೆಯನ್ನು ನೀಡಲಾಗಿತ್ತು. ಎಲ್ಲರಿಗೂ ತಿಳಿದಿರುವ ಹಾಗೆ ಈ ಪೀಠಿಕೆಯಲ್ಲಿ ಜಾತ್ಯತೀತ ಮತ್ತು ಸಮಾಜವಾದಿ ಎಂಬ ಪದಗಳಿರಲಿಲ್ಲ; ಅವನ್ನು ಜನವರಿ 1977ರಲ್ಲಿ ಸಂಸತ್ತಿನ ಅನುಮೋದನೆಯೊಂದಿಗೆ ಸೇರಿಸಲಾಗಿದೆ. ಈಗ ಇದೇ ಅಧಿಕೃತ, ಅಂಗೀಕೃತ ಸಂವಿಧಾನವಾಗಿದ್ದು ಇದನ್ನು ಉಲ್ಲಂಘಿಸುವ ಜಾಹೀರಾತುಗಳನ್ನು ಕೊಡುವುದು ತಪ್ಪಾಗುತ್ತದೆ. ಆದರೆ ಇವತ್ತಿನ ದೊಡ್ಡ ದುರಂತ ಏನೆಂದರೆ ಸಂವಿಧಾನದ ಉಲ್ಲಂಘನೆಗೆ ಏನು ಶಿಕ್ಷೆಯೆಂದು ಎಲ್ಲೂ ಸೂಚಿಸದಿರುವುದರಿಂದ ಸಂವಿಧಾನದ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸುವ ಜನಪ್ರತಿನಿಧಿಗಳು, ಸರಕಾರಿ ಅಧಿಕಾರಿಗಳು ಮೊದಲಾದವರು ನಂತರ ಸಂವಿಧಾನವನ್ನು ಉಲ್ಲಂಘಿಸಿಯೂ ಶಿಕ್ಷೆಯಿಂದ ಪಾರಾಗುತ್ತಿದ್ದಾರೆ.


ಮತ್ತೊಂದು ಆಕ್ಷೇಪಣೀಯ ಬೆಳವಣಿಗೆಯಲ್ಲಿ ಗುಜರಾತಿನ ಮಾಜಿ ಉಪಗೃಹಸಚಿವ, ಬಿಜೆಪಿಯ ಹಾಲಿ ಅಧ್ಯಕ್ಷ ಅಮಿತ್ ಶಾನ ಆಪ್ತ ವಲಯಕ್ಕೆ ಸೇರಿದ್ದ ಅಥವಾ/ಮತ್ತು ಆತನ ಜೊತೆ ನೇರ ಯಾ ಪರೋಕ್ಷ ಸಂಪರ್ಕದಲ್ಲಿದ್ದ ಗುಪ್ತಚರ ಇಲಾಖೆಯ ಮಾಜಿ ಅಧಿಕಾರಿ ರಾಜೆಂದರ್ ಕುಮಾರ್, ಪೊಲೀಸ್ ಅಧಿಕಾರಿಗಳಾದ ಜಿ.ಎಲ್.ಸಿಂಘಾಲ್, ಅನಜು ಚೌಧರಿ, ಅಭಯ ಚೂಡಾಸಮ, ಡಿ.ಜಿ. ವಂಜಾರ, ಪಿ.ಪಿ.ಪಾಂಡೆ ಮತ್ತು ರಾಜಸ್ತಾನ, ಗುಜರಾತ್ ರಾಜ್ಯಗಳ ಐವರು ಪೊಲೀಸರ ಕೊರಳಿಗೆ ಬಿಗಿದಿದ್ದ ಉರುಳನ್ನು ಸಡಿಲಗೊಳಿಸಲಾಗಿದೆ. ಇವರಲ್ಲನೇಕರಿಗೆ ತಮ್ಮ ಹಿಂದಿನ ಕುರ್ಚಿಗಳು ಮರಳಿ ದೊರೆತಿವೆ. ಇನ್ನು ಸರ್ಕಾರದ ಅನುಮತಿ ಸಿಗಲಿಲ್ಲವೆಂಬ ನೆಪವನ್ನಿಟ್ಟುಕೊಂಡು ಶಾನ ಆಪ್ತಮಿತ್ರ, ಮಾಜಿ ಪೊಲೀಸ್ ಮಹಾನಿರ್ದೇಶಕ ಪಿ.ಸಿ.ಪಾಂಡೆ ವಿರುದ್ಧದ ಪ್ರಕರಣವನ್ನು ರದ್ದುಗೊಳಿಸಲಾಗಿದೆ. ಮಾಲೆಗಾಂವ್ ಪ್ರಕರಣದಲ್ಲಿ ತಪ್ಪೊಪ್ಪಿಕೊಂಡ ಸ್ವಾಮಿ ಅಸೀಮಾನಂದನಿಗೂ ಜಾಮೀನು ಸಿಕ್ಕಿದೆ. ಸ್ನೂಪ್‌ಗೇಟ್ ಪ್ರಕರಣಕ್ಕೂ ತೆರೆಬಿದ್ದಿದೆ. ಮಹತ್ವದ ಬೆಳವಣಿಗೆಯೊಂದರಲ್ಲಿ ಭೂಗತ ಡಾನ್‌ಗಳು, ಹಿರಿಯ ಪೊಲೀಸ್ ಅಧಿಕಾರಿಗಳು, ರಾಜಕಾರಣಿಗಳು ಮತ್ತು ವಾಣಿಜ್ಯೋದ್ಯಮಿಗಳ ದುಷ್ಟ ಕೂಟವೊಂದನ್ನು ಕಟ್ಟಿಕೊಂಡು ಕೊಲೆ, ಪಿತೂರಿ, ನಕಲಿ ಎನ್ಕೌಂಟರ್ ಇತ್ಯಾದಿ ನಾನಾ ಕ್ರಿಮಿನಲ್ ಕೃತ್ಯಗಳಲ್ಲಿ ಭಾಗಿಯಾಗಿದ್ದ ಆರೋಪ ಎದುರಿಸುತ್ತಿದ್ದ ಅಮಿತ್ ಶಾ ನ್ಯಾಯಾಲಯದಿಂದ ಕ್ಲೀನ್




ಚಿಟ್ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾನೆ. ಮುಂದೆ ಖುಲಾಸೆಯಾಗಲು ಯಾರ ಸರದಿ ಎಂಬುದನ್ನು ಬಿಡಿಸಿ ಹೇಳಬೇಕೇ?

ಅತ್ತ ಕರ್ತವ್ಯಲೋಪ ಮಾಡಿದವರು ಪಾರಾಗುತ್ತಿದ್ದರೆ ಇತ್ತ ಕರ್ತವ್ಯನಿಷ್ಠ ಅಧಿಕಾರಿಗಳಿಗೆ ಯಾವ್ಯಾವುದೋ ಇಲಾಖೆಗಳಿಗೆ, ಯಾವ್ಯಾವುದೋ ಊರುಗಳಿಗೆ ವರ್ಗಾವಣೆಯ ಶಿಕ್ಷೆ ಸಿಗುತ್ತಿದೆ. ಉದಾಹರಣೆಗೆ ಸೊಹ್ರಾಬುದ್ದೀನ್ ಮತ್ತು ಇಶ್ರತ್ ಜಹಾನ್ ಪ್ರಕರಣಗಳ ತನಿಖೆಯಲ್ಲಿ ಭಾಗಿಯಾಗಿದ್ದ ರಜನೀಶ್ ರಾಯ್ ಮತ್ತು ಸತೀಶ್ ವರ್ಮರನ್ನು ದೂರದ ಊರುಗಳಿಗೆ ಎತ್ತಂಗಡಿ ಮಾಡಲಾಗಿದೆ. ಈ ರಜನೀಶ್ ರಾಯ್ ಎನ್ಕೌಂಟರ್‌ವೀರರಾದ ಡಿ.ಜಿ. ವಂಜಾರ, ರಾಜಕುಮಾರ್ ಪಾಂಡ್ಯನ್ ಮತ್ತು ದಿನೇಶ್ ಎಂ.ಎನ್.ರನ್ನು ಬಂಧಿಸಿದವನು. ಸತೀಶ್ ವರ್ಮ ನಕಲಿ ಎನ್ಕೌಂಟರ್ ಪ್ರಕರಣಗಳ ಎಸ್‌ಐಟಿ ಮತ್ತು ಸಿಬಿಐ ತನಿಖೆಗಳಲ್ಲಿ ನೆರವಾಗಿ ಹಿರಿಯ ಐಪಿ[ಎಸ್] ಅಧಿಕಾರಿಗಳ ವಿರುದ್ಧ ಸಾಕ್ಷ್ಯಾಧಾರ ಕಲೆಹಾಕಲು ಸಹಾಯ ಮಾಡಿದಾತ. ಸ್ನೂಪ್‌ಗೇಟ್ ಪ್ರಕರಣವನ್ನು ಮುಚ್ಚಲು ನೆರವಾದ ಜಿ.ಎಲ್.ಸಿಂಘಾಲ್‌ಗೆ ಒಳ್ಳೆಯ ಸ್ಥಾನ ಪ್ರಾಪ್ತವಾಗಿದೆ. ಮತ್ತೋರ್ವ ಬಿಜೆಪಿ ನಿಷ್ಠ ಪೊಲೀಸ್ ಅಧಿಕಾರಿ ಎ.ಕೆ.ಶರ್ಮನ ಜೇಬಿಗೆ ಜಬರ್ದಸ್ತ್ ಸಿಬಿಐ ಹುದ್ದೆಯೊಂದು ಬೀಳಲಿದೆ...

ಇವೆಲ್ಲವೂ ಸ್ಪಷ್ಟವಾಗಿ ಆರೆಸ್ಸೆಸ್‌ನ 'ಹಿಂದೂ ರಾಷ್ಟ್ರ' ಕನಸನ್ನು ನನಸಾಗಿಸಲು ಭರದ ಸಿದ್ಧತೆಗಳಾಗುತ್ತಿರುವುದನ್ನು ಸೂಚಿಸುತ್ತಿವೆ.



ಕಾನೂನು ವ್ಯವಸ್ಥೆಗೆ ತೊಗಾಡಿಯಾ ಕಂಟಕ



ಬೆಂಗಳೂರಿನ "ವಿರಾಟ್ ಹಿಂದೂ ಸಮಾಜೋತ್ಸವ"ದಲ್ಲಿ ಭಾಗವಹಿಸದಂತೆ ತೊಗಾಡಿಯಾ ಮೇಲೆ ಹೇರಲಾದ ನಿರ್ಬಂಧವನ್ನು ಎತ್ತಿಹಿಡಿದಿರುವ ರಾಜ್ಯ ಹೈಕೋರ್ಟು "ಯಾವುದೇ ಪ್ರದೇಶದ ಕಾನೂನು ಸುವ್ಯವಸ್ಥೆ ಕಾಪಾಡುವುದು ಅಲ್ಲಿನ ಸ್ಥಳೀಯ ಆಡಳಿತ ಪ್ರಾಧಿಕಾರದ ಜವಾಬ್ದಾರಿ. ಈ ನಿಟ್ಟಿನಲ್ಲಿ ಅದು ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ನ್ಯಾಯಾಲಯ ಮಧ್ಯಪ್ರವೇಶಿಸಬಾರದು" ಎಂಬ ಬಹಳ ಮಹತ್ವಪೂರ್ಣ ಟಿಪ್ಪಣಿಯನ್ನು ಬರೆದಿದೆ. ನ್ಯಾಯಾಲಯ ಭವಿಷ್ಯದ ಇಂತಹ ಎಲ್ಲಾ ಸಂದರ್ಭಗಳಲ್ಲಿಯೂ ಆ ಸಮುದಾಯ ಈ ಸಮುದಾಯ ಎನ್ನದೆ ಇದೇ ನಿಲುವನ್ನು ತಾಳುತ್ತಾ ಬರಲಿ ಎಂದು ಹಾರೈಸೋಣ.

ಆದರೆ 2003ರಲ್ಲಿ ಹೆಚ್ಚುಕಮ್ಮಿ ಇದೇ ತೆರನಾದ ಮತ್ತೊಂದು ಕಾರ್ಯಕ್ರಮಕ್ಕೆ ಸಂಬಂಧಿಸಿದ್ದ ಪ್ರಕರಣದಲ್ಲಿ ರಾಜ್ಯ ಹೈಕೋರ್ಟು ಬೇರೊಂದು ನಿಲುವನ್ನು ತಾಳಿತ್ತು. ಈ ವಿಚಾರ ಬಹುಶಃ ಹೆಚ್ಚಿನವರಿಗೆ ನೆನಪಿರಲಿಕ್ಕಿಲ್ಲ. 2003ರ ಫೆಬ್ರವರಿ 13ರಂದು ಮಂಗಳೂರಿನ ನೆಹರೂ ಮೈದಾನದಲ್ಲಿ ಒಂದು "ಬೃಹತ್ ಹಿಂದೂ ಸಮಾಜೋತ್ಸವ"ವನ್ನು ಹಮ್ಮಿಕೊಳ್ಳಲಾಗಿತ್ತು. ಅದಕ್ಕೆ ಮುಖ್ಯ ಭಾಷಣಕಾರನಾಗಿ ಇದೇ ತೊಗಾಡಿಯಾನನ್ನು ಆಹ್ವಾನಿಸಲಾಗಿತ್ತು. ಆ ಸಂದರ್ಭದಲ್ಲಿ ಆಗಿನ ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟರು ದ.ಕ. ಜಿಲ್ಲೆ ಕೋಮು ಸೂಕ್ಷ್ಮ ಪ್ರದೇಶ, ಇಲ್ಲಿ 1988ರಿಂದಲೂ ಸುರತ್ಕಲ್ ಗಲಭೆ, ಗೋಧ್ರೋತ್ತರ ಗಲಭೆ ಮುಂತಾದ ಹಲವಾರು ಕೋಮು ಸಂಘರ್ಷಗಳು ನಡೆದಿವೆ ಎನ್ನುತ್ತಾ ತೊಗಾಡಿಯಾ ಫೆಬ್ರವರಿ 10ರಿಂದ 25ರ ತನಕ ದ.ಕ. ಜಿಲ್ಲೆ ಪ್ರವೇಶಿಸದಂತೆ ನಿರ್ಬಂಧ ವಿಧಿಸಿದ್ದರು. (ಆದೇಶ: MAG (2) CR 352/2002-03, dated 7-2-2003)

ಇಂದಿನಂತೆ ಅಂದೂ ತೊಗಾಡಿಯಾ ಹೈಕೋರ್ಟ್ ಮೊರೆಹೋಗಿದ್ದ. ಹೈಕೋರ್ಟಿನಲ್ಲಿ ಸರಕಾರಿ ವಕೀಲರು ರಾಜ್ಯದ ಪರವಾಗಿ ವಾದಿಸುತ್ತಾ ತೊಗಾಡಿಯಾಗೆ ಮಂಗಳೂರಿನಲ್ಲಿ ಭಾಷಣಕ್ಕೆ ಅವಕಾಶ ನೀಡುವುದು ಅಪಾಯಕಾರಿ ಏಕೆಂದರೆ ಆತ 18.12.2002ರಂದು ಚಿಕ್ಕಮಗಳೂರಿನಲ್ಲಿ ಕೋಮು ಪ್ರಚೋದನಾಕಾರಿ ಭಾಷಣ ಮಾಡಿದ್ದ ಮತ್ತು ಆತನ ವಿರುದ್ಧ ಐಪಿಸಿ 153 ಎ, 295 ಎ, 143, 504 ಮತ್ತು 149ರಡಿ ಪ್ರಕರಣ (Crime No. 256 of 2002) ದಾಖಲಿಸಲಾಗಿದೆ ಎಂದು ನ್ಯಾಯಾಧೀಶರಿಗೆ ಮನವರಿಕೆ ಮಾಡಲೆತ್ನಿಸಿದರು.


ಎರಡೂ ಕಡೆಗಳ ವಾದಪ್ರತಿವಾದಗಳನ್ನು ಆಲಿಸಿದ ಹೈಕೋರ್ಟಿನ ಏಕಸದಸ್ಯ ಪೀಠ (ನ್ಯಾ| ಕೆ. ಶ್ರೀಧರ ರಾವ್) ತನ್ನ ಅಂತಿಮ ತೀರ್ಪಿನಲ್ಲಿ ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟರ ಆದೇಶವನ್ನು ತಳ್ಳಿಹಾಕಿತು ಮತ್ತು ತೊಗಾಡಿಯಾ ಯಾವುದೇ ಧರ್ಮ ಅಥವಾ ಸಮುದಾಯದ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಬಾರದೆಂಬ ಷರತ್ತು ವಿಧಿಸುತ್ತಾ ನಿರ್ಬಂಧವನ್ನು ಹಿಂತೆಗೆದುಕೊಳ್ಳಲು ಆದೇಶಿಸಿತು.

ಇದೇ ಇತಿಹಾಸ ಪುನರಾವರ್ತನೆ ಆಗಬಹುದೆಂದು ಭಾರಿ ನಿರೀಕ್ಷೆ ಇಟ್ಟುಕೊಂಡಿದ್ದ ಸಂಘ ಪರಿವಾರಿಗರಿಗೆ ಈ ಬಾರಿ ಬಿದ್ದ ಈ ಅನಿರೀಕ್ಷಿತ ಚಾಟಿಯೇಟು ತೀವ್ರ ಮುಖಭಂಗ ಉಂಟುಮಾಡಿರಬೇಕು.

- ಸುರೇಶ್ ಭಟ್ ಬಾಕ್ರಬೈಲ್, ಮಂಗಳೂರು

"ಸತ್ತರೇನ್ ಪುಟ್ಟರೆ" ಎಂದರೆ ಹೇಗೆ?

8-2-2015ರ ಗೌರಿ ಲಂಕೇಶ್ ಪತ್ರಿಕೆಯಲ್ಲಿ ಅಂಕಣಕಾರ ಡಾ. ಎಚ್.ವಿ. ವಾಸು ಈ ಸಲದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಡಾ. ಸಿದ್ದಲಿಂಗಯ್ಯನವರಿಗೆ ಕೆಲವು ಮಾರ್ಮಿಕ ಪ್ರಶ್ನೆಗಳನ್ನೆಸೆದು ಅವರನ್ನು ಮುಜುಗರಕ್ಕೀಡುಮಾಡಿದ್ದಾರೆ ಎಂದೆನಿಸುತ್ತದೆ. ವಾಸು ಕೇಳಿದ ಕೆಲವು ಪ್ರಶ್ನೆಗಳು ಹೀಗಿವೆ:



1. ಬಾಬಾ ಸಾಹೇಬ್ ಅಂಬೇಡ್ಕರ್ ಸುಟ್ಟು ಹಾಕಿದ ಮನುಧರ್ಮ ಶಾಸ್ತ್ರದಲ್ಲೂ ಒಳ್ಳೆಯದು ಇದೆ ಎಂಥದ್ದು ಸರಿಯೇ?
2. ಕರ್ನಾಟಕ ಕಂಡರಿಯದ ಭ್ರಷ್ಟ ಆಡಳಿತ ನೀಡಿದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರನ್ನು 'ಅಭಿನವ ಬಸವಣ್ಣ' ಎಂದು ಕರೆದುದರ ಔಚಿತ್ಯವೇನು?
3. ಕೋಮು ಸೌಹಾರ್ದಕ್ಕೆ ಕೊಳ್ಳಿ ಇಡುತ್ತಿರುವ ಸಂಘ ಪರಿವಾರದ ಬಗ್ಗೆ ಚಕಾರ ಎತ್ತಲಿಲ್ಲವೇಕೆ?
4. ನಿತ್ಯ ಬೆಳಗಾದರೆ ದಲಿತರ ಮೇಲೆ ದೌರ್ಜನ್ಯವೆಸಗುತ್ತಿರುವ ಸವರ್ಣೀಯರ ಬಗ್ಗೆ ಮೌನ ತರವೇ?
5. ಮತಾಂತರ, 'ಘರ್ ವಾಪಸಿ' ಮರು ಮತಾಂತರ ಮುಂತಾಗಿ ಅವಾಂತರ ಎಬ್ಬಿಸುತ್ತಿರುವವರ ಬಗ್ಗೆ ನಿಮ್ಮ ಪ್ರತಿಕ್ರಿಯೆ?
6. ಅಭಿವೃದ್ಧಿ ಹೆಸರಿನಲ್ಲಿ ಹಿಂದೆ ನೀಡಿದ್ದ ದಲಿತರ ತುಂಡು ಭೂಮಿಗಳೂ ಕಾರ್ಪೊರೇಟ್ ಕಂಪನಿಗಳ ಪಾಲಾಗುವಂತೆ ಕೇಂದ್ರ ರಿವರ್ಸ್ ಭೂಸುಧಾರಣೆ ತಿದ್ದುಪಡಿ ತರುವುದರ ಬಗ್ಗೆ ನಿಮ್ಮ ಅನಿಸಿಕೆ ಏನೂ ಇಲ್ಲವೆ?.... ಇತ್ಯಾದಿ...

ವಾಸು ಅವರು ಇನ್ನೂ ಒಂದು ಮಾತು ಹೇಳಿರುವುದು ಸಹ ಸರಿ. ಅದೇನೆಂದರೆ ಮುಂದೆ ಎಂದಾದರೊಮ್ಮೆ ಮತ್ತೆ ಬಿಜೆಪಿ ಸರ್ಕಾರ ಬಂದರೆ ಹೇಗೆ ಎಂದು ಮೇಲಿನ ಪ್ರಶ್ನೆಗಳಿಗೆ ಸಿದ್ದಲಿಂಗಯ್ಯನವರು ಉತ್ತರಿಸದೆ ತೆಪ್ಪಗಿದ್ದಿರಬಹುದು. ಯಾಕೆಂದರೆ ಊರ ಮಾರಿ ಜಾತ್ರೆಯಲ್ಲಿ ಉಂಡವನೇ ಜಾಣ ತಾನೇ?

ಒಂದು ಪತ್ರ

ಸಾಕವ್ವನ ಹಸಿದ 'ಮಕ್ಕಳು ಮರಿ' ಗೌಡನ ಹೊಲದ ಕಡಲೆಕಾಯಿ ಕದ್ದು ತಂದು ತಿಂದರೆ ಅದೇನು ಪ್ರಶ್ನಾರ್ಹವಲ್ಲವಾದರೆ, ಶತಮಾನಗಳಿಂದ ಅವಕಾಶ ವಂಚಿತರಾದ ಶ್ರೀಮಾನ್ ಸಿದ್ದಲಿಂಗಯ್ಯನಂಥವರು ಬಂದ ಅವಕಾಶವನ್ನು ಅನುಭೋಗಿಸಿದರೆ ತಪ್ಪೇನು? ಅಲ್ಲದೆ ಕಂಬಳದ ಓಟದ ಕೋಣಕ್ಕೆ ಓಡಿಸುವವನ ಚಾಟಿಯ ಏಟು ಏನೆಂದು ತಿಳಿಯುತ್ತದೆಯೇ ಹೊರತು ಅವನ ಕರಾಮತ್ತು ಏನೆಂದು ತಿಳಿಯದು.

ಹಾಗೇ ಪ್ರವಾಹದ ಎದುರು ಈಜುವ ದೇವನೂರ ಮಹಾದೇವರಂಥವರಿಗೆ ಮಾತ್ರ ಅದು ಏನೆಂದು ತಿಳಿಯುತ್ತದೆಯೇ ಹೊರತು ವ್ಯವಸ್ಥೆ ಎಂಬ ಪ್ರವಾಹದೊಂದಿಗೆ ಈಜಿ ಹೋಗುವ ಸಿದ್ದಲಿಂಗಯ್ಯನಂಥವರಿಗೆ ಹೇಗೆ ತಿಳಿದೀತು? ಇನ್ನೂ ಹೇಳಬೇಕೆಂದರೆ ಕತ್ತೆ ಮತ್ತು ಧರ್ಮದಂತಹ ಕವಿತೆ ಬರೆದ ವಿಚಾರವಂತ ಈ ಕವಿ ಮುಂದೆ ಒಂದು ದಿನ ಗಾಂಧೀಜಿಗೆ ಗುಂಡಿಕ್ಕಿದ ಗೂಡ್ಸೆ ಗುಡಿಯ ಪ್ರಾರಂಭೋತ್ಸವದಲ್ಲಿ ಭಾಗವಹಿಸಿ 'ಗೂಡ್ಸೆಯಲ್ಲೂ ಕೆಲವು ಒಳ್ಳೆಯ ಗುಣಗಳಿದ್ದವು' ಎಂದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ಆದರೂ "ಸತ್ತರೇನ್ ಪುಟ್ಟರೇ ಪೊರಮಡು ಕೌರವ ರಾಜಾ" ಎಂದು ಉದ್ಗರಿಸಿದ ರನ್ನನ ಭೀಮನ ಮಾತು ನೆನಪಾಗುತ್ತದೆ.

- ಪ್ರೊ. ಶಿವರಾಮಯ್ಯ, ಬೆಂಗಳೂರು

ಬಸವಣ್ಣನವರ ಆರ್ಥಿಕ ಪ್ರಜ್ಞೆ



ಕಾಯಕವು ನಮ್ಮ ದೈಹಿಕ ಮತ್ತು ಬೌದ್ಧಿಕ ಶಕ್ತಿಯನ್ನು ಹೆಚ್ಚಿಸುವುದು. ನಮ್ಮ ಆರೋಗ್ಯ ಮತ್ತು ಸೌಂದರ್ಯವನ್ನು ಕಾಪಾಡುವುದು. ಮಾನಸಿಕ ಒತ್ತಡಗಳಿಂದ ರಕ್ಷಿಸುವುದು. ಪರಾವಲಂಬಿಗಳಾಗದಂತೆ ನೋಡಿಕೊಳ್ಳುವುದು. ಕೊನೆಗೆ ನಮ್ಮನ್ನು ಸ್ವತಂತ್ರಧೀರರನ್ನಾಗಿ ಮಾಡುವುದು. "ಕೂಡಲಸಂಗನ ಶರಣರು ಸ್ವತಂತ್ರ ಧೀರರು" ಎಂದು ಬಸವಣ್ಣನವರು ಹೇಳುತ್ತಾರೆ. ಕಾಯಕ ಮಾಡದವನಿಗೆ ಹಸಿವು, ರುಚಿ, ವಿಶ್ರಾಂತಿ ಮತ್ತು ನಿದ್ರೆಯ ಮಹತ್ವ ಗೊತ್ತಾಗುವುದಿಲ್ಲ. ಕಾಯಕ ಜೀವಿಯ ಹಸಿವು ಎಲ್ಲ ಆಹಾರ ಪದಾರ್ಥಗಳನ್ನು ಪ್ರಸಾದವಾಗಿಸುತ್ತದೆ. ರುಚಿಕರವಾಗಿಸುತ್ತದೆ. ಆತನಿಗೆ ವಿಶ್ರಾಂತಿ ಮತ್ತು ನಿದ್ರೆಯ ಸುಖ ಸಹಜವಾಗಿಯೇ ಸಿಗುತ್ತದೆ. ಸತ್ಯಶುದ್ಧ ಕಾಯಕದಿಂದ ಮನಸ್ಸು ಪವಿತ್ರವಾಗಿರುತ್ತದೆ. ಆದ್ದರಿಂದ ಕಾಯಕ ತತ್ತ್ವವು ವಿಶ್ವಮಾನ್ಯವಾಗಿದೆ.

...ಸವಣ್ಣನವರು 850 ವರ್ಷಗಳ ಹಿಂದೆ ಜಾತಿಭೇದ, ...ದ, ಲಿಂಗಭೇದ, ವರ್ಗಭೇದ ಮತ್ತು ಕಾಯಕ ...ಲ್ಲದ ಹೊಸ ಪರ್ಯಾಯ ಸಮಾಜವನ್ನು ನಿರ್ಮಿಸು ...ತಸ್ಸು ಸಾಧಿಸಿದರು. ಅವರ ಸರ್ವಸಮಾನತೆಯ ...ಭುತ್ವವಾದಿ ಸಮಾಜ '21ನೇ ಶತಮಾನದ ನಮ್ಮ ...ಹೇಗಿರಬೇಕು' ಎಂಬುದಕ್ಕೆ ಮುನ್ಸೂಚನೆಯಾಗಿದೆ. ...ಪ್ರಭುತ್ವವಾದಿ ನೆಲೆಯ ಚಿಂತನಮಂಥನಕ್ಕಾಗಿ ... 'ಅನುಭವ ಮಂಟಪ' ಎಂಬುದು ವಿಶಿಷ್ಟವಾದ ...ೀ ಧಾರ್ಮಿಕ ಸಂಸತ್ ಆಗಿದೆ.

...ವಣ್ಣನವರು ಅನುಭವ ಮಂಟಪ ಸ್ಥಾಪಿಸುವುದರ ... ಜನರಲ್ಲಿ ಪ್ರಜಾಪ್ರಭುತ್ವದ ಅರಿವು ಮೂಡಿಸಿದ್ದರು. ... ಮೊದಲು ಮಾಡಿ ವಿವಿಧ ಜಾತಿಗಳ ಜನ ... ಮಂಟಪದಲ್ಲಿದ್ದರು. 770 ಅಮರಗಣಂಗಳಲ್ಲಿ ...ಲು ಮಂದಿ ವಿವಿಧ ಕಾಯಕಜೀವಿಗಳೇ ಆಗಿದ್ದರು. ... ತಾನಾದವನು ಅಂದರೆ ಸಕಲಜೀವಾತ್ಮರಿಗೆ ... ಬಯಸುವವನು ಮಾತ್ರ ಗಣ ಎಂದು ಕರೆಸಿಕೊಳ್ಳು ...ಗೆ ಶರಣರು ಎಲ್ಲ ರೀತಿಯ ಆರ್ಥಿಕ, ಸಾಮಾಜಿಕ ...ಧಾರ್ಮಿಕ ಅಸಮಾನತೆಗಳಿಗೆ ವಿರುದ್ಧವಾಗಿದ್ದರು.

...ಾಪ್ರಭುತ್ವದ ಆಶಯಗಳಿಗೆ ಪೂರಕವಾದ ...ಳನ್ನು ವಚನಕಾರರೆಲ್ಲ ಹೊಂದಿದ್ದರು ಎಂಬುದಕ್ಕೆ ...ಚಳವಳಿ ಮತ್ತು ವಚನಗಳು ಸಾಕ್ಷಿಯಾಗಿವೆ. ...ನವರು ಇಷ್ಟಲಿಂಗದ ಮೂಲಕ ದೇವರನ್ನು ...ಕರಣಗೊಳಿಸಿದರು. ಜಂಗಮಲಿಂಗದ ಮೂಲಕ ...ನನ್ನು ಸಾಮಾಜೀಕರಣಗೊಳಿಸಿದರು. ಮನುಷ್ಯ ...ಗಿಯೂ ಸಾಮಾಜೀಕರಣಗೊಂಡಾಗ ...ರುಣ್ಯದಿಂದ ತುಂಬಿದ ಸರ್ವಸಮಾನತೆಯ ...ಳ್ಳ ಶರಣನೆಂದೆನಿಸಿಕೊಳ್ಳುತ್ತಾನೆ.

...ನೇ ಶತಮಾನದಲ್ಲಿ ಕಮ್ಯೂನಿಸ್ಟ್ ತತ್ತ್ವಜ್ಞಾನಿ ... ಮಾರ್ಕ್ಸ್ "ಜಗತ್ತಿನ ಕಾರ್ಮಿಕರೇ ಒಂದಾಗಿರಿ. ...ಂದಾದರೆ ನಿಮ್ಮ ಸಂಕೋಲೆಗಳನ್ನು ಹೊರತುಪಡಿಸಿ ...ನನ್ನೂ ಕಳೆದುಕೊಳ್ಳುವುದಿಲ್ಲ" ಎಂದು ಸಾರಿದರು. ...ನವರು 12ನೇ ಶತಮಾನದಲ್ಲೇ ಭಾರಿ ತೆರಿಗೆ ...ಸುಲಿಗೆಯಿಂದ ನರಳುತ್ತಿದ್ದ ಕಾಯಕಜೀವಿಗಳನ್ನು, ...ಯಿಂದ ಬಳಲುತ್ತಿದ್ದ ದಲಿತರನ್ನು, ಎಲ್ಲ ಹಕ್ಕುಗಳಿಂದ ...ರಾಗಿದ್ದ ಮಹಿಳೆಯರನ್ನು ವಿಮೋಚನೆಯ ...ಡೆಗೆ ತಂದರು.

...ಸಂಸ್ಥೆಯ ಮಾನವಹಕ್ಕುಗಳು ಕೂಡ ಬಸವಪ್ರಜ್ಞೆ ...ಹೊರತಾಗಿಲ್ಲ. ಜೀವಿಸುವ ಹಕ್ಕು, ಮಾತನಾಡುವ ...ವರ್ಗ, ವರ್ಣ ಮತ್ತು ಲಿಂಗಭೇದ ನೀತಿಯ ...ಹೋರಾಡುವ ಹಕ್ಕುಗಳು ಮಾನವಹಕ್ಕುಗಳಾಗುತ್ತವೆ. ...ಯ ಮಾನವಹಕ್ಕುಗಳ ವಿಭಾಗ ತನ್ನ 30 ಅಂಶಗಳ ...ದಲ್ಲಿ ಈ ಮಾನವಹಕ್ಕುಗಳನ್ನು ಕುರಿತು ವಿವರಿಸಿದೆ. ...ಲ್ಲ ಮಾನವ ಹಕ್ಕುಗಳನ್ನು ಸಾಧಿಸುವುದೇ ...ವಪ್ರಜ್ಞೆಯ ಗುರಿಯಾಗಿತ್ತು.

...ಟುಂಬ ಪ್ರೇಮ, ಸಮಾಜ ಪ್ರೇಮ, ದೇಶಪ್ರೇಮ ...ವಿಶ್ವಪ್ರೇಮ ಬಸವಧರ್ಮದ ಪ್ರೇಮಪ್ರಭುವಾಗಿದೆ. ... ಕೂಡಿದಾಗಲೆ ಲಿಂಗಪ್ರೇಮವಾಗುತ್ತದೆ. ...ಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂದು ...ದಾಸಿಮಯ್ಯನವರು ಕುಟುಂಬ ಪ್ರೇಮದ ...ಪ್ಪ ತಿಳಿಸಿದ್ದಾರೆ. "ಜೀವಿಸುವ ಜೀವಕ್ಕೆ ಶೃಂಗಾರ ...ಪ" ಎಂದು ಅಕ್ಕ ಮಹಾದೇವಿ ಸಮಾಜ ...ಸಾರಿದ್ದಾರೆ. "ಕಳ್ಳ ಸಾಣ್ಯ ಸಲುಗೆಗೆ ಸಲ್ಲದು" ...ಸವಣ್ಣ ದೇಶಪ್ರೇಮ ಸೂಚಿಸಿದ್ದಾರೆ. "ಅರಂಬದ ...ಸಾರ ಸ್ಥಿತಿ ಕಳೆಯದಿದ್ದರೆ ಆ ಅರಂಬದ ಕೇಡು" ...ವಬಸವಣ್ಣನವರು ವಿಶ್ವಪ್ರೇಮ ಮೆರೆದಿದ್ದಾರೆ.

...ಪ್ರಜ್ಞೆಯು ಆರ್ಥಿಕ ಸಮಾನತೆಯಿಂದ ಕೂಡಿದ ...ಗಳ ಪ್ರಜ್ಞೆಯಾಗಿದೆ; ಪ್ರಜಾಪ್ರಭುತ್ವವಾದಿ ... ಮುಂದುವರಿದ ಸಮಾಜವಾದಿ ಪ್ರಜ್ಞೆಯಾಗಿದೆ. [illegible] ... [illegible] 33 [illegible] ...ಪ್ಪು ಅಟ ಕ್ಷಿಪ್ರ ಸಂತರ ಸಮುಗೆ ಹೊಸ [illegible]

ಸರ್ವಸಮತಾವಾದಿ ದೇವರನ್ನು ಕೊಟ್ಟರು. ಬಸವಣ್ಣನವರ ಕೂಡಲಸಂಗಮದೇವ ಮಾದಾರ ಚನ್ನಯ್ಯನ ಮನೆಯಲ್ಲಿ ಅಂಬಲಿಯನ್ನು ಕುಡಿಯುವ ದೇವರಾಗಿದ್ದಾನೆ. ಬಡವರ, ಹಿಂದುಳಿದವರ, ದಲಿತರ, ಕಾಯಕಜೀವಿಗಳ ಒಟ್ಟಾರೆ ಇಡೀ ಮಾನವಕುಲದ ದೇವರಾಗಿದ್ದಾನೆ.


"ಲಿಂಗ ವ್ಯಸನಿ ಜಂಗಮ ಪ್ರೇಮಿ ಎಂದೆನಿಸಯ್ಯಾ" ಎಂದು ಬಸವಣ್ಣನವರು ಹೇಳುವಲ್ಲಿ ಮೌಲ್ಯಗಳಿಂದ ತುಂಬಿದ ಒಳಜಗತ್ತು ಹೊರ ಜಗತ್ತನ್ನು ಆಳಬೇಕೆಂದು ಸೂಚಿಸುತ್ತಾರೆ. ನಮ್ಮ ವ್ಯಸನಗಳೆಲ್ಲ ಒಳಜಗತ್ತಿಗೆ ಸಂಬಂಧಿಸಿರಬೇಕು. ಆದರೆ ನಮ್ಮ ಪ್ರೇಮಭಾವ ಹೊರಜಗತ್ತಿಗೆ ಸಂಬಂಧಿಸಿರಬೇಕು ಎಂದು ಬಸವಣ್ಣನವರು ಬಯಸುತ್ತಾರೆ. ಬಸವ ತತ್ತ್ವದ ಪ್ರಕಾರ ಮಾನವೀಯ ಮೌಲ್ಯಗಳು ಜಗತ್ತನ್ನು ಆಳಬೇಕು. ಆದರೆ ಇಂದು ಮಾರುಕಟ್ಟೆ ಮೌಲ್ಯಗಳು ಜಗತ್ತನ್ನು ಆಳತೊಡಗಿವೆ. ಸಕಲ ಜೀವಾತ್ಮರನ್ನು ಬಯಸುವವನು ಭಕ್ತ. ಸಕಲ ವಸ್ತುಗಳನ್ನು ಬಯಸುವವನು ಭವಿ. ಸದ್ಯ ಜಗತ್ತು ಭವಿಗಳ ಸಾಮ್ರಾಜ್ಯವಾಗುತ್ತಿದೆ. ಈ ಜಗತ್ತನ್ನು ಭಕ್ತರ ಸಾಮ್ರಾಜ್ಯ ಮಾಡಿದಾಗ ಮಾತ್ರ ಮೇಲು ಕೀಳಿಲ್ಲದ, ಸುಲಿಗೆ ಇಲ್ಲದ, ಘನತೆವೆತ್ತ ಸ್ವತಂತ್ರ ಮಾನವನ ಉದಯವಾಗುತ್ತದೆ. ಇಂಥ ಹೊಸ ಮನುಷ್ಯರ ಸಮಾಜವನ್ನು ಸೃಷ್ಟಿಸುವುದು ಬಸವಣ್ಣನವರ ಉದ್ದೇಶವಾಗಿತ್ತು. ದೇವರಿಗೆ ಶರಣಾಗುವುದೆಂದರೆ ಭವದಲ್ಲಿ ಯಾರಿಗೂ ಶರಣಾಗತರಾಗದೆ ಸ್ವತಂತ್ರಧೀರರಾಗಿ ಬದುಕುವುದು. "ಕೂಡಲಸಂಗನ ಶರಣರು ಸ್ವತಂತ್ರಧೀರರು" ಎಂದು ಬಸವಣ್ಣನವರು ಹೇಳುತ್ತಾರೆ. ಸ್ವತಂತ್ರಧೀರರ ಸಮಾಜದಲ್ಲಿ ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಾಗುತ್ತದೆ. ಇಲ್ಲದಿದ್ದರೆ ಅದು ಸ್ವಾರ್ಥಿಗಳ ಕಮ್ಮಟವಾಗುತ್ತದೆ.

ಮಾನವನ ವ್ಯಕ್ತಿತ್ವ ವಿಕಸನಗೊಳ್ಳಬೇಕಾದರೆ ಮೊದಲಿಗೆ ಕಾಯಕ ಮಾಡಬೇಕು. ಅಂತರಂಗ ಶುದ್ಧಿಗಾಗಿ ಸಮರ್ಪಣಾ ಭಾವದ ಮೂಲಕ ಧ್ಯಾನ – ಅಂದರೆ ಇಷ್ಟಲಿಂಗ ಪೂಜೆ – ಮತ್ತು ಬಹಿರಂಗ ಶುದ್ಧಿಗಾಗಿ ಕಾಯಕ ದಾಸೋಹದ ಮೂಲಕ ಜಂಗಮಲಿಂಗದ ಪೂಜೆ ಮಾಡಬೇಕು. ಅಂತರಂಗ ಶುದ್ಧಿಯಿಂದ ಆತ್ಮಕಲ್ಯಾಣವಾಗುತ್ತದೆ. ಬಹಿರಂಗ ಶುದ್ಧಿಯಿಂದ ಲೋಕಕಲ್ಯಾಣವಾಗುತ್ತದೆ. ಆತ್ಮಕಲ್ಯಾಣ ಸ್ವಾತಂತ್ರ್ಯದ ಆನಂದ ನೀಡಿದರೆ ಲೋಕಕಲ್ಯಾಣ ಜವಾಬ್ದಾರಿಯ ಪ್ರಜ್ಞೆ ಮೂಡಿಸುವುದು. ಇವೆಲ್ಲ ಸೇರಿ ವ್ಯಷ್ಟಿ ಅನುಭವವಾಗುವುದು. ಅನುಭವ ಮಂಟಪದ ಚಿಂತನ-ಮಂಥನದಲ್ಲಿ ಸರ್ವರೂ ಸಮಷ್ಟಿ ಅನುಭವ ಪಡೆಯುವರು. ಈ ಸಮಷ್ಟಿ ಅನುಭವದ ಅರಿವೇ ಗುರುವಾಗಿ ಅನುಭಾವದೆಡೆಗೆ ಒಯ್ಯುವುದು. ಆಗ ಮಾನವ ನಿಜ ಮಾನವನಾಗುವನು. ಆ ನಿಜಮಾನವನೇ ಶರಣ. ಆತನೇ ನವಮಾನವ. ಜಗತ್ತು ಇಂಥ ಶರಣರ ಸಂಕುಲವಾಗಬೇಕು ಎಂದು ಬಸವಣ್ಣನವರು ಬಯಸಿದ್ದರು.

ನಮ್ಮೊಳಗೇ ನಾವು ಬಯಲಾಗುವ ಕ್ರಮವನ್ನು ಅರಿತುಕೊಳ್ಳಲು ಕೂಡ ಬಸವಣ್ಣನವರು ಮಾರ್ಗದರ್ಶನ ಮಾಡಿದ್ದಾರೆ. ಅವುಗಳಲ್ಲಿ ಗುರು-ಲಿಂಗ-ಜಂಗಮ ಮತ್ತು ಕಾಯಕ-ಪ್ರಸಾದ-ದಾಸೋಹ ವಿಚಾರಗಳು ಬಹುಮುಖ್ಯವಾಗಿವೆ.

"ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು, ನಾನು ವ್ಯವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು, ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು" ಎಂದು ಬಸವಣ್ಣನವರು ಹೇಳುವಾಗ ಕಾಯಕ ಕೇವಲ ಸ್ವಾವಲಂಬನೆಗಾಗಿ ಅಲ್ಲ, ಅದಕ್ಕೆ ತ್ರಿವಿಧ ದಾಸೋಹದ ಜವಾಬ್ದಾರಿಗಳಿವೆ ಎಂಬುದನ್ನು ಸೂಚಿಸುತ್ತಾರೆ. ನಮ್ಮ ಕಾಯಕದಿಂದ ಬಂದದ್ದನ್ನು ದೇವರ ಪ್ರಸಾದವಾಗಿ ಸ್ವೀಕರಿಸುವುದರ ಮೂಲಕ ಗಳಿಕೆಯ ಅಹಂನಿಂದ ಹೊರಬಂದು, ಆ ಗಳಿಸಿದ್ದೆಲ್ಲ ನನಗಾಗಿಯೇ [illegible] ಮಾಡದೆ ಸಾಮಾಜಿಕ ಜವಾಬ್ದಾರಿಯನ್ನು

ಸಮರ್ಪಣಾಭಾವದಿಂದ ನಿಭಾಯಿಸುವುದಕ್ಕೆ ದಾಸೋಹವೆಂದು ಕರೆಯುತ್ತಾರೆ. ಅಂತೆಯೆ ಬಸವಧರ್ಮದಲ್ಲಿ ಗುರು-ಲಿಂಗ-ಜಂಗಮಕ್ಕೂ ಕಾಯಕ-ಪ್ರಸಾದ-ದಾಸೋಹಕ್ಕೂ ಅವಿನಾಭಾವ



ಸಂಬಂಧವಿದೆ. ಇವುಗಳನ್ನು ಪ್ರತಿಪಾದಿಸುವ ವಚನಸಾಹಿತ್ಯ ನಿಜವಾದ ಕ್ರಾಂತಿಕಾರಿ ಸಾಹಿತ್ಯವಾಗಿದೆ. ವಚನಗಳಲ್ಲಿ ಸಂಪೂರ್ಣ ಕ್ರಾಂತಿಯ ಬೀಜಮಂತ್ರಗಳಿವೆ. ವಚನಗಳು ಲೋಕಹಿತದ ಸಾಹಿತ್ಯ ಮತ್ತು ತತ್ತ್ವದ ಆಗರಗಳಾಗಿವೆ.

ಸಾಮ್ರಾಜ್ಯಶಾಹಿಗಳು ಬೀಸಿದ ಜಾಗತೀಕರಣದ ಜಾಲದಲ್ಲಿ ಜಗತ್ತು ಸಿಕ್ಕಿಕೊಂಡು ಒದ್ದಾಡುತ್ತಿದೆ. ವಚನ ಸಾಹಿತ್ಯ ಸಾರುವ ಭಕ್ತಿಸಾಮ್ರಾಜ್ಯದ ಸ್ಥಾಪನೆಯಾದಾಗ ಮಾತ್ರ ಜಗತ್ತು ಎಲ್ಲರೀತಿಯ ಹಿಂಸೆ, ಸುಲಿಗೆ, ಗಲಭೆ ಮತ್ತು ಕ್ರೌರ್ಯದಿಂದ ಮುಕ್ತವಾಗುವುದು. ಸುಲಿಗೆಯ ಸಾಮ್ರಾಜ್ಯಕ್ಕೆ ಭಕ್ತಿಸಾಮ್ರಾಜ್ಯವೊಂದೇ ಉತ್ತರ ಎಂಬುದನ್ನು ಜಗತ್ತು ಅರಿತುಕೊಳ್ಳುವ ದಿನಗಳು ದೂರವಿಲ್ಲ. ಬಸವಣ್ಣನವರ ಬಡ್ಡಿರಹಿತ ಅರ್ಥಶಾಸ್ತ್ರವೊಂದೇ ಈ ಜಗತ್ತನ್ನು ಕಾಪಾಡಬಲ್ಲುದು. ಯೋಗ್ಯ ಉತ್ಪಾದನೆ, ಯೋಗ್ಯ ಬಳಕೆ ಮತ್ತು ಯೋಗ್ಯ ವಿತರಣೆ ಇವು ಮೂರು ಬಸವಣ್ಣನವರ ಅರ್ಥಶಾಸ್ತ್ರದ ಪ್ರಮುಖ ಅಂಶಗಳಾಗಿವೆ. ಕಾಯಕವೆಂದರೆ ಯೋಗ್ಯವಾದುದನ್ನೇ ಉತ್ಪಾದಿಸುವ ಕ್ರಿಯೆ. ಪ್ರಸಾದವೆಂದರೆ ಯೋಗ್ಯ ಬಳಕೆ, ದಾಸೋಹವೆಂದರೆ ಯೋಗ್ಯ ವಿತರಣೆ. ಈ ಮೂರು ಆರ್ಥಿಕ ಪ್ರಕ್ರಿಯೆಗಳನ್ನು ಜಾಗತೀಕರಣದ ಮೂಲಕ ಹಾಳುಗೆಡವಿ ಭಾರತದಂಥ ಬಡರಾಷ್ಟ್ರಗಳನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಳ್ಳುವುದೇ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಮುಖ್ಯ ಉದ್ದೇಶವಾಗಿದೆ. ರೈತರು, ಕೃಷಿಕಾರ್ಮಿಕರು, ದಲಿತರು, ಮಹಿಳೆಯರು ಮತ್ತು ಎಲ್ಲ ವಿಧವಾದ ಕಾಯಕಜೀವಿಗಳ ಧರ್ಮವಾದ ಬಸವಧರ್ಮ ಇಂಥ ಜಾಗತಿಕ ಬಿಕ್ಕಟ್ಟನ್ನು ಪರಿಹರಿಸುವ ಸಾಮರ್ಥ್ಯವನ್ನು ಹೊಂದಿದೆ. ಹೊಸ ಮಾನವೀಯ ಜಗತ್ತಿಗಾಗಿ ಬಸವಧರ್ಮದ ರಹಸ್ಯವನ್ನು ಅರಿತುಕೊಳ್ಳುವುದು ಈ ಕಾಲದ ತುರ್ತು ಅವಶ್ಯಕತೆಯಾಗಿದೆ.

ಕಾಯಕವು ನಮ್ಮ ದೈಹಿಕ ಮತ್ತು ಬೌದ್ಧಿಕ ಶಕ್ತಿಯನ್ನು ಹೆಚ್ಚಿಸುವುದು. ನಮ್ಮ ಆರೋಗ್ಯ ಮತ್ತು ಸೌಂದರ್ಯವನ್ನು ಕಾಪಾಡುವುದು. ಮಾನಸಿಕ ಒತ್ತಡಗಳಿಂದ ರಕ್ಷಿಸುವುದು. ಪರಾವಲಂಬಿಗಳಾಗದಂತೆ ನೋಡಿಕೊಳ್ಳುವುದು. ಕೊನೆಗೆ ನಮ್ಮನ್ನು ಸ್ವತಂತ್ರಧೀರರನ್ನಾಗಿ ಮಾಡುವುದು. "ಕೂಡಲಸಂಗನ ಶರಣರು ಸ್ವತಂತ್ರ ಧೀರರು" ಎಂದು ಬಸವಣ್ಣನವರು ಹೇಳುತ್ತಾರೆ. ಕಾಯಕ ಮಾಡದವನಿಗೆ ಹಸಿವು, ರುಚಿ, ವಿಶ್ರಾಂತಿ ಮತ್ತು ನಿದ್ರೆಯ ಮಹತ್ವ ಗೊತ್ತಾಗುವುದಿಲ್ಲ. ಕಾಯಕ ಜೀವಿಯ ಹಸಿವು ಎಲ್ಲ ಆಹಾರ ಪದಾರ್ಥಗಳನ್ನು ಪ್ರಸಾದವಾಗಿಸುತ್ತದೆ. ರುಚಿಕರವಾಗಿಸುತ್ತದೆ. ಆತನಿಗೆ ವಿಶ್ರಾಂತಿ ಮತ್ತು ನಿದ್ರೆಯ ಸುಖ ಸಹಜವಾಗಿಯೇ ಸಿಗುತ್ತದೆ. ಸತ್ಯಶುದ್ಧ [illegible] ಆದ್ದರಿಂದ

ಕಾಯಕ ತತ್ತ್ವವು ವಿಶ್ವಮಾನ್ಯವಾಗಿದೆ.

"ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದತ್ತ ಲಕ್ಷ್ಮಿ? ತಾನಾಗಿಪ್ಪಳು
ಮಾರಯ್ಯಪ್ರಿಯ ಅಮರೇಶ್ವರ ಲಿಂಗದ
ಸೇವೆಯುಳ್ಳನ್ನಕ್ಕರ"

ಬಸವಧರ್ಮ ಮನುಧರ್ಮಕ್ಕೆ ಮುಖಾಮುಖಿಯಾಗಿ ನಿಲ್ಲುವ ಮೂಲಕ ಜಾತಿ, ವರ್ಣಗಳ ಮಹತ್ವವನ್ನು ಅಲ್ಲಗಳೆದು ಕಾಯಕದ ಮಹತ್ವವನ್ನು ಎತ್ತಿ ಹಿಡಿಯುತ್ತದೆ.

ವಾನರನಿಂದ ನರನಾಗುವ ಪ್ರಕ್ರಿಯೆಯಲ್ಲಿ ಕಾಯಕದ ಪಾತ್ರ ಮಹತ್ವದ್ದಾಗಿದೆ ಎಂದು ಕಾರ್ಲ್‌ಮಾರ್ಕ್ಸ್ ಅವರ ಆಪ್ತ ಸಂಗಾತಿಯಾಗಿದ್ದ ಫ್ರೆಡರಿಕ್ ಏಂಗೆಲ್ಸ್ ಅವರು ತಮ್ಮ 'ದಿ ಪಾರ್ಟ್ ಪ್ಲೇಯ್ಡ್ ಬೈ ಲೇಬರ್ ಇನ್ ದಿ ಟ್ರಾಂಜಿಷನ್ ಫ್ರಾಂ ಏಪ್ ಟು ಮ್ಯಾನ್' ಕಿರುಹೊತ್ತಿಗೆಯಲ್ಲಿ ತಿಳಿಸಿದ್ದಾರೆ. "ಮಾನವನ ಎಲ್ಲ ಇರುವಿಕೆಗೆ ದುಡಿಮೆ ಮೊಟ್ಟಮೊದಲ ಆಧಾರ. ಇದು ಎಷ್ಟರಮಟ್ಟಿಗೆ ನಿಜವೆಂದರೆ ಒಂದರ್ಥದಲ್ಲಿ ದುಡಿಮೆಯೆ ಮನುಷ್ಯನನ್ನು ಸೃಷ್ಟಿಸಿತೆಂದು ನಾವು ಹೇಳಬೇಕಾಗುತ್ತದೆ" ಎಂದು ಏಂಗೆಲ್ಸ್ ಬರೆದಿದ್ದಾರೆ. ಇವೆಲ್ಲ ಕಾಯಕ ಸಿದ್ಧಾಂತ ಮೂಲಾಧಾರಗಳಾಗಿವೆ.

ಕಾಯಕವು ಮಾನವ ಏಕತೆಯನ್ನು ಸಾಧಿಸುವ ಮೂಲಮಂತ್ರವಾಗಿದೆ. ಕಾಯಕವು ಭೂಲೋಕದ ಮಹತ್ವವನ್ನು ತಿಳಿಸುತ್ತದೆ. ಈ ಭೂಮಿಯನ್ನು ಬದುಕಲು ಹೆಚ್ಚು ಯೋಗ್ಯವಾಗುವಂತೆ ಮಾಡುತ್ತದೆ. ಕಾಯಕವು ಮಾನವರ ಮಧ್ಯದ ಅಂತಸ್ತುಗಳನ್ನು ಒಡೆದು ಹಾಕುತ್ತದೆ. ಕಂದಕಗಳನ್ನು ತುಂಬುತ್ತದೆ. ಕಾಯಕ ಮಾಡುವುದೆಂದರೆ ಬದುಕನ್ನು ಪ್ರೀತಿಸುವುದು.


ಬಸವಣ್ಣನವರು ಭಕ್ತರಲ್ಲಿ ಸರ್ವಸಮಾನತೆಯನ್ನು ಕಾಣುತ್ತಾರೆ. ಶರಣರ ದೃಷ್ಟಿಯಲ್ಲಿ ಯಾವ ಕಾಯಕವೂ ಚಿಕ್ಕದಲ್ಲ ಅಥವಾ ದೊಡ್ಡದಲ್ಲ. ನಾವು ಗಳಿಸಿದ್ದೆಲ್ಲ ನಮ್ಮದು ಎಂಬ ಅಹಂಕಾರವನ್ನು ಪ್ರಸಾದ ಪ್ರಜ್ಞೆ ಹೊಡೆದು ಹಾಕುತ್ತದೆ. ನಾವು ಗಳಿಸಿದ್ದೆಲ್ಲ ದೇವರ ಕೃಪೆ ಎಂಬುದರ ಅರಿವಾದಾಗ ಅದನ್ನು ಪ್ರಸಾದವೆಂದು ಜೋಪಾನವಾಗಿಟ್ಟುಕೊಂಡು ಸುವ್ಯವಸ್ಥಿತವಾಗಿ ಬಳಸುತ್ತೇವೆ. ಸತ್ಕಾರ್ಯಗಳಿಗಾಗಿ ವ್ಯಯಸುತ್ತೇವೆ. ಆ ವಸ್ತುವಿನ ಮಹತ್ವವನ್ನು ಅರಿತುಕೊಂಡು ಅನ್ಯಾಯವಾಗಿ ದುಂದುವೆಚ್ಚ ಮಾಡದಂತೆ ಎಚ್ಚರಿಕೆ ವಹಿಸುತ್ತೇವೆ. ಸೇವಾ ಮನೋಭಾವ ತಾಳುತ್ತೇವೆ. ದುಃಖಿಗಳಿಗೆ ಮತ್ತು ಕಷ್ಟದಲ್ಲಿರುವವರಿಗೆ ಒಳ್ಳೆಯದಾಗುವ ಹಾಗೆ ನಮ್ಮಲ್ಲಿರುವ ದೇವರ ಸಂಪತ್ತನ್ನು ವಿನಿಯೋಗಿಸಬಯಸುತ್ತೇವೆ. ಜಗತ್ತಿನ ಬಗ್ಗೆ ತೀವ್ರವಾದ ಕಾಳಜಿ ಹೊಂದುತ್ತೇವೆ.

ಜಗತ್ತಿನಲ್ಲಿ ದಾಸೋಹ ಭಾವ ಇರುವುದರಿಂದಲೇ ಶೇಕಡಾ 75ರಷ್ಟು ಮಂದಿ ಬದುಕುತ್ತಿದ್ದಾರೆ. "ಆಧುನಿಕ ಔಪಚಾರಿಕ ಅರ್ಥವ್ಯವಸ್ಥೆ ಜಗತ್ತಿನ ಕಾರ್ಮಿಕ ಶಕ್ತಿಯ ಶೇಕಡಾ 25ರಷ್ಟನ್ನು ಮಾತ್ರ ಬಯಸುತ್ತದೆ. ಉಳಿದ ಶೇಕಡಾ 75ರಷ್ಟು ಜನ ಅನೌಪಚಾರಿಕ ಅರ್ಥವ್ಯವಸ್ಥೆಯಿಂದಾಗಿ ಬದುಕುವುದರಲ್ಲಿ ತಲ್ಲೀನರಾಗಿದ್ದಾರೆ" ಎಂದು ಖ್ಯಾತ ಸಮಾಜವಿಜ್ಞಾನಿ ಮತ್ತು ಆರ್ಥಿಕ ತಜ್ಞ ಥಿಯೊಡೊರ್ ಶನಿನ್ ಹೇಳುತ್ತಾರೆ. ಅವರು ನೂರಾರು ದೇಶಗಳ ಜನರ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ ಮಾಡಿ ಈ ನಿರ್ಣಯಕ್ಕೆ ಬಂದಿದ್ದಾರೆ. ಜಗತ್ತಿನ ಶೇಕಡ 75ರಷ್ಟು ಮಂದಿ ನೆರೆಹೊರೆಯವರ ಸಹಾಯ ಸಹಕಾರದೊಂದಿಗೆ ಬದುಕುತ್ತಿದ್ದಾರೆ. ಜನ ಇನ್ನೂ ಪರಸ್ಪರ ಕಷ್ಟಸುಖಗಳಲ್ಲಿ ಭಾಗಿಯಾಗುತ್ತಿದ್ದಾರೆ ಎಂಬುದು ಇದರರ್ಥ. ಜಗತ್ತಿನಲ್ಲಿ ಇನ್ನೂ ದಾಸೋಹಂಭಾವ ಇದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

"ಶಿವಭಕ್ತರೇ ಅಧಿಕರು ನೋಡಯ್ಯಾ
ಇದಕ್ಕೆ ಅಧಿಕವಾಗಿ ಜಂಗಮವ ಕಂಡೆ.
ಈ ದ್ವಿವಿಧವನೊಂದೆ ಎಂದು ನಂಬದೆ
ಕೂಡಲಸಂಗಮದೇವಾ."


ಹೀಗೆ ವಚನ ಸಾಹಿತ್ಯ ಈ ಜಗತ್ತಿನ ಗೌರವ ಕಾಪಾಡುತ್ತದೆ. ಭೂಮಿಯ ಮಹತ್ವ ಸಾರುತ್ತದೆ. ಲೋಕದ ಜನರ ಹಿತಚಿಂತನೆ ಮಾಡುತ್ತದೆ.

ಮಾನವರ ಹಿತ ಕಾಪಾಡುವುದೇ ಸಾಹಿತ್ಯದ ಮುಖ್ಯ ಉದ್ದೇಶವಾಗಿದೆ. ವಚನ ಸಾಹಿತ್ಯ ಮಾನವನ ಹಿತ ಕಾಪಾಡುವ [illegible], ಮಾರ್ಗದರ್ಶಕವಾಗಿದೆ.



● ರಂಜಾನ್ ದರ್ಗಾ

ಹೀಗೊಂದು ಸಂವಾದ



ಗುರು-ಶಿಷ್ಯ ಸಂವಾದ-1

ಶಿಷ್ಯ: ಗುರೂಜಿ, ನಮ್ಮ ದೇಶದ ಮುಸಲ್ಮಾನರು ವಿದೇಶಿಯರೆ?

ಗುರು: ಹೌದು ಶಿಷ್ಯ, ಅವರು ವಿದೇಶಿಯರು.

ಶಿಷ್ಯ: ಅವರು ಎಲ್ಲಿಂದ ಬಂದರು?

ಗುರು: ಅವರು ಇರಾನ್, ಇರಾಕ್ ಮತ್ತು ಅರೇಬಿಯಾದಿಂದ ಬಂದರು.

ಶಿಷ್ಯ: ಆದರೆ ಅವರು ಎಲ್ಲಿಯ ನಾಗರಿಕರು?

ಗುರು: ಭಾರತದ ನಾಗರಿಕರು.

ಶಿಷ್ಯ: ಅವರು ಎಲ್ಲಿಯ ಭಾಷೆಗಳನ್ನು ಆಡುತ್ತಾರೆ?

ಗುರು: ಭಾರತೀಯ ಭಾಷೆಗಳನ್ನು ಆಡುತ್ತಾರೆ.

ಶಿಷ್ಯ: ಅವರ ರೀತಿ-ರಿವಾಜು ಮತ್ತು ಯೋಚನೆಯ ವಿಧಾನ ಯಾವ ದೇಶದ ಜನರಂತೆ ಇದೆ?

ಗುರು: ಭಾರತೀಯರಂತಿದೆ.

ಶಿಷ್ಯ: ಹಾಗೆಂದ ಮೇಲೆ ಅವರು ಹೇಗೆ ವಿದೇಶಿಯರು?

ಗುರು: ಅದಕ್ಕೆ ಕಾರಣ ಅವರ ಧರ್ಮ ವಿದೇಶಿಯಾಗಿದೆ.

ಶಿಷ್ಯ: ಬೌದ್ಧ ಧರ್ಮ ಎಲ್ಲಿಯದು ಗುರೂಜಿ?

ಗುರು: ಭಾರತದ್ದು ಶಿಷ್ಯ.

ಶಿಷ್ಯ: ಹಾಗಾದರೆ ಚೀನಿ, ಜಪಾನಿ, ಥಾಯಿ ಮತ್ತು ಬರ್ಮಿ ಬೌದ್ಧರು ಭಾರತಕ್ಕೆ ಬರಬೇಕು.

ಗುರು: ಇಲ್ಲ... ಇಲ್ಲ... ಶಿಷ್ಯ! ಚೀನಿ, ಜಪಾನಿ, ಥಾಯಿ ಮತ್ತು ಬರ್ಮಿಯರು ಬಂದು ಇಲ್ಲೇನು ಮಾಡಬೇಕು?

ಶಿಷ್ಯ: ಹಾಗಾದರೆ ಭಾರತೀಯ ಮುಸಲ್ಮಾನರು ಇರಾನ್, ಇರಾಕ್ ಮತ್ತು ಅರೇಬಿಯಕ್ಕೆ ಹೋಗಿ ಏನು ಮಾಡಬೇಕು...?

ಗುರು-ಶಿಷ್ಯ ಸಂವಾದ-2

ಗುರು: ಶಿಷ್ಯ ಹಿಂದೂ-ಮುಸಲ್ಮಾನರು ಒಂದಾಗಿ ಇರಲಾರರು.

ಶಿಷ್ಯ: ಏಕೆ ಗುರುದೇವ?

ಗುರು: ಇಬ್ಬರ ನಡುವೆ ದೊಡ್ಡ ಅಂತರವಿದೆ.

ಶಿಷ್ಯ: ಅದೇನು ಅಂತರ?

ಗುರು: ಅವರ ಭಾಷೆ ಬೇರೆ... ನಮ್ಮ ಭಾಷೆ ಬೇರೆ.

ಶಿಷ್ಯ: ಮುಸಲ್ಮಾನರು ಹಿಂದಿ, ಕಾಶ್ಮೀರಿ, ಸಿಂಧಿ, ಗುಜರಾತಿ, ಮರಾಠಿ, ಮಲಯಾಲಮ್, ತಮಿಳು, ತೆಲುಗು, ಒರಿಯಾ, ಬಂಗಾಲಿ ಇತ್ಯಾದಿ ಭಾಷೆಗಳನ್ನಾಡುವುದಿಲ್ಲ... ಆದರೆ ಕೇವಲ ಉರ್ದು ಮಾತನಾಡುವರೆ?

ಗುರು: ಇಲ್ಲ... ಇಲ್ಲ... ಭಾಷೆಯ ಅಂತರವಿಲ್ಲ... ಧರ್ಮದ ಅಂತರವಿದೆ.

ಶಿಷ್ಯ: ಅಂದರೆ ಎರಡು ಬೇರೆ ಬೇರೆ ಧರ್ಮದಲ್ಲಿ ನಂಬಿಕೆಯುಳ್ಳವರು ಒಂದೇ ದೇಶದಲ್ಲಿ ಇರುವುದು ಸಾಧ್ಯವಿಲ್ಲ.

ಗುರು: ಹೌದು, ಭಾರತವರ್ಷ ಕೇವಲ ಹಿಂದೂಗಳ ದೇಶ.

ಶಿಷ್ಯ: ಹಾಗಾದರೆ ಸಿಖ್, ಕ್ರಿಶ್ಚಿಯನ್, ಜೈನ, ಪಾರ್ಸಿ, ಬೌದ್ಧ, ಯಹೂದಿಯರನ್ನು ಈ ದೇಶದಿಂದ ಹೊರದಬ್ಬಬೇಕು.

ಗುರು: ಹೌದು, ಹೊರ ದಬ್ಬಬೇಕು.

ಶಿಷ್ಯ: ಆಗ ಈ ದೇಶದಲ್ಲಿ ಯಾರು ಉಳಿಯುತ್ತಾರೆ?

ಗುರು: ಕೇವಲ ಹಿಂದೂಗಳು ಉಳಿಯುತ್ತಾರೆ... ಮತ್ತು ಸೌಹಾರ್ದದಿಂದ ಬದುಕುತ್ತಾರೆ.

ಶಿಷ್ಯ: ಪಾಕಿಸ್ತಾನದಲ್ಲಿ ಕೇವಲ ಮುಸಲ್ಮಾನರು ಉಳಿದಿದ್ದಾರೆ ಮತ್ತು ಸೌಹಾರ್ದದಿಂದ ಬದುಕುತ್ತಿದ್ದಾರಲ್ಲ ಹಾಗೆ?

ಗುರು-ಶಿಷ್ಯ ಸಂವಾದ-3

ಗುರು: ಶಿಷ್ಯ ಮುಸಲ್ಮಾನರನ್ನು ದ್ವೇಷಿಸಬೇಕು.

ಶಿಷ್ಯ: ಏಕೆ ಗುರುದೇವ?

ಗುರು: ಏಕೆಂದರೆ ಅವರು ಕೊಳಕು, ಅಶಿಕ್ಷಿತರು ಮತ್ತು ಅತ್ಯಾಚಾರಿಗಳಾಗಿರುತ್ತಾರೆ.

ಶಿಷ್ಯ: ತಿಳಿಯಿತು ಗುರುದೇವ. ನೀವು ಹೇಳುವುದೇನೆಂದರೆ ಕೊಳಕು, ಅಶಿಕ್ಷಿತರು ಮತ್ತು ಅತ್ಯಾಚಾರಿಗಳನ್ನು ದ್ವೇಷಿಸಬೇಕಲ್ಲವೆ?

ಗುರು: ಇಲ್ಲ... ಇಲ್ಲ, ಹಾಗಲ್ಲ... ನಿಜಕ್ಕೂ ಮುಸಲ್ಮಾನರನ್ನು ದ್ವೇಷಿಸಲು ಕಾರಣವೇನೆಂದರೆ ಅವರು ಮತಾಂಧರಾಗಿರುತ್ತಾರೆ.

ಶಿಷ್ಯ: ನಾವು ಮತಾಂಧರನ್ನು ದ್ವೇಷಿಸಬೇಕೆ ಗುರುದೇವ?

ಗುರು: ಇಲ್ಲ... ಇಲ್ಲ, ನಿನಗೆ ಅರ್ಥವಾಗಲಿಲ್ಲ, ನಿಜಕ್ಕೂ ಮುಸಲ್ಮಾನರನ್ನು ದ್ವೇಷಿಸುವುದಕ್ಕೆ ಕಾರಣವೇನೆಂದರೆ ಅವರು ನಮ್ಮನ್ನು ಆಳಿದ್ದಾರೆ.

ಶಿಷ್ಯ: ಹಾಗಾದರೆ ಕ್ರಿಶ್ಚಿಯನ್‌ರನ್ನೂ ದ್ವೇಷಿಸಬೇಕು.

ಗುರು: ಇಲ್ಲ... ಇಲ್ಲ ಶಿಷ್ಯ... ಮುಸಲ್ಮಾನರನ್ನು ದ್ವೇಷಿಸಲು ಮುಖ್ಯ ಕಾರಣವೆಂದರೆ ಅವರು ದೇಶವನ್ನು ಒಡೆದಿದ್ದಾರೆ.

ಶಿಷ್ಯ: ಅಂದರೆ ದೇಶವನ್ನು ಒಡೆಯುವವರನ್ನು ದ್ವೇಷಿಸಬೇಕು, ಅಲ್ಲವೆ?

ಗುರು: ಹೌದು... ಬರೋಬರಿ. ದೇಶವನ್ನು ಒಡೆಯುವವರನ್ನು ದ್ವೇಷಿಸಲೇಬೇಕು.

ಶಿಷ್ಯ: ಮತ್ತೆ ದೇಶವಾಸಿಗಳನ್ನು ಒಡೆಯುವವರನ್ನು ದ್ವೇಷಿಸಬೇಕಲ್ಲವೆ?

ಗುರು-ಶಿಷ್ಯ ಸಂವಾದ-4

ಶಿಷ್ಯ: ಗುರೂಜಿ, ಕೋಮು ಗಲಭೆಗಳಲ್ಲಿ ಯಾರು ಸಾಯುತ್ತಾರೆ?

ಗುರು: ಕೋಮು ಗಲಭೆಗಳಲ್ಲಿ ದೊಡ್ಡ ಪಂಡಿತರು, ಮೌಲವಿಗಳು, ದೊಡ್ಡ ದೊಡ್ಡ ಸೇಠ್-ಸಾಹುಕಾರರು ಮತ್ತು ಅಧಿಕಾರಿಗಳು ಸಾಯುತ್ತಾರೆ.

ಶಿಷ್ಯ: ಮತ್ತೆ ಬೇರೆ ಯಾವ ಜನ ಎಂದೂ ಸಾಯಲಾರರು?

ಗುರು: ಸಾಮಾನ್ಯ ಜನ, ಕಾರ್ಮಿಕರು, ಕುಶಲಕರ್ಮಿಗಳು, ರಿಕ್ಷಾವಾಲಾಗಳು, ಟಾಂಗಾವಾಲಾಗಳು, ನೌಕರ-ಚಾಕರರು ಮುಂತಾದವರು ಎಂದೂ ಸಾಯುವುದಿಲ್ಲ.

ಶಿಷ್ಯ: ಹಾಗಾದರೆ ಗಲಭೆಗಳು ನಿಲ್ಲದಿರುವುದಕ್ಕೆ ಏನು ಕಾರಣ?

ಗುರು: ಸ್ಪಷ್ಟವಿದೆ ಶಿಷ್ಯ... ಸಾಮಾನ್ಯ ಜನರಿಗೆ ಗಲಭೆಗಳನ್ನು ನಿಲ್ಲಿಸುವುದರಲ್ಲಿ ಆಸಕ್ತಿ ಇರುವುದಿಲ್ಲ.

ಶಿಷ್ಯ: ಮತ್ತೆ ದೊಡ್ಡ ದೊಡ್ಡ ಜನ?

ಗುರು: ಪಾಪ ದೊಡ್ಡ ದೊಡ್ಡ ಜನರು ಗಲಭೆಗಳನ್ನು ನಿಲ್ಲಿಸಲು ಶ್ರಮಿಸುತ್ತಿರುತ್ತಾರೆ... ಪಂಡಿತ-ಮೌಲವಿಗಳು ದಂಗೆಗಳನ್ನು ನಿಲ್ಲಿಸಲಿ ಎಂದು ಧರ್ಮದ ಮೊರೆ ಹೋಗುತ್ತಾರೆ. ರಾಜಕೀಯ ಪಕ್ಷಗಳ ನಾಯಕರು ದಂಗೆಗಳನ್ನು ನಿಯಂತ್ರಿಸಲು ಶಕ್ತಿ ಮೀರಿ ಪ್ರಯತ್ನಿಸುತ್ತಾರೆ... ಸೇಠ್-ಸಾಹುಕಾರರು ದಂಗೆಗಳನ್ನು ನಿಲ್ಲಿಸಲು ದೇಣಿಗೆ ನೀಡುತ್ತಾರೆ... ಸರ್ಕಾರಿ ಅಧಿಕಾರಿಗಳು ದಂಗೆಗಳನ್ನು ನಿಯಂತ್ರಿಸಲು ಜೀವ ಪಣಕ್ಕಿಟ್ಟು ಪ್ರಯತ್ನಿಸುತ್ತಾರೆ.

ಶಿಷ್ಯ: ಅಷ್ಟಾದರೂ ದಂಗೆಗಳು ಏಕೆ ನಿಲ್ಲುವುದಿಲ್ಲ?

ಗುರು: ಇದುವೇ ರಹಸ್ಯ ಮಗಾ... ಇದನ್ನು ಅರ್ಥಮಾಡಿಕೊಂಡೆಯಾದರೆ ... ಯಾವುದಾದರೂ ದಂಗೆಯಲ್ಲಿ ಕೊಲ್ಲಲ್ಪಡುವೆ.

ಗುರು-ಶಿಷ್ಯ ಸಂವಾದ-5

ಶಿಷ್ಯ: ಗುರೂಜಿ, ಕೋಮು ಗಲಭೆಗಳಲ್ಲಿ ಹತ್ಯೆ ಇತ್ಯಾದಿ ದುಷ್ಕೃತ್ಯವೆಸಗುವವರಿಗೆ ಕಾನೂನು ಶಿಕ್ಷೆ ಏಕೆ ವಿಧಿಸುವುದಿಲ್ಲ?

ಗುರು: ಇದು ನಮ್ಮ ಕಾನೂನಿನ ಮಹಾನ್ ಗುಣ ಶಿಷ್ಯ...

ಶಿಷ್ಯ: ಅದು ಹೇಗೆ ಗುರೂಜಿ?

ಗುರು: ನಮ್ಮ ನ್ಯಾಯಾಲಯಗಳು ದಂಗೆಗಳ ಮೂಲಕ ಹತ್ಯೆ ಮಾಡಬಯಸುವವರ ಭಾವನೆಗಳನ್ನು ಅರ್ಥಮಾಡಿಕೊಳ್ಳುತ್ತವೆ.

ಶಿಷ್ಯ: ಏನು ಅರ್ಥ ಮಾಡಿಕೊಳ್ಳುತ್ತವೆ?

ಗುರು: ಶಿಷ್ಯ ಕೋಮು ದಂಗೆಗಳಲ್ಲಿ ಸಾಯುವವನು ನೇರವಾಗಿ ಸ್ವರ್ಗಕ್ಕೆ ಹೋಗುವುದಿಲ್ಲವೆ?

ಶಿಷ್ಯ: ಹೌದು, ಹೋಗುತ್ತಾನೆ.

ಗುರು: ಹಾಗೆಂದ ಮೇಲೆ ಅವನನ್ನು ಸ್ವರ್ಗಕ್ಕೆ ಕಳಿಸುವ ಉಪಕಾರ ಮಾಡುವವರು ಯಾರು?

ಶಿಷ್ಯ: ಕೊಲೆ ಮಾಡುವವ.

ಗುರು: ಬರೋಬರಿ... ಶಿಷ್ಯ ಉಪಕಾರ ಮಾಡುವವರಿಗೆ ಗಲ್ಲಿಗೇರಿಸುವಷ್ಟು ನಿರ್ಲಜ್ಜವಲ್ಲ ನಮ್ಮ ಕಾನೂನು.

ಗುರು-ಶಿಷ್ಯ ಸಂವಾದ-6

ಶಿಷ್ಯ: ಗುರೂಜಿ, ದಂಗೆಗಳನ್ನು ಹೇಗ ನಿಯಂತ್ರಿಸಬಹುದು?

ಗುರು: ಶಿಷ್ಯ ಈ ಪ್ರಶ್ನೆಗೆ ಉತ್ತರ ಇಡೀ ದೇಶ ಗೊತ್ತಿಲ್ಲ, ರಾಷ್ಟ್ರಪತಿಗಳಿಗೆ ಗೊತ್ತಿಲ್ಲ, ಪ್ರಧಾನ ಮಂತ್ರಿಗಳಿಗ ಗೊತ್ತಿಲ್ಲ, ಇಡೀ ಮಂತ್ರಿಮಂಡಲಕ್ಕೆ ಗೊತ್ತಿಲ್ಲ ಬುದ್ಧಿಜೀವಿಗಳಿಗೂ ಗೊತ್ತಿಲ್ಲ.

ಶಿಷ್ಯ: ಗುರೂಜಿ, ಮನುಷ್ಯ ಚಂದ್ರನವರೆಗೂ ಹೋಗಿದ್ದಾನೆ, ಪ್ರಕೃತಿ ಮೇಲೆ ಪ್ರಭುತ್ವ ಸಾಧಿಸಿದ್ದಾನೆ... ಅಸಂಭವವೆನ್ನುವುದು ಸಂಭವವಾಗಿ ಬಿಟ್ಟಿದೆ... ದಂಗೆಗಳನ್ನು ಹೇಗೆ ನಿಯಂತ್ರಿಸಬೇಕು ಎನ್ನುವುದನ್ನು ಕಂಡುಹಿಡಿಯುವ ಕೆಲಸವನ್ನು ವಿಜ್ಞಾನಿಗಳಿಗೆ ಏಕೆ ವಹಿಸಿ ಕೊಡುವುದಿಲ್ಲ?

ಗುರು: ಶಿಷ್ಯ ವಿಜ್ಞಾನಿಗಳಿಗೆ ಈ ಕೆಲಸ ವಹಿ ಕೊಡಲಾಗಿತ್ತು... ಇದು ಧಾರ್ಮಿಕ ವಿಷಯ ಎಂದು ಅವರು ಅಭಿಪ್ರಾಯಪಟ್ಟರು.

ಶಿಷ್ಯ: ಮತ್ತೆ ಧಾರ್ಮಿಕ ಜನರಿಗೆ ಈ ಕಾರ್ಯ ವಹಿ ಕೊಡಲಾಯಿತೆ?

ಗುರು: ಹಾಂ, ಧಾರ್ಮಿಕ ಜನರು ಈ ವಿಷಯ ಸಾಮಾಜಿಕ ವಿಷಯ ಎಂದರು.

ಶಿಷ್ಯ: ಸಮಾಜಶಾಸ್ತ್ರಜ್ಞರ ಅಂಬೋಣವೇನು?

ಗುರು: ಅವರು ಇದು ರಾಜಕೀಯ ವಿಷಯ ಎಂದರು.

ಶಿಷ್ಯ: ಮತ್ತೆ ರಾಜಕಾರಣಿಗಳು ಏನನ್ನುತ್ತಾರೆ?

ಗುರು: ಇದು ಸಮಸ್ಯೆಯೇ ಅಲ್ಲವೆಂದು ಅವರು ಅಂದುಬಿಟ್ಟರು.

ಗುರು-ಶಿಷ್ಯ ಸಂವಾದ-7

ಶಿಷ್ಯ: ಕೋಮು ಗಲಭೆಗಳ ಜವಾಬ್ದಾರಿ ಪ್ರಧಾನಮಂತ್ರಿಗಳ ಮೇಲೆ ಇರುತ್ತದೆಯೆ, ಗುರೂಜಿ?

ಗುರು: ಇಲ್ಲ.

ಶಿಷ್ಯ: ಮುಖ್ಯಮಂತ್ರಿಗಳ ಮೇಲೆ ಇರುತ್ತದೆಯೆ?

ಗುರು: ಇಲ್ಲ.

ಶಿಷ್ಯ: ಗೃಹ ಸಚಿವರ ಮೇಲೆ ಇರುತ್ತದೆಯೆ?

ಗುರು: ಇಲ್ಲ.

ಶಿಷ್ಯ: ಸಂಸದ ಇಲ್ಲವೆ ಶಾಸಕರ ಮೇಲೆ ಇರುತ್ತದೆಯೆ?

ಗುರು: ಇಲ್ಲ.

ಶಿಷ್ಯ: ಜಿಲ್ಲಾಧಿಕಾರಿಗಳು, ಪೊಲೀಸ್ ಅಧಿಕಾರಗ ಮೇಲೆ ಇರುತ್ತದೆಯೆ?

ಗುರು: ಇಲ್ಲ.

ಶಿಷ್ಯ: ಮತ್ತೆ ಕೋಮು ದಂಗೆಗಳ ಜವಾಬ್ದಾರಿ ಯಾರ ಮೇಲೆ ಇರುತ್ತದೆ?

ಗುರು: ಜನತೆ ಮೇಲೆ...

ಶಿಷ್ಯ: ಅಂದರೆ...?


ಗುರು: ಅಂದರೆ ನಮ್ಮ ಮೇಲೆ...?

ಶಿಷ್ಯ: ಅಂದರೆ?

ಗುರು: ಅಂದರೆ ಯಾರ ಮೇಲೂ ಇಲ್ಲ.

ಹಿಂದಿ ಮೂಲ: ಅಸ್ಗರ್ ವಜಾಹತ್

ಕನ್ನಡಕ್ಕೆ: ಹಸನ್ ನಯೀಂ ಸುರಕೋಡ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಬ್ರಾಹ್ಮಣನೂ ಮತ್ತು ಶಿವನ ಆತ್ಮಲಿಂಗವೂ



...ಂದೂ ರಾಷ್ಟ್ರದಲ್ಲಿ ಹಿಂದೂಗಳೇ ಸಾರ್ವಭೌಮರು ... ಘೋಷಿಸಲು ವಿರಾಟ್ ಹಿಂದೂ ಸಮಾವೇಶವನ್ನು ...ವ ಅಗತ್ಯ ಪರಕೀಯರಿಗೆ, ಕೀಳರಿಮೆಯವರಿಗೆ ...ರುತ್ತದೆ. ಇದರಿಂದ ಅವರು ಸಾರಿ ಸಾರಿ ಹೇಳುವುದು ...ರೆ, ನಾವು ಪರಕೀಯರು, ಅನ್ಯರು, ಇಲ್ಲಿ ಬಂದು ...ವೆ. ಆದರೆ ಅದನ್ನು ಮರೆಯಲು ಅಥವಾ ಮರೆ...ಲು ಹೀಗೆ ಗಟ್ಟಿಯಾಗಿ ನಾವು ಇದು ನಮ್ಮದು, ... ಇಲ್ಲಿರಬೇಕು ಎಂದು ಹೀಗೆ ಅಬ್ಬರಿಸುತ್ತೇವೆ.

...ರ್ಯರು ಎಲ್ಲಿಂದಲೂ ಬಂದೇ ಇಲ್ಲ. ಅವರು ...ದಲ್ಲಿಯೇ ಇದ್ದಂತವರು, ಇಲ್ಲಿನ ನಿವಾಸಿಗಳೇ ...ವರು ಎಂಬ ವಾದವನ್ನು ಅತ್ಯಂತ ಜಾಣತನದಿಂದ ...ಯುವ ವೈದಿಕ ಮನಸ್ಥಿತಿಯು ಅಥವಾ ...ತ್ವವಾದಿಗಳ ಬಡಬಡಿಸುವಿಕೆಯು ಹೊಸ ...ನೆಗಳಿಂದ ಆರ್ಭಟಿಸುವುದು ಏಕೆಂದರೆ, ಅವರಿಗೆ ...ಂತಹ ಪರಕೀಯ ಭಾವನೆಯೇ. ತಾವು ವಲಸೆ ...ವರ ಮೂಲದವರು ಎಂಬ ಭಾವನೆಯೇ ತಾವು ...ವವರು ಎಂಬ ಹಠಮಾರಿತನದ ವಾದಕ್ಕೆ ...ವಾಗುತ್ತದೆ. ಕೀಳರಿಮೆಯನ್ನು ಮುಚ್ಚಿಟ್ಟುಕೊಳ್ಳಲು ...ರಿಮೆಯನ್ನು ಬಲವಂತವಾಗಿ ಮತ್ತು ಹಟದಿಂದ ... ಮಾಡುವುದು ಒಂದು ಬಗೆಯ ಮನಸ್ಥಿತಿ.

...ಂದು ಪ್ರದೇಶಕ್ಕೆ ಅಥವಾ ಭೂಭಾಗಕ್ಕೆ ವಲಸೆ ...ಮೇಲೆ, ಆ ಪ್ರದೇಶದ ಪ್ರಕೃತಿಯೊಂದಿಗೆ ಮತ್ತು ...ದೊಂದಿಗೆ ಭಾವನಾತ್ಮಕವಾದ ಸಂಬಂಧವನ್ನು ...ಕೊಂಡು, ಅಲ್ಲಿಯೇ ನೆಲೆಸಿಕೊಂಡು ತಮ್ಮ ...ನಾಭಿವೃದ್ಧಿ ಮಾಡಿಕೊಂಡು ನೆಲೆಗಾಣುವುದನ್ನು ...ಲು ನೈಸರ್ಗಿಕವಾಗಿ ಇತರ ಸಹ ಜೀವಿಗಳಿಗೆ ..., ತಮ್ಮ ಸಹಭಾಗಿತ್ವವನ್ನು ಹಂಚಿಕೊಂಡು, ...ಗಿ ಬಾಳ್ವೆಯನ್ನು ಮಾಡುವುದರಲ್ಲಿ ಸಹಜವಾದ ... ಉಂಟಾಗುವುದು. ಆದರೆ, ಸ್ವಾಮಿತ್ವವನ್ನು ...ಕೊಳ್ಳುವುದರಲ್ಲಿ, ಸಾರ್ವಭೌಮತ್ವವನ್ನು ...ಜಿಸಲು ಮಾಡುವ ಪ್ರಯತ್ನಗಳು ಮಾತ್ರ ...ಟಕ್ಕೆ ಕಾರಣವಾಗುತ್ತದೆ.

...ಯಾವುದೇ ಹಬ್ಬ, ಆಚರಣೆ ಮತ್ತು ...ವಾಯುಗಳನ್ನು ಗಮನಿಸಿದಾಗ, ಅವುಗಳಿಗೆ ...ವಾಗಿರುವಂತಹ ಕಥೆಗಳನ್ನು ಅವಲೋಕಿಸಿದಾಗ ...ಸ್ಪಷ್ಟವಾಗಿ ಅಂತಲ್ಲದಿದ್ದರೂ ರೂಢಿಯಲ್ಲಿದ್ದಿರಬಹುದಾದ ...ಗಳು ಗೋಚರವಾಗಲಿಕ್ಕೆ ಸಾಧ್ಯ.

...ವು ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಾ ತಮ್ಮ ಪಶುಗಳ ...ಸಮೂಹದೊಂದಿಗೆ ವಲಸೆ ಹೋಗುತ್ತಿದ್ದ ಆರ್ಯರು ...ಸ್ಕಾರವನ್ನು ಬೆಂಕಿಯಲ್ಲಿ ಮಾಡುವುದು ಇದಕ್ಕೆ ಸ್ಪಷ್ಟ ...ನ. ತಮ್ಮಲ್ಲೊಬ್ಬರು ಅಳಿದ ಕುರುಹನ್ನು ಉಳಿಸದೇ ...ನ್ನು ಸುಟ್ಟು ನದಿಯಲ್ಲಿ ಸುಳಿವೇ ಇಲ್ಲದಂತೆ ...ಬಿಡುವುದು ಒಂದು ಅಧ್ಯಾತ್ಮಿಕ ಸಂಸ್ಕಾರದ ...ಗಿ ತೋರುವುದಿಲ್ಲ. ತಮ್ಮದಲ್ಲದ ಭೂಮಿಯ ... ಕುರುಹನ್ನು ಉಳಿಸಲು ಮಾಡಿಕೊಡದ ಅವಕಾಶವೂ, ... ಭಸ್ಮ ಮಾಡಿ ಅದನ್ನು ಇಲ್ಲವಾಗಿಸುವುದರ ...ರ್ಯತೆಯೂ ಅಲ್ಲಿ ಕಾಣುತ್ತದೆ.

...ಂದೂ ರಾಷ್ಟ್ರದಲ್ಲಿ ಹಿಂದೂಗಳೇ ಸಾರ್ವಭೌಮರು ... ಗರ್ಜಿಸುವುದು ಇಂದು ಹಿಂದೂ ರಾಷ್ಟ್ರವಲ್ಲ ... ನಾವು ಇಲ್ಲಿಯವರಲ್ಲ ಎಂದು ಒಳಗೆಲ್ಲೋ ...ಗುತ್ತಿರುವ ದನಿಯನ್ನು ತಾವೇ ಕೇಳಿಸಿಕೊಳ್ಳದಿರಲು ... ಬೇರೆಯವರಿಗೆ ಅದು ತಿಳಿಯದಿರಲು ...ವಂತಹ ಪ್ರಯತ್ನದ ರೀತಿ ಕಾಣುತ್ತದೆ.


...ರ್ವಭೌಮತ್ವ ಹುಚ್ಚು ಇರುವುದಾದರೂ ಯಾರಿಗೆ? ...ಮೆಯ ಹಠಮಾರಿಗಳಿಗೆ. ತಮ್ಮ ಸ್ಥಾನದ, ಮಾನದ ... ಪಾರಿತ್ಯದ ಅರಿವು ಇರುವವರು ...ಮಾರಿಗಳಾಗುವ ಅಗತ್ಯವಿರುವುದಿಲ್ಲ. ಮನೆಯವನೇ ...ವ ಒಬ್ಬನು ತನ್ನ ಮನೆಯ ಇತರ ಸದಸ್ಯರಿಗೆ ... ನನ್ನ ಮನೆ, ನಾನೇ ಈ ಮನೆಯ ಯಜಮಾನ ... ಚೀರಾಡುವ ಅಗತ್ಯವಾದರೂ ಏನಿರುತ್ತದೆ. ಅವರವರ ... ಚಲಾಯಿಸುತ್ತಾರೆ, ಅವರವರ ಕರ್ತವ್ಯಗಳನ್ನು ...ಸುತ್ತಾರೆ. ಅವರವರ ಅಭಿಪ್ರಾಯಗಳನ್ನು ...ಸುತ್ತಾರೆ.

...ಗೋಕರ್ಣದ ದುರಂತ ಪುರಾಣ

...ವಣನು ಇತರ ಅಸುರರಂತೆಯೇ ಪರಮ ಶಿವಭಕ್ತ, ... ತಾಯಿಯು ಮರಳಿನಲ್ಲಿ ಶಿವಲಿಂಗವನ್ನು ಮಾಡಿ ...ವಾಗ ಸಮುದ್ರದ ಅಲೆಯು ಆ ಲಿಂಗವನ್ನು ...ಂಡು ಹೋಗುತ್ತದಂತೆ. ಇದರಿಂದ ತಾಯಿಯು ...ಕೊಳ್ಳುವಳು. ತನ್ನ ತಾಯಿಯ ಮೇಲಿನ ಪ್ರೀತಿಯಿಂದ ರಾವಣ ಶಿವನ ಆತ್ಮಲಿಂಗವನ್ನೇ ತಂದು ಆಕೆಗೆ ಪೂಜೆಗೆಂದು ನೀಡುವುದಾಗಿ ವಾಗ್ದಾನ ಮಾಡಿ, ಶಿವನ ಕುರಿತು ತಪಸ್ಸು ಮಾಡುತ್ತಾನೆ. ಶಿವನು ಬರುವ ಹೊತ್ತಿಗೆ ಇತರ ದೇವತೆಗಳೆಲ್ಲಾ ಹೆದರುತ್ತಾರೆ. ಶಿವನ ಆತ್ಮಲಿಂಗವನ್ನೇ ಕೊಂಡೊಯ್ಯುವ ರಾವಣ ಇನ್ನಷ್ಟು ಶಕ್ತಿಶಾಲಿಯಾಗುವುದಲ್ಲದೇ, ತಮಗೆ ತೊಂದರೆಯೂ ಉಂಟಾಗುವುದೆಂದು ಹೆದರುತ್ತಾರೆ. ನಂತರ ಶಿವನ ಜೊತೆಗೆ ಬರುವ ಪಾರ್ವತಿಯನ್ನು ನೋಡಿ ಚಂಚಲಗೊಳ್ಳುವ ರಾವಣ, ಆ ಸುಂದರಿಯನ್ನೇ ಬಯಸುತ್ತಾನೆ. ಮದುವೆ ಇತ್ಯಾದಿ ಸಾಂಸಾರಿಕ ಬಂಧನಗಳಿಗೆ ತನ್ನನ್ನು ಒಡ್ಡಿಕೊಂಡಿರಲು ಇಷ್ಟ ಪಡದೇ ಇದ್ದ ಆ ಶಿವ ಅದೆಷ್ಟು ಕಾಲದಿಂದ ಇಂಥದ್ದೊಂದು ವಿಚ್ಛೇದನಕ್ಕೆ ಕಾದಿದ್ದನೋ, ಅವಳನ್ನೇ ರಾವಣನ ಹಿಂದೆ









ಕಳುಹಿಸಿಕೊಟ್ಟು ಆಶೀರ್ವದಿಸಿ ಕೈ ತೊಳೆದುಕೊಳ್ಳುತ್ತಾನೆ. ಪಾರ್ವತಿಗೆ ಸಹಜವಾಗಿ ಇದರಿಂದ ಬೇಸರವೂ ಮತ್ತು ದುಃಖವೂ ಆಗುತ್ತದೆ. ಜೊತೆಗೆ ಜಗನ್ಮಾತೆಯಾದ ಪಾರ್ವತಿಯು ಈ ರಾಕ್ಷಸನ ಹಿಂದೆ ಹಿಂದೆ ಹೋದರೆ ಗತಿಯೇನು ಎಂದು ಒಂದು ತಂತ್ರ ಮಾಡುತ್ತಾರೆ. ನಾರದನು ಬಂದು ಇವಳು ಪಾರ್ವತಿಯಲ್ಲ ಶಿವ ನಿನಗೆ ಮೋಸ ಮಾಡಿದ್ದಾನೆ. ತನ್ನ ಹೆಂಡತಿ ಪಾರ್ವತಿಯನ್ನು ಪಾತಾಳದಲ್ಲಿ ಬಚ್ಚಿಟ್ಟಿದ್ದಾನೆ ಎಂದು ಹೇಳಿ ಅಲ್ಲಿಗೆ ಕರೆದೊಯ್ದು ಪಾರ್ವತಿಯಷ್ಟೇ ಸುಂದರವಾಗಿದ್ದ ಮಂಡೋದರಿಯನ್ನು ತೋರಿಸಿ, ಅವಳನ್ನು ಅವನಿಗೆ ಗಂಟು ಹಾಕಿ ಪಾರ್ವತಿಯನ್ನು ಬಿಡಿಸಿಕೊಳ್ಳುತ್ತಾರೆ.

ಮಂಡೋದರಿಯನ್ನು ಹಿಂದಿಕ್ಕಿಕೊಂಡು ಬಂದ ರಾವಣ ತನ್ನ ತಾಯಿಯ ಮುಂದೆ ತನ್ನ ಮಾತು ಮುರಿದ ಕಾರಣಕ್ಕಾಗಿ ತಲೆತಗ್ಗಿಸಿ ನಿಲ್ಲುತ್ತಾನೆ. ಈ ಬಾರಿ ಮತ್ತಷ್ಟು ದೃಢತೆಯಿಂದ ತಪಸ್ಸು ಮಾಡಿ ಶಿವನನ್ನು ಮತ್ತೆ ಒಲಿಸಿಕೊಂಡು ಆತ್ಮಲಿಂಗವನ್ನು ನೀಡುವಂತೆ ಕೇಳುತ್ತಾನೆ. ಶಿವ ಕೊಡುತ್ತಾನೆ. ನಂತರ ಆತ್ಮಲಿಂಗವನ್ನು ತರುವಾಗ ದೇವತೆಗಳೆಲ್ಲಾ ಎಂದಿನಂತೆ ಗಾಬರಿಗೊಳ್ಳುತ್ತಾರೆ. ಎಂದಿನಂತೆ ಸಂಚುಹೂಡುತ್ತಾರೆ. ಗಣಪತಿಯನ್ನು ಕಂಡು ರಾವಣ ಶಿವನ ಆತ್ಮಲಿಂಗವನ್ನು ಹೊತ್ತೊಯ್ಯುವ ವಿಷಯವನ್ನು ತಿಳಿಸಿ, ಅದನ್ನು ಹೊತ್ತೊಯ್ಯದಂತೆ ತಡೆಯಲು ಕೇಳಿಕೊಳ್ಳುತ್ತಾರೆ. ಅದರಂತೆ ಗಣಪತಿಯು ಓರ್ವ ಬ್ರಾಹ್ಮಣ ವಟುವಿನ ರೂಪದಲ್ಲಿ ರಾವಣನಿಗೆ ಎದುರಾಗುತ್ತಾನೆ.

ಆಗ ರಾವಣನಿಗೆ ಸಂಧ್ಯಾವಂದನೆಯ ಸಮಯವಾದ್ದರಿಂದ ಆ ಆತ್ಮಲಿಂಗವನ್ನು ಎಲ್ಲಿಡುವುದೆಂದು ಯೋಚನೆಗೀಡಾಗುತ್ತಾನೆ. ಏಕೆಂದರೆ ಆತ್ಮಲಿಂಗವನ್ನು ನೆಲದ ಮೇಲೆ ಎಲ್ಲಿಯೂ ಇಡಬಾರದೆಂದೂ, ಹಾಗೊಂದು ವೇಳೆ ಇಟ್ಟರೆ ಅದು ಇಟ್ಟಲ್ಲಿ ಬೇರುಬಿಟ್ಟುಕೊಂಡು ಪ್ರತಿಷ್ಠಾಪಿತವಾಗುವುದೆಂದೂ ಕಂಡೀಷನ್ ಅಪ್ಲೈ ಆಗಿರುತ್ತದೆ. ಹಾಗಾಗಿ ಯಾರಾದರೂ ಸಹಾಯಕ್ಕೆ ಬರುವರೇನೋ ಎಂದು ನೋಡುವ ರಾವಣನಿಗೆ ಬ್ರಾಹ್ಮಣ ವಟು ಕಾಣುತ್ತಾನೆ. ಬ್ರಾಹ್ಮಣವೇಷದ ಗಣಪತಿಗೆ ತಾನು ಸಂಧ್ಯಾವಂದನೆಯನ್ನು ಮುಗಿಸಿಕೊಂಡು ಬರುವವರೆಗೂ ಆತ್ಮಲಿಂಗವನ್ನು ಕಾಯ್ದುಕೊಂಡಿದ್ದು, ಬಂದ ಮೇಲೆ ಹಿಂದಿರುಗಿಸುವುದಕ್ಕೆ ಕೋರಿ ಆಚಮನ ನೀಡಲು ಹೋಗುತ್ತಾನೆ. ಆತ್ಮಲಿಂಗವು ಭಾರವಾಗಿದ್ದು ಬೇಗನೆ ಬರಬೇಕೆಂದೂ, ತಾನು ಮೂರು ಸಲ ಕೂಗುವೆನೆಂದೂ, ಬಾರದೇ ಹೋದರೆ ನೆಲದ ಮೇಲೆ ಇಡುವೆನೆಂದೂ ಹೇಳುವ ಅವನ ಮಾತಿಗೆ ಒಪ್ಪಿ ರಾವಣ ಹೋಗುತ್ತಾನೆ. ಪೂರ್ವಯೋಜಿತವಾದಂತೆ ರಾವಣನು ತನ್ನ ಕರ್ಮವನ್ನು ಮುಗಿಸುವ ಮುನ್ನವೇ ವಟು ವೇಷದ ಗಣಪತಿ ಮೂರು ಸಾರಿ ಕೂಗಿ ಆತ್ಮಲಿಂಗವನ್ನು ನೆಲಕ್ಕಿಡುತ್ತಾನೆ. ರಾವಣ ಹಿಂದಿರುಗಿ ಕೋಪದಿಂದ ಗಣಪತಿಯ ತಲೆ ಘಟ್ಟಿಸುತ್ತಾನೆ. ಲಿಂಗವನ್ನು ಕೀಳಲು ಯತ್ನಿಸುತ್ತಾನೆ. ಆಗಾಗಲೇ ಬೇರುಬಿಟ್ಟ ಲಿಂಗವು ನೆಲಬಿಟ್ಟೇಳುವುದಿಲ್ಲ. ಹತಾಶನಾದ ರಾವಣ ತನ್ನ ಯಜ್ಞೋಪವೀತವನ್ನು ಕಿತ್ತೊಗೆಯುತ್ತಾನೆ. ಅವು ಪಂಚಲಿಂಗಗಳಾಗುತ್ತವೆ. ಇದು ಗೋಕರ್ಣದ ಲಿಂಗವು ಆ ಸ್ಥಳದಲ್ಲಿ ಸ್ಥಾಪಿತವಾದ ಕಥೆ. ರಾವಣನ ಪ್ರಯತ್ನವು ನಿಷ್ಫಲವಾಗುವ ದುರಂತದ ಕಥೆ.

ಸ್ಥಳ ಪುರಾಣಗಳು ಹೇಳುವುದೇನು?

ಪುರಾಣಗಳು ಯಾವುದೋ ವಿಷಯವನ್ನು ಹೇಳಲು ಒಂದು ರೂಪಕವಾಗಿ ಬಳಕೆಯಾಗುವುದು ಮಾತ್ರವಲ್ಲ, ಅದು ಪೀಳಿಗೆಯಿಂದ ಪೀಳಿಗೆಗೆ ಬರುವ ಜನ ಸಮುದಾಯ ಸಂಗ್ರಹಿತ ಮನೋಭಾವವಾಗಿ ದಾಟುತ್ತಿರುವಂತಹ ಮನಸ್ಥಿತಿಯೂ ಆಗಿರುತ್ತದೆ. ಪುರಾಣಗಳು ಯಾವ ಬಗೆಯ ಒಗಟುಗಳಾಗಿರುತ್ತವೆ ಎಂದು ನೇರವಾಗಿ ಹೇಳಲಾಗದಿದ್ದರೂ, ವಿವಿಧ ಸ್ತರಗಳಿಂದ ಬಿಡಿಸುವ ಪ್ರಯತ್ನವನ್ನಂತೂ ಮಾಡಬಹುದಾಗಿರುತ್ತದೆ.

ರಾವಣನ ಸಂಹಾರ ಮಾಡಿದ ರಾಮ ಶಿವಭಕ್ತನಾದ ಅವನನ್ನು ಕೊಂದ ಪರಿಹಾರವಾಗಿ ರಾಮೇಶ್ವರದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿ ತನಗೆ ಉಂಟಾಗಿರುವ ದೋಷವನ್ನು ಪರಿಹರಿಸಿಕೊಳ್ಳಲು ಯತ್ನಿಸುತ್ತಾನೆ.

ರಾವಣನೆಂಬ ಅಸುರರನ್ನು ಬ್ರಾಹ್ಮಣನನ್ನಾಗಿ ಚಿತ್ರಿಸಿರುವ ಕಥೆಗಳನ್ನು ನೋಡಿದರೆ, ಆತನು ಜ್ಞಾನಿಯೂ, ಸಂಶೋಧಕನೂ ಮತ್ತು ವಿವಿಧ ವಿದ್ಯೆಗಳಲ್ಲಿ ಪರಿಣಿತನೂ ಆಗಿರುವ ಕಾರಣಕ್ಕೆ ಎಂದು ಒಮ್ಮೆ ತೋರುತ್ತದೆ. ಬ್ರಾಹ್ಮಣ್ಯವೆಂಬ ವರ್ಣವು ಜನ್ಮದಿಂದಲ್ಲ, ಗಳಿಕೆಯಿಂದ ಎಂದು ತಿಳಿಯೋಣ.

ಅದೇನೇ ಇರಲಿ, ಈ ಕಥೆಯನ್ನು ಹೊರನೋಟಕ್ಕೆ ಲಘುವಾಗಿ ಗ್ರಹಿಸಿದರೆ, ಶಿವನನ್ನೂ, ರಾವಣನನ್ನೂ ಮೂರ್ಖರಂತೆ ಚಿತ್ರಿಸಿರುವುದು ಕಾಣುತ್ತದೆ. ತನ್ನ ಹೆಂಡತಿಯನ್ನೇ ಕೇಳಿದವನ ಹಿಂದೆ ಕಳುಹಿಸುವ ಬೇಜವಾಬ್ದಾರಿ ಗಂಡನಾಗಿ ಶಿವನು ಕಾಣುತ್ತಾನೆ. ಆತ್ಮಲಿಂಗಕ್ಕಾಗಿ ಬಂದು, ಪಾರ್ವತಿಯನ್ನು ಕರೆದೊಯ್ದು ಪಾರ್ವತಿಯೆಂದು ಭ್ರಮಿಸಿ ಮಂಡೋದರಿಯನ್ನು ಕರೆದೊಯ್ಯುವ ಮತ್ತೊಬ್ಬ ಮೂರ್ಖ ರಾವಣನನ್ನು ತೋರ್ಪಡಿಸುತ್ತಾರೆ. ಇವನನ್ನು ಮೂರ್ಖನನ್ನಾಗಿಸುವ ಬ್ರಾಹ್ಮಣ ವಟುವಿನ ಕಿಲಾಡಿತನ ಕಾಣುತ್ತದೆ.

ಆದರೆ ರಾವಣನೆಂಬ ದ್ರಾವಿಡನ ತಾಯಿ ಭಕ್ತಿ ಆಗಿನ ಮಾತೃಪ್ರಧಾನದ ವ್ಯವಸ್ಥೆಯನ್ನು (ರಾಮನದು ಪಿತೃಭಕ್ತಿ). ಆಕೆಯ ಇಚ್ಛೆ ಎಂಬುದು ಮೂಲಾರಾಧನೆಗೆ ಅಥವಾ ಮೂಲ ಪರಿಕಲ್ಪನೆ ಮತ್ತು ಸತ್ವಕ್ಕೆ ಆರಾಧನೆ ಸಲ್ಲಿಸುವುದಾಗಿದ್ದು ದ್ರಾವಿಡರು ಅದಕ್ಕೆ ಹೊರತಾಗಿ ಸ್ತ್ರೀಯ ಪ್ರಧಾನವಾದ ಪರಿಕಲ್ಪನೆಯು ಆರಾಧನಾ ಭಾವದಿಂದ ಅನುಭೋಗಕ್ಕೆ ತಿರುಗಿಸಿರುವಂತಹ ಪಲ್ಲಟಗಳನ್ನು, ಅಬ್ರಾಹ್ಮಣ ಮತ್ತು ಅವೈದಿಕ ಪಶುಪಾಲನಾ ವರ್ಗವು ಬ್ರಾಹ್ಮಣ ತೆಕ್ಕೆಗೆ ಬೀಳುವುದಲ್ಲದೇ, ಅದೇ ಬ್ರಾಹ್ಮಣ್ಯದ ಪ್ರಭಾವವು ಅಲ್ಲಿನ ಸಮಾಜ ಮತ್ತು ಸಂಸ್ಕೃತಿಯ ಆತ್ಮವು ಮತ್ತೆ ಅವರಿಗೇ ಮರಳಿ ದೊರಕದಂತೆ ಮಾಡಿ ಹತಾಶವಾಗಿರುವ ಪರಿಸ್ಥಿತಿಯು ಕಾಣುತ್ತದೆ. ಈ ದಿಕ್ಕಿನಿಂದ ಈ ಪೌರಾಣಿಕ ಒಗಟನ್ನು ಅಥವಾ ಸಂಕೇತವನ್ನು ಒಡೆಯುವ ಪ್ರಯತ್ನ ಮಾಡುವುದು ಸಾಂಸ್ಕೃತಿಕ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲುವುದೇನೋ ಎಂದು ತಿಳಿಯುತ್ತೇನೆ.


ಪಕ್ಕಾ ದ್ರಾವಿಡನಾಗಿರುವ ರಾವಣನು ಮತ್ತು ಅವೈದಿಕನಾಗಿರುವ ಶಿವಾರಾಧಕನು ರಾಕ್ಷಸನೆಂದೆನಿಸಿದ್ದು ಅವನಿಗೆ ಯಜ್ಞೋಪವೀತವನ್ನು ಹಾಕಿರುವುದು ಮತ್ತು ಸಂಧ್ಯಾವಂದನಾದಿ ಕಾರ್ಯಗಳನ್ನು ಮಾಡಿಸುವುದು ಬ್ರಾಹ್ಮಣಿಕೆ ಎಂಬುದನ್ನು ಜನ್ಮದಿಂದಲ್ಲ ಎನಿಸುವುದು. ಮತ್ತೂ ಕೆಲವು ಪುರಾಣಿಕರು ಕಶ್ಯಪ ಬ್ರಹ್ಮನ ಗೋತ್ರಕ್ಕೆ ಒಯ್ಯುವುದು ಜ್ಞಾನಿಗಳನ್ನೆಲ್ಲಾ ಬ್ರಾಹ್ಮಣರನ್ನಾಗಿಯೇ ನೋಡುವ ನಂತರದ ತಂತ್ರವೇನೋ ಎಂದೂ ಅನಿಸುತ್ತದೆ.

ಏನೇ ಆಗಲಿ ರಾವಣನೆಂಬ ದ್ರಾವಿಡನು, ಅಸುರನು ಜನಿವಾರವನ್ನು ತೊಟ್ಟು, ವೈದಿಕ ಕರ್ಮಗಳನ್ನು ಮಾಡುವಂತಹ ವಿಷಯ ಇನ್ನೊಂದು ಬ್ರಾಹ್ಮಣಿಕೆಯ ಚೆಂದಕ್ಕೆ ಅಥವಾ ಸೆಳೆತಕ್ಕೆ ಮನಸೋತ, ಸಮ್ಮೋಹನಕ್ಕೆ ಒಳಗಾದ ನವಬ್ರಾಹ್ಮಣರ ಪ್ರತಿಮೆಯನ್ನು ಒಂದು ಹಂತಕ್ಕೆ ನಿಲ್ಲಿಸುತ್ತದೆ. ಅದನ್ನು ಸಹಿಸದ ಮತ್ತೊಂದು ವರ್ಗವು ಮತ್ತೊಂದು ಬ್ರಾಹ್ಮಣ ದಿರಿಸಿನೊಂದಿಗೇ ತಡೆಯೊಡ್ಡುತ್ತದೆ.

ಏನೇ ಇರಲಿ, ಪುರಾಣಗಳು ಸಂಸ್ಕೃತಿ ಅಧ್ಯಯನ ಮಾಡುವುದು ಸುಳ್ಳಲ್ಲ, ಸಮಾಜದ ಬದಲಾವಣೆಗಳ ಮುಖ್ಯ ಕಾರಣಗಳನ್ನೂ ಇದರಲ್ಲಿ ಕಂಡುಕೊಳ್ಳಬಹುದು ಎಂದೂ ಕೆಲವದರಲ್ಲಿ ತೋರುತ್ತದೆ.

ಒಟ್ಟಾರೆ ರಾವಣನೆಂಬ ದೈತ್ಯ ವ್ಯಕ್ತಿತ್ವವನ್ನು ಜನಿವಾರವೆಂಬ ನೂಲಿನೆಳೆಗಳಿಂದ ಬಂಧಿಸಿದ್ದು ಮಾತ್ರ ಸೋಜಿಗವೇನಲ್ಲ. ಅವನ ವಿದ್ಯೆ, ಜ್ಞಾನ, ಸಾಧನೆಗಳೆಲ್ಲವೂ ಬ್ರಾಹ್ಮಣ ಗೋತ್ರದವನಾದ್ದರಿಂದಲೇ ಎನ್ನುವ ಸ್ವಪ್ರತಿಷ್ಠೆಯ ಗೀಳಿನ ವಾದವೂ ಆಶ್ಚರ್ಯವೇನಲ್ಲ. ಆದರೆ ರಾವಣನೆಂತಹುದ್ದೇ ದೈತ್ಯ ಪ್ರತಿಭೆಯಾಗಿದ್ದರೂ ಆರ್ಯ ದ್ರಾವಿಡ ತಾರತಮ್ಯವನ್ನು ಘೋಷಿಸುವಂತೆಯೇ ಅಥವಾ ಉತ್ತರ ಮತ್ತು ದಕ್ಷಿಣವನ್ನು ಬೇರ್ಪಡಿಸುವಂತೆಯೋ ಅಂತರವನ್ನು ಕಾಯುತ್ತಾ ಆರ್ಯರ ರಾಮನು ತಾನೇ ಆರಾಧನೆಯ ಕೇಂದ್ರವಾಗಿ ಉಳಿದಿದ್ದು ಮಾತ್ರ ಆಶ್ಚರ್ಯ. ಇದಕ್ಕೆ ಪ್ರಭುತ್ವಗಳನ್ನು ಓಲೈಸುವ, ಅವರೊಡನೆ ಸಂಧಾನಗಳನ್ನು ಮಾಡಿಕೊಳ್ಳುತ್ತಾ, ಅವರನ್ನೂ ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವ ಪುರೋಹಿತಶಾಹಿವರ್ಗದ ಹುನ್ನಾರ ಮಾತ್ರ ಯಾವಾಗಲೂ ಕಾಣುತ್ತಲೇ ಇರುತ್ತದೆ. ●

ಕೊಳೆತ ಗುರುವಿನ ಭರ್ಜರಿ ಶಾಪದಂಗಡಿ




ನೀವು ಉತ್ತರ ಕರ್ನಾಟಕಕ್ಕೆ ಹೋದರೆ ಪ್ರಚಲಿತ ವಿರುವ ಹಿಂದಿ, ಬರವಣಿಗೆಯ ಪ್ರಭಾವದ ಹಿನ್ನೆಲೆಯ ಮೆಡಿಕಲ್‌ಶಾಪ್, ಸೈಕಲ್‌ಶಾಪ್, ಹಾರ್ಡ್‌ವೇರ್‌ಶಾಪ್‌ಗಳು ಅಲ್ಲಲ್ಲಿ ಕಾಣಸಿಗುತ್ತವೆ. ಆದರೀಗ ಅದೆಲ್ಲಕ್ಕಿಂತಲೂ ಮಿಗಿಲಾಗಿ ಹೊಸನಗರದ ಪ್ರಧಾನ ಕಚೇರಿಯಡಿಯಲ್ಲಿನ ಗುರುಶಾಪದ ಶಾಪಗಳು ಇದೀಗ ಅಲ್ಲಲ್ಲಿ ಹೊಸತಾಗಿ ಹುಟ್ಟಿಕೊಂಡು ಜನರಿಗೆ ಬಿಟ್ಟಿಯಾಗಿ ಶಾಪವನ್ನು ಸರಬರಾಜು ಮಾಡುತ್ತಿರುವ ಸುದ್ದಿ ಬಂದಿದೆ. ನಿಮಗೆ ಬಿಟ್ಟಿ ಶಾಪ ಬೇಕೇಬೇಕೆಂದರೆ ನೀವು ಬಿಪಿಎಲ್ ಕಾರ್ಡ್‌ದಾರರೇ ಆಗಬೇಕೆಂದಿಲ್ಲ; ಆಧಾರ್ ಕಾರ್ಡ್, ಬ್ಯಾಂಕ್ ಅಕೌಂಟೂ ಕೂಡ ಕಂಪಲ್ಸರಿ ಇಲ್ಲ.

ಪ್ರೇಮಲತಾ ಅಥವಾ ದಿವಾಕರ ಶಾಸ್ತ್ರಿಯವರ ಪರವಹಿಸಿ ಮಾತಾಡಿ ಇಲ್ಲಾ ಫೇಸ್ ಬುಕ್ಕಿನಲ್ಲಿ ಸಗಣಿ ಸ್ವಾಮಿಯ ವಿರುದ್ಧ ಸೆಣೆಸುತ್ತಿರುವ ಪ್ರೇಮಲತಾರಿಗೆ ಬೆಂಬಲಿಸಿ ಅಥವಾ ಯಾವುದೋ ಬೆಂಬಲವನ್ನು ಕೇವಲ 'ಲೈಕ್' ಮಾಡಿದರಷ್ಟೇ ಸಾಕು ತತ್‌ಕ್ಷಣ ಗುರುಶಾಪದ ಮೂಟೆಯೊಂದು ನಿಮ್ಮ ಮನೆಬಾಗಿಲ ಬಳಿ ಬಂದು ಬಿದ್ದಿರುತ್ತದೆ (ರಾಘವನ ಚೇಲಾಗಳು ಫೋನ್ ಮೂಲಕ ಗುರುಶಾಪದ ಬೆದರಿಕೆಯನ್ನು ನಿಮಗೆ ತಲುಪಿಸಿ ಬಿಡುತ್ತಾರೆ). ಇಂಥಾ ಉಚಿತ ಹಾಗು ದಿಢೀರ್ ಸೇವೆ ಎಲ್ಲಾದರೂ ಉಂಟೇ? ಇದೇ ಈ ಶಾಪದಂಗಡಿಯ ಸ್ಪೆಷಾಲಿಟಿ!

ರಾಘವ ಇದೀಗ ಪೀಕಲಾಟಕ್ಕೆ ಸಿಲುಕಿದ್ದೇ ಗುರುಕೃಪೆ-ರಾಮನ ಕೃಪೆಯೆಂಬ ಬೊಗಳೆ ತಂತ್ರಗಳ ಕು-ಪ್ರಯೋಗಗಳ ಮೂಲಕವಾಗಿ. ಈಗ ಅದರದ್ದೇ ಮತ್ತೊಂದು ಅವತರಣಿಕೆ ಯೆಂಬಂತೆ ಅದೇ ಭಾವನೆಗಳ ಮೇಲೆ ಚೆಲ್ಲಾಟವಾಡುತ್ತಾ "ಗುರು ಶಾಪ"ದ ಬ್ಲಾಕ್‌ಮೇಲ್ ತಂತ್ರಕ್ಕಿಳಿದಿರುವುದು ರಾಘವನ ಅವನತಿಯ ಮುನ್ನುಡಿಯೆಂದೇ ಹವ್ಯಕರು ಆಡಿಕೊಳ್ಳುತ್ತಿದ್ದಾರೆ (ಈ ಹಿಂದೆ ಇದೇ ಪ್ರಕರಣಕ್ಕೆ ಸಂಬಂಧಿಸಿ 'ಬಹಿಷ್ಕಾರ'ದ ಬೆದರಿಕೆಗೆ ಗುರಿಯಾದ ಅಮಾಯಕ ಶಾಮಾಶಾಸ್ತ್ರಿ ಆತ್ಮಹತ್ಯೆಗೆ ಶರಣಾಗಿದ್ದರು).

ಗುರುಶಾಪ ಮಿಗಿಲೋ? ಇಲ್ಲಾ ನೊಂದ ಹೆಣ್ಣೊಬ್ಬಳ ಶಾಪ ಮಿಗಿಲೋ? ಎಂಬುದರ ಬಗ್ಗೆಯೂ ಇದೀಗ ಚರ್ಚೆ ಶುರುವಾಗಿದೆ. ಶ್ರೀಕೃಷ್ಣ ಸರ್ವಶಕ್ತ ಎನಿಸಿದ್ದರೂ, ಅಶ್ವತ್ಥಾಮನ ಬ್ರಹ್ಮಾಸ್ತ್ರವನ್ನೇ ಕೆಲಸಕ್ಕೆ ಬಾರದಂತೆ ಮಾಡಿದವನಾಗಿದ್ದರೂ, ಹಲವಾರು ಶಾಪಗ್ರಸ್ತರನ್ನು ಉದ್ಧರಿಸಿದ್ದರೂ ನೊಂದ ಹೆಣ್ಣಾದ ಗಾಂಧಾರಿಯ ಕುಲನಾಶದ ಶಾಪಕ್ಕೆ ಸಿಲುಕಿ ತನ್ನ ಕೊನೆಗಾಲದಲ್ಲಿ ಕಣ್ಣೆದುರೇ ತನ್ನವರು ಬಡಿದಾಡಿಕೊಂಡು ಹುಳಗಳಂತೆ ಸಾಯುವುದನ್ನು ತಪ್ಪಿಸಲಾಗದೇ ಪ್ರಾಣ ಬಿಡಬೇಕಾಗಿ ಬಂತು.

ನಿಜ ಆಧ್ಯಾತ್ಮ ವ್ಯಕ್ತಿಗಳ ಪ್ರಕಾರ ವರ ಯಾ ಶಾಪ ಯಾವುದೇ ಆಗಲಿ ಅಲ್ಲಿ ಕೊಡುವವನ ಆತ್ಮಶುದ್ಧತೆ ಮುಖ್ಯ ಎನ್ನುತ್ತಾರೆ. ಜತೆಗೆ ಇದು ಮನದಾಳದಿಂದ ಬಂದರಷ್ಟೇ ಅದು ನಿಜ ಪರಿಣಾಮ ಬೀರಬಲ್ಲದು ಎನ್ನುತ್ತಾರೆ. ಒಬ್ಬ ಕಳ್ಳ ಮನಸ್ಸಿನ ಠಕ್ಕುತನದ ಸನ್ಯಾಸಿ ತಾನು ಖಾವಿತೊಟ್ಟದ್ದೇನೆಂದ ಮಾತ್ರಕ್ಕೆ ಆತ ಕೊಟ್ಟ ಶಾಪ ಪರಿಣಾಮಕಾರಿಯಾಗಲಾರದು. ಸತ್ಯವೋ, ಕಾಕತಾಳೀಯವೋ ನಂಬುವವರಿಗೇ ಬಿಟ್ಟದ್ದು, ಹೆಲಿಕಾಪ್ಟರ್ ಪತನದಲ್ಲಿ ದಿಕ್ಕಿಲ್ಲದಂತೆ ಸತ್ತ ಆಂಧ್ರದ ಮಾಜಿ ಸಿಎಂ ಒಬ್ಬರಿಗೆ ಅವರಿಂದ ನೊಂದ




ಮಹಿಳೆಯೊಬ್ಬಳು 'ನೀನೂ ಕುಕ್ಕ (ನಾಯಿ) ಸಾವು ಪಡೆಯುತ್ತೀಯ ನೋಡು' ಎಂದು ಬಹಿರಂಗವಾಗಿ ಅಂದಿದ್ದಳಂತೆ. ಗುರುಶಾಪದ ದುಖಾನು ತೆಗೆದ ಸಗಣಿ ರಾಘವ ಈ ರೀತಿ ನೊಂದ ಹಾಗು ನೋಯಿಸಲ್ಪಡುತ್ತಿರುವ ಪ್ರೇಮಲತಾರ ಉಗ್ರಶಾಪವನ್ನು ಎದುರಿಸುವ ಮುನ್ನ ತನ್ನ ತಗಡು ಗುರುಶಾಪದ ಬಿಕರಿ ವ್ಯವಹಾರವನ್ನು ಬದಿಗಿಟ್ಟು ಹಾಗು ಚೇಲಾಗಳು ನಡೆಸುತ್ತಿರುವ ಅದರ ಬ್ರಾಂಚುಗಳನ್ನು ಮುಚ್ಚಿ ಸದ್ಯಕ್ಕೆ ತೆಪ್ಪಗೆ ಆತ್ಮ ವಿಮರ್ಶೆಗಿಳಿಯುವುದು ಹೆಚ್ಚು ಒಳಿತು.

-ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಅಪಕ್ವ ನಾಯಕನ ಅಪ್ರಬುದ್ಧ ನಡವಳಿಕೆ

ಸಂಘಟನಾ ಚಾತುರ್ಯ, ಪಟ್ಟಿಗೆ ಪ್ರತಿ ಪಟ್ಟು ಹಾಕುವ ಕೌಶಲ್ಯ ಮತ್ತು ಕೇಳುಗರ ಮನಸ್ಸನ್ನು ಉದ್ರೇಕಿಸುವ ಭಾಷಣ



ಕಲೆ – ಇವಿಷ್ಟು ಒಬ್ಬ ನಾಯಕನಿಗೆ ಸಾಕು ಎನ್ನುವುದಾದರೆ ಪ್ರಧಾನಿ ಮೋದಿಗೆ ಇನ್ನಾವ ಅರ್ಹತೆಯೂ ಬೇಡ (ಈ ಹೇಳಿಕೆ ಈತನ ಗೆಳೆಯ ಅಮಿತ್ ಷಾಗೂ ಅನ್ವಯಿಸೀತು). ಆದರೆ ನಾಯಕ ಎನಿಸಿಕೊಂಡವನಿಗೆ ತನ್ನ ದೇಶವನ್ನು ಇನ್ನೊಂದು ದೇಶದ ಪ್ರತಿನಿಧಿಯೆದುರು ಪ್ರತಿನಿಧಿಸುವಾಗ ಕನಿಷ್ಠ ಗಾಂಭೀರ್ಯ ಮತ್ತು ಸಮತೋಲನದ ವರ್ತನೆಗಳು ಬೇಡವೆ? ಒಬಾಮನೆದುರು ಕೋಡಂಗಿಯಂತಾದ ಈ ಮಹಾಶಯನನ್ನು ಪತ್ರಿಕೆ ತೆರೆದಿಟ್ಟು ಒಳ್ಳೆ ಕೆಲಸ ಮಾಡಿದೆ. ಎಲ್ಲ ಕೋನಗಳಿಂದಲೂ ಭಾರತದ ಸಮಾಜಕ್ಕೆ ಅಪಾಯಕಾರಿಯಾದ ಈತ ಧರಿಸಿದ 15 ಲಕ್ಷ ವೆಚ್ಚದ ದಿರಿಸಿನ ವಿಚಾರ ಓದಿ 'ಅಯ್ಯೋ, ಈತನ ಬುದ್ಧಿಗಿಷ್ಟು' ಅಂತ ಅನಿಸಿತು.

ಪ್ರಧಾನಿಯಾದ ಕೂಡಲೆ ಸಂಸತ್ತಿನ ಒಳಗೆ ಸರಳವಾಗಿ ಪ್ರಮಾಣವಚನ ಸ್ವೀಕರಿಸುವುದನ್ನು ಬಿಟ್ಟು ರಾಷ್ಟ್ರಪತಿ ಭವನದೆದುರು ವಿಶೇಷ ರಕ್ಷಣೆಯಲ್ಲಿ ಸುಮಾರು 17.60 ಲಕ್ಷ ವೆಚ್ಚದ ಸಮಾರಂಭದಲ್ಲಿ ಈತ ಅದೇನೂ ವಚನಬದ್ಧನಾದನೋ ಆತನೆ ಹೇಳಬೇಕು. ಪ್ರಧಾನಿಯಾದ ಕೂಡಲೆ 7 ಕೋಟಿ ರೂಪಾಯಿ ವೆಚ್ಚದ ಕಾರು ಖರೀದಿಸಿದ ದಾಖಲೆಯೂ ಈತನ ಹೆಸರಿನಲ್ಲಿದೆ. ಕಾರ್ಪೋರೇಟ್ ಧಣಿಗಳ ಹಾಗೆ ದುಂದುಗಾರಿಕೆಯಲ್ಲಿ ಬದುಕದೆ ಹೋದರೆ ಸಂಘ ಪರಿವಾರದ ಕಣ್ಮಣಿ ಆಗಿ ಏನು ಪ್ರಯೋಜನ?

ಅಕಟಕಟಾ......! ನಾವಿನ್ನೂ ನಾಲ್ಕು ವರ್ಷ, ನಾಲ್ಕು ತಿಂಗಳು ಈ ಪ್ರಧಾನಿ ಹಾಗೂ ಈತನ ಪಟಾಲಂ ಅನ್ನು ಸಹಿಸಬೇಕೆ?•

-ರವಿಕುಮಾರ್, ಹಾಸನ

ಸಗಣಿ ಸ್ವಾಮಿ ಆತ್ಮವಿಮರ್ಶೆ ಮಾಡಿಕೊಳ್ಳಲಿ

ರಾಮಚಂದ್ರಾಪುರ ಸ್ವಾಮೀಜಿಯ ವಿಷಯ ನಾವು ಶೂದ್ರರು ಮಾತನಾಡಿದರೆ "ಅದೆಲ್ಲ ನಿಮ್ಮ ಜಾತಿಯ ಒಳಗಿನ ವಿಷಯ. ಅದೆಲ್ಲ ನಮಗೆ ಬೇಡ" ಎನ್ನುವುದು ಸ್ವಾಮೀಜಿ ಪರ ಇರುವ ಹವ್ಯಕ ಬ್ರಾಹ್ಮಣರ ವಾದ. ಅದು ಸರಿ, ಶ್ರೀರಾಮ ಕ್ಷತ್ರಿಯ; ಹಾಗಾಗಿ ಅವನ ಮೇಲೆ ಶೂದ್ರರಿಗೆ ಹೆಚ್ಚು ಅಧಿಕಾರವಿದೆ. ಆದುದರಿಂದ ನಮ್ಮ ದೇವರಾದ ಶ್ರೀ ರಾಮಚಂದ್ರನ ಪವಿತ್ರ ಹೆಸರು ದುರುಪಯೋಗಪಡಿಸಿ ಒಬ್ಬ ಹೆಣ್ಣನ್ನು ಲೈಂಗಿಕವಾಗಿ ಶೋಷಿಸಲು ನಿಮ್ಮ ಸ್ವಾಮೀಜಿಗೆ ಎಲ್ಲಿಯ ಅಧಿಕಾರವಿದೆ ಎಂದು ನಾವೂ ಕೇಳಬಹುದೇ? ತನ್ನನ್ನು ದೈಹಿಕವಾಗಿ ಸಂತುಷ್ಟಗೊಳಿಸಿದರೆ ಶ್ರೀರಾಮದೇವರ ಅನುಗ್ರಹವಾಗುತ್ತದೆ ಎಂದು ಸ್ವಾಮೀಜಿ ಹೇಳಿ ಒಬ್ಬ ಮುಗ್ಧ ಮಹಿಳೆಯ ಶೀಲ ಕೆಡಿಸಿದ್ದು ಎಲ್ಲಾ ಜಾತಿಯ ರಾಮನ ಭಕ್ತರ ಭಾವನೆಗಳಿಗೆ ಘಾಸಿಯಾಗಿದೆ. ಇದಕ್ಕೆ ಸ್ವಾಮೀಜಿಪರ ಇರುವ ರಾಮ ಭಕ್ತರು ಏನು ಹೇಳುತ್ತಾರೆ?

1960 ರ ದಶಕದಲ್ಲಿ ಉಡುಪಿಯ ಅಷ್ಟ ಮಠಾಧೀಶರಲ್ಲಿ ಒಬ್ಬರು ಪೀಠ ತ್ಯಜಿಸಿದರು. ಕಾರಣ ಅವರು ಪ್ರಾಮಾಣಿಕವಾಗಿ ತಮಗೆ ದೈಹಿಕ ಕಾಮನೆಗಳ ನಿಗ್ರಹ ಸಾಧ್ಯವಿಲ್ಲ ಎಂದು ಮನಗಂಡಿದ್ದರು. ಅನಂತರ ಅವರು ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ಲಾರ್ಕ್ ಆಗಿ ಕೆಲಸಕ್ಕೆ ಸೇರಿ ಮದುವೆಯಾಗಿ ನಿವೃತ್ತಿಯ ನಂತರ ಈಗ ಅಮೆರಿಕದಲ್ಲಿ ಮಗಳ ಮನೆಯಲ್ಲಿ ನೆಲೆಸಿದ್ದಾರೆ. ಅವರೇ ಕಳೆದ ಉಡುಪಿ ಪರ್ಯಾಯದ ಸಮಯದಲ್ಲಿ ಭಾರತಕ್ಕೆ ಬಂದು ತಮ್ಮ ಅನುಭವ ಹೇಳಿದ್ದರು. ಅವರ ಪೀಠತ್ಯಾಗಕ್ಕೆ ಮುಂಚೆ ಆಗಿನ ಅವರ ಸರೀಕರಾದ ಇತರ ಸ್ವಾಮಿಗಳು ಬಂದು "ತಾವು ಪೀಠತ್ಯಾಗ ಮಾಡಬಾರದು, ತ್ಯಾಗ ಮಾಡಿದರೆ ಭಕ್ತರಿಗೆ ಮಠದ ಬಗ್ಗೆ ನಂಬಿಕೆ ಕಡಿಮೆಯಾಗುತ್ತದೆ. ಇತರರಂತೆ ಪೀಠದಲ್ಲಿಯೇ ಇದ್ದುಕೊಂಡು ತಮಗೆ ಇಷ್ಟವಾದ 'ಜೀವನ ವಿಧಾನ'ವನ್ನು ಗುಟ್ಟಾಗಿ ಪಾಲಿಸಲು ಯಾರ ಆಕ್ಷೇಪಣೆಯೂ ಇಲ್ಲ" ಎಂದು ಹೇಳಿ ಅವರ ಮನವೊಲಿಸಲು ಪ್ರಯತ್ನಿಸಿದ್ದರಂತೆ. ಆದರೆ ತನ್ನ ಹೃದಯ ಈ ತರಹದ ಆತ್ಮವಂಚನೆಗೆ ಒಪ್ಪಲಿಲ್ಲ, ಹಾಗಾಗಿ ಪೀಠ ತ್ಯಜಿಸಿಯೇ ಬಿಟ್ಟೆ ಎಂದು ಅವರೇ ಕಳೆದ ಪರ್ಯಾಯದ ಸಮಯದಲ್ಲಿ ಭಾರತಕ್ಕೆ ಬಂದಾಗ ಹೇಳಿದ್ದರು.

ಕುಕ್ಕೆ ಸುಬ್ರಹ್ಮಣ್ಯ ಮಠ ತ್ಯಜಿಸಿ ಸಂಸಾರಿಯಾಗಿರುವ ವಿದ್ಯಾಭೂಷಣರೂ ಆತ್ಮವಂಚನೆ ಮಾಡಿಕೊಳ್ಳಲು ಸಾಧ್ಯವಾಗದೇ ಪೀಠ ತ್ಯಜಿಸಿ ಈಗ ಗಾಯಕರಾಗಿರುವರು. ಆದರೆ ಆತ್ಮಸಾಕ್ಷಿ ಇಲ್ಲದ ಇನ್ನೂ ಹಲವು ಸ್ವಾಮಿಗಳು ಆತ್ಮವಂಚನೆ ಮಾಡಿಕೊಂಡು ಹಾಗೆಯೇ ಮುಂದುವರಿದು ದೇವರಿಗೆ ಹಾಗೂ ಪೀಠಕ್ಕೆ ದ್ರೋಹ ಬಗೆಯುತ್ತಿದ್ದಾರೆ. ಆದರೆ ಅಂತಹವು ಹೊರಬರುತ್ತಿಲ್ಲ ಅಷ್ಟೇ. ಕಾರಣ ಇಂತಹವರನ್ನು ವಿರೋಧಿಸುವ ಗುಂಪಿಗಿಂತ ನೂರು ಪಟ್ಟು ದೊಡ್ಡ ಹಾಗೂ ಪ್ರಭಾವಶಾಲಿ ಗುಂಪು ಇಂತಹ ಚಪಲ ಮಠಾಧೀಶರನ್ನು ಬೆಂಬಲಿಸುತ್ತಿದೆ ಹಾಗೂ ಅವರ ಕರ್ಮಕಾಂಡಗಳನ್ನು ಮುಚ್ಚಿಡಲು ಸಹಾಯ ಮಾಡುತ್ತಿವೆ. ಇದು ಹಿಂದೂ ಧರ್ಮದೊಳಗಿನ ನೈತಿಕ ಅಧಃಪತನಕ್ಕೆ ಸಾಕ್ಷಿ.


-ಆರ್.ಬಿ.ಶೆಣಾವ, ಮಂಗಳೂರು

ಸಂತ್ರಸ್ತೆಯ ಪರ ನಿಂತ ಜನ

ರಾಮಚಂದ್ರಾಪುರ ಮಠಾಧೀಶರ ಪ್ರಕರಣದಲ್ಲಿ ಕೋರ್ಟಿನಲ್ಲಿ ಆಗುತ್ತಿರುವ ಬೆಳವಣಿಗೆಯ ಬಗ್ಗೆ ಚರ್ಚಿಸಲು ಕಳೆದ ಶನಿವಾರ ಮಂಗಳೂರಿನಲ್ಲಿ ಸೇರಿದ್ದ ಸಮಾನ ಮನಸ್ಕರ ಸಭೆ ಸುಮಾರು ನಾಲ್ಕು ತಾಸು ನಡೆದು ಪ್ರಜ್ಞಾವಂತ ಸಭಿಕರು ದಿಟ್ಟವಾಗಿ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದು ವಿಶೇಷವಾಗಿತ್ತು. ಅದಕ್ಕಿಂತ ಗಮನಾರ್ಹವಾದುದೇನೆಂದರೆ ಅಲ್ಲಿ ಸೇರಿದ್ದ ಇನ್ನೂರಕ್ಕೂ ಹೆಚ್ಚು ಸಭಿಕರಲ್ಲಿ ಅರ್ಧದಷ್ಟು ಮಹಿಳೆಯರೇ ಇದ್ದಿದ್ದು ಮಾತ್ರವಲ್ಲ ಸಂವಾದದಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿದ್ದು.


ದೇವರು ಧರ್ಮ ಮಠಾಧೀಶರು ಮುಂತಾದ ಧಾರ್ಮಿಕ ವಿಷಯಗಳ ವಿವಾದದಲ್ಲಿ ಮಹಿಳೆಯರು ಯಾವಾಗಲೂ ಅವ್ಯಕ್ತ ಪಾಪಭೀತಿ ಮತ್ತು ಗುರುಶಾಪದ ಭ್ರಾಂತಿಯಿಂದಾಗಿ ಭಾಗವಹಿಸುವುದು ತುಂಬಾ ಕಡಿಮೆ. ಆದರೆ ಶನಿವಾರದ ಸಭೆಯಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸಿ ಸಂತ್ರಸ್ತಳಾದ ಪ್ರೇಮಲತಾ ಪರವಾಗಿ ದಿಟ್ಟತನದಿಂದ ಮಾತನಾಡಿದ್ದು ನೋಡಲು ಹೆಮ್ಮೆಯೆನಿಸಿತು.





ಶ್ರದ್ಧಾಂಜಲಿ

ಫೆ.18ರ 'ಲಂಕೇಶ್'ನಲ್ಲಿ ಅಗಲಿದ ವಸುವಿನ ಬಗ್ಗೆ ನೀಲಾ ಅವರ ಹೃದಯಸ್ಪರ್ಶಿ ಕವನ ಹಾಗೂ ಬಿ.ಎಂ. ಪುಟ್ಟಯ್ಯ ಅವರ "ಆ ಕಾರ್ಯಕ್ರಮಕ್ಕೆ ನೀವು ಹೋಗಿದ್ರಾ ಮೇಡಂ," ಎಂಬ ಲೇಖನ ಮನಮುಟ್ಟಿ ನನ್ನ ಮೂಕ ಭಾವನೆಗೆ ಭಾಷ್ಯ ಒದಗಿಸಿತು. ಅದಕ್ಕೇ ಈ ನನ್ನ ಸಾಲುಗಳನ್ನು ಬಾಲ್ಯ ಹಾಗೂ ಕಾಲೇಜು ದಿನಗಳಲ್ಲಿ ನನ್ನ ಚರ್ಚಾಸ್ಪರ್ಧೆಯ ಸಹಪಾಠಿಯಾಗಿ ಆಪ್ತವಾಗಿದ್ದ ವಸುವಿಗೆ ಶ್ರದ್ಧಾಂಜಲಿಯಾಗಿ



ಅರ್ಪಿಸುತ್ತಿದ್ದೇನೆ.

ಬಾಲ್ಯ ಹಾಗೂ ಕಾಲೇಜು ದಿನಗಳಲ್ಲಿ ಮೈಸೂರು ವಲಯದ ಶೈಕ್ಷಣಿಕ ಕ್ಷೇತ್ರದಲ್ಲಿ ಮಾತ್ರ ಭೇಟಿಯಾಗಿದ್ದ ಗೆಳತಿ ವಸು ಅನಂತರ ನಾನು ಕಾರ್ಕಳಕ್ಕೆ ಬಂದ ಮೇಲಂತೂ ಸಂಪರ್ಕ ಸಾಧಿಸುವ ಅವಕಾಶವೇ ಸಿಗದೆ ಕೊಂಡಿ ತಪ್ಪಿ ಹೋಗಿತ್ತು. ಅನಂತರ ಅವಳ ವೈಚಾರಿಕ ಲೇಖನ ಓದುತ್ತ ಅವಳ ಮಾನವೀಯ ಸ್ಪಂದನಕ್ಕೆ ತಲೆದೂಗುತ್ತ ಎಲ್ಲಿಯಾದರೂ surprise ಆಗಿ ಸಿಕ್ಕಾಗ ಎಲ್ಲವನ್ನು ನೆನಪಿಸಿ ಆ ಖುಷಿಯನ್ನು ಅವಳ ಕಣ್ಣಲ್ಲಿ ಕಾಣಬೇಕೆಂದು ಕಾಯುತ್ತಲೇ ಇದ್ದೆ. ಆದರೆ ಆ surprise ವಸುವಿನ ಸಾವಿನ ರೂಪದಲ್ಲಿ ಬಂದು ಕಣ್ಣು ಹನಿಗೂಡಿಸುತ್ತವೆಂದು ಕನಸಿನಲ್ಲೂ ಎಣಿಸಿರಲಿಲ್ಲ. ಕೆಲವೊಮ್ಮೆ ನಮ್ಮ ಭರವಸೆಗಳು ಸುಳ್ಳಾಗುತ್ತವೆ ಹಾಗೂ ಕೆಲವು ಭೇಟಿಗಳನ್ನು ನಮ್ಮ ಉಡಾಫೆಯಿಂದ ತಡಮಾಡಬಾರದು ಎಂಬುದಕ್ಕೆ ನನಗೆ ವಸುವಿನ ಸಾವು ಪಾಠ ಕಲಿಸಿದೆ. ಹಿಂದೆ 'ಆಳ್ವಾಸ್ ನುಡಿಸಿರಿ'ಯ ಕಾರ್ಯಕ್ರಮದಲ್ಲಿ ಅವರ ಅರ್ಥಪೂರ್ಣ ನುಡಿಗಳನ್ನು ಕೇಳಿ ಸಂಭ್ರಮಿಸಿದರೂ ಜನಸಂದಣಿಯ ಕಾರಣ ಅವರನ್ನು ತಕ್ಷಣ ಭೇಟಿ ಮಾಡಲಾಗದೆ 'ಮತ್ತೆ ಖಂಡಿತ ಸಿಕ್ಕಿಯೇ ಸಿಗುತ್ತಾಳೆ' ಎಂದು ಮುಂದೂಡಿದ್ದೆ. ಫೋನ್ ನಂಬರ್ ಪಡೆಯುವ ಆಸಕ್ತಿಯನ್ನು ತೋರದ ನನ್ನ ಬಗ್ಗೆ ನನಗೇ ಬೇಸರವೆನಿಸುತ್ತಿದೆ. ಆದರೆ 'ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ' ಮನದಲ್ಲಿ ಮೂಡಿರುವ ಗೆಳತಿಯ ಚಿತ್ರಕ್ಕೆ ರೂಪ ಕೊಡಲು ಪ್ರಯತ್ನಿಸುತ್ತ ಅವಳ ವ್ಯಕ್ತಿತ್ವಕ್ಕೆ ಗೌರವ ಸಲ್ಲಿಸುತ್ತೇನೆ.

ನನ್ನಲ್ಲಿ ಇಷ್ಟು ಬರೆಯಲು ಸಾಧ್ಯವಾಗಿಸಿದ 'ಲಂಕೇಶ್' ವಾರ ಪತ್ರಿಕೆಗೆ ಕೃತಜ್ಞತೆಗಳು.

ವಸುವಿನ ಮೊನಾಲಿಸಾ ನಗು

ವಸುವಿನ ಮೊನಾಲಿಸಾ ನಗು
ಈಗ ಅವಳ ಭಾವಚಿತ್ರದ ಮೇಲಿನ
ತುಟಿಯಲ್ಲಿ ಹೇಗೆ ನಂದದೆ ಇದೆಯೋ
ಹಾಗೆಯೇ ಆ ಬಾಲ್ಯದ-ಕಾಲೇಜು ದಿನಗಳಲ್ಲೂ
ಇತ್ತು, ನೋಡಿರುವ ನಾನೇ ಸಾಕ್ಷಿ

ಚರ್ಚಾಸ್ಪರ್ಧೆಯಲ್ಲಿ ಪರ-ವಿರೋಧ
ಮಾತಾಡುತ್ತ ಸೋಲು-ಗೆಲುವು ಅನುಭವಿಸುತ್ತಿದ್ದ
ಗೆಳೆಯರು ನಾವು! ಅನಂತರ ಸ್ನೇಹಕ್ಕೆ ಮಾತ್ರ
ಎಂದೂ ಕುಂದು ಬಂದಿರಲಿಲ್ಲ

ಊಟ ಹಂಚಿ ತಿನ್ನುತ್ತಿದ್ದೆವು
ಒಳಿತು-ಕೆಡಕು ಕುರಿತು ಚರ್ಚಿಸಿ
ಮನುಷ್ಯ ಪರ-ಮಹಿಳೆಯರ ಪರ
ಸದಾ ನಿಲ್ಲುತ್ತಿದ್ದೆವು

ನನ್ನದು ಹೊಟ್ಟೆ ಹುಣ್ಣಾಗಿಸುವಂಥ
ಅಲೆಅಲೆಯಾದ ನಗುವಾದರೆ
ವಸುವಿನದು ಆ ನಗುವೆಲ್ಲವನ್ನೂ
ಸದ್ದಿಲ್ಲದೆಯೇ ಬಿಡಿಸಿಡುವ
ಸೌಜನ್ಯದ ಗಂಭೀರ ನಗುವಾಗಿತ್ತು
ಆಗಲೇ ಗೆಳತಿಗೆ ಜೀವನದ
ಇನ್ನೊಂದು ಮುಖದ ಅರಿವು ಸಾಂದ್ರವಾಗಿ
ನಗು ಭೂಮಿತೂಕ ಪಡೆದಿತ್ತೇ?

ಗೊತ್ತಿಲ್ಲ,
ಆದರೆ ಎರಡು ಉದ್ದನೆಯ ಜಡೆಗಳ
ಸೌಮ್ಯ ಮುಖದ ಆ ಸುಂದರಿ ವಸು
ಇದೀಗ ಕಾಲವಶಳಾಗಿ ಭಾವಚಿತ್ರದಲ್ಲಿ
ಅವಳ ಬಾಬ್‌ಕಟ್ಟಿನ ಕೂದಲಿದ್ದರೂ
ಅವಳ ಹೃದಯ ತನ್ನ ಮಾನವತೆಯ ನಗುವನ್ನ
ನಮ್ಮ ದಾಖಲಾತಿಗೆ ಬಿಟ್ಟುಹೋಗಿದೆ....

-ಜ್ಯೋತಿ ಗುರುಪ್ರಸಾದ್, ಕಾರ್ಕಳ


ಆ ಸಭೆಯಲ್ಲಿ ಕೇವಲ ತಪ್ವಕರು ಮಾತ್ರವಲ್ಲ ಇತರ ಜಾತಿಗಳವರೂ ಮಾತನಾಡಿ ಸಂತ್ರಸ್ತರ ಪರವಾಗಿ ಬೆಂಬಲ ಸೂಚಿಸಿದ್ದು ವಿಶೇಷವಾಗಿತ್ತು. ಕಲ್ಲಡ್ಕದಿಂದ ಬಂದಿದ್ದ ಇಬ್ಬರು ಕಿಡಿಗೇಡಿಗಳು ಸಭೆಯಲ್ಲಿ ಉದ್ದೇಶಪೂರ್ವಕ ಗಲಾಟೆ ಮಾಡಲು ಪ್ರಯತ್ನಿಸಿದಾಗ ಬ್ರಾಹ್ಮಣೇತರ ಜಾತಿಯ ಯುವಕರೇ ಮುಂದೆ ಹೋಗಿ ಆ ಕಿಡಿಗೇಡಿಗಳಿಗೆ ಅವರದೇ ಭಾಷೆಯಲ್ಲಿ ಬುದ್ಧಿವಾದ ಹೇಳಿ ಹೊರಗೆ ಕಳುಹಿಸಿದ್ದು ಗಮನಿಸಿದಾಗ ಪ್ರೇಮಲತಾ ಪರ ಹೋರಾಟ ಈಗ ಕೇವಲ ತಪ್ವಕರ ಒಂದು ಸಣ್ಣ ಗುಂಪಿಗೆ ಸೀಮಿತವಾಗಿಲ್ಲ ಅದಕ್ಕೆ ಇತರ ಪ್ರಬಲ ಜಾತಿಯವರೂ ಬೆಂಬಲಿಸುತ್ತಿದ್ದಾರೆ ಎಂಬುದು ಸ್ಪಷ್ಟವಾಯಿತು.

ಭಕ್ತರು ವಿಮರ್ಶಿಸದೇ ವಿವೇಚಿಸದೇ ಪರೀಕ್ಷಿಸದೇ ಮಠಾಧೀಶರನ್ನು ಕುರುಡಾಗಿ ಬೆಂಬಲಿಸುವುದು ಕಡಿಮೆಯಾಗುತ್ತಿರುವುದು ಸಮಾಧಾನದ ಸಂಗತಿ. ರಾಜ್ಯ ಮಟ್ಟದ ಕೆಲವು ಪತ್ರಿಕೆಗಳು ತೋರುತ್ತಿರುವ ಮಹಿಳೆಯರ ವಿರುದ್ಧದ ಪೂರ್ವಾಗ್ರಹ, ಪಕ್ಷಪಾತ ಹಾಗೂ ಒಬ್ಬ ಅಸಹಾಯಕ ಮಹಿಳೆ ಮತ್ತು ಅವಳ ಇಬ್ಬರು ಯುವ ಹೆಣ್ಣು ಮಕ್ಕಳ ಶೀಲದ ಬಗ್ಗೆ ಕೊಳಕು ಪ್ರಚಾರ ಮಾಡಿ ಮಾಡುತ್ತಿರುವ ವಿಪರೀತ ಮಾನಸಿಕ ಹಿಂಸೆ ಸಹ ಸಭೆಯಲ್ಲಿ ಚರ್ಚೆಯಾಗಿ ಕನ್ನಡ ಮೀಡಿಯಾದ ಕೆಲವು ಸಮಯಸಾಧಕರು ಪತ್ರಿಕೋದ್ಯಮಕ್ಕೆ ಅತಿ ಕೆಟ್ಟ ಹೆಸರು ತಂದ ಬಗ್ಗೆ ಸಭೆ ಛೀಮಾರಿ ಹಾಕಿತು (ಆ ಪತ್ರಿಕೆಯ ಸಂಪಾದಕನೇ ಅತ್ಯಾಚಾರದಲ್ಲಿ ಸ್ವತಃ ಭಾಗಿಯಾಗಿದ್ದನೋ ಅಥವಾ ಮಠಾಧೀಶರಿಗೆ ತಲೆಹಿಡುಕನಾಗಿದ್ದನೋ ಎಂಬ ಬಗ್ಗೆ ಜನರಿಗೆ ಸಂಶಯ ಉಂಟಾಗಿದೆ).

ಅತ್ಯಂತ ಹೃದಯ ಹಿಂಡುವ ವಿಷಯವೆಂದರೆ ಮಠಾಧೀಶರ ಬೆಂಬಲಿಗರ ಭಯೋತ್ಪಾದನೆಯಿಂದಾಗಿ ಆತ್ಮಹತ್ಯೆ ಮಾಡಿಕೊಂಡ ಪುತ್ತೂರಿನ ಶ್ಯಾಮ ಶಾಸ್ತ್ರಿಗಳ ವಿಧವೆಗೆ ಈಗಲೂ ಕೆಲವು ಮನುಷ್ಯತ್ವವೇ ಇಲ್ಲದ ಮೃಗಗಳು ಸ್ವಲ್ಪವೂ ಕನಿಕರ ತೋರದೇ ಕೊಡುತ್ತಿರುವ ಅಪಾರ ಮಾನಸಿಕ ಹಾಗೂ ಆರ್ಥಿಕ ಕಿರುಕುಳ. ಸಾಮಾನ್ಯ ಮನುಷ್ಯನಾಗಿ ಜನಿಸಿ ದೇವರ ಪಟ್ಟಕ್ಕೆ ಏರಿದ ಶ್ರೀ ರಾಮಚಂದ್ರನ ಆದರ್ಶ ಇಂತಹವರು ಎಂದಾದರೂ ಅರ್ಥಮಾಡಿಕೊಳ್ಳಲು ಸಾಧ್ಯವೇ?

-ರಾಮಕೃಷ್ಣ ಎ ಶೆಟ್ಟಿ, ಮಂಗಳೂರು

18.2.15 ರ ಸಂಚಿಕೆಯಲ್ಲಿನ ಸಂಪಾದಕೀಯ ತುಂಬಾ ಮೆಚ್ಚುಗೆಯಾಯಿತು. ಅದು ಎಂತಹವರನ್ನೂ ಬಡಿದೆಬ್ಬಿಸುತ್ತದೆ.



ಮಹಿಳೆಯರನ್ನು ಕೀಳಾಗಿ ಭಾವಿಸುವ ಎಸ್.ಎಲ್. ಭೈರಪ್ಪನವರ ಮನೋಧರ್ಮವನ್ನು ಖಂಡಿಸಿರುವುದನ್ನು ಪ್ರಗತಿಪರರೆಲ್ಲಾ ಸಂಪೂರ್ಣವಾಗಿ ಒಪ್ಪುವಂತದ್ದು.

ಮೈಸೂರು ಪ್ರಾಂತದ ದಿವಾನರಾಗಿ ವಿಶ್ವೇಶ್ವರಯ್ಯನವರು ಕೆಆರ್‌ಎಸ್ ನಿರ್ಮಿಸಿರುವುದಕ್ಕಿಂತ, ಸಿದ್ದು ನ್ಯಾಮಗೌಡರು ಜನಸಾಮಾನ್ಯರಾಗಿ ಜಮಖಂಡಿ ಬ್ಯಾರೇಜ್ ನಿರ್ಮಿಸಿರುವುದು ಹೆಚ್ಚು ಮೆಚ್ಚುವಂತದ್ದು.

ತಾವು ಹಾಗು ಡಾ.ವಾಸು ಅವರು ಹೇಳಿರುವಂತೆ ದೇವನೂರ ಮಹಾದೇವರು ಮಾತೃಭಾಷಾ ಮಾಧ್ಯಮದ ಬಗ್ಗೆ ಹೊಂದಿರುವ ಅಪಾರವಾದ ಕಾಳಜಿಗೆ ಸಾಹಿತ್ಯ ವಲಯದವರು ನಿರೀಕ್ಷಿಸಿದ ಮಟ್ಟದಲ್ಲಿ ಸ್ಪಂದಿಸಿಲ್ಲ. ಇದು ನಿಜಕ್ಕೂ ದುರಂತವೇ ಸರಿ. ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದೇವನೂರರನ್ನೇ ಶಿಕ್ಷಣಮಂತ್ರಿಯನ್ನಾಗಿ ಏಕೆ ಮಾಡಬಾರದು? ಯಾರೂ ಮಾಡಲಾಗದ ಈ ಕೆಲಸವನ್ನು ಮಾಡಲು ದೇವನೂರರಿಗೆ ಅವಕಾಶವನ್ನು ಏಕೆ ಕೊಡಬಾರದು ಎಂಬುದು ನನ್ನ ಅಂತರಾಳದ ಅನಿಸಿಕೆ.

ದೊಡ್ಡಿಪಾಳ್ಯ ನರಸಿಂಹಮೂರ್ತಿಯವರ 'ಆಮ್ ಆದ್ಮಿ ಬೀಸಿದ ಪಾಶ' ತುಂಬ ಸಾಂದರ್ಭಿಕ ಹಾಗು ಭ್ರಷ್ಟಾಚಾರದಿಂದ ಬೆಂದವರಿಗೆ ಸಾಂತ್ವನ ನೀಡುವಂತದ್ದು. ಮುಂಬರುವ ಬಿ.ಬಿ.ಎಂ.ಪಿ ಚುನಾವಣೆಗೆ ಆಮ್ ಆದ್ಮಿಯವರು ಸ್ಪರ್ಧಿಸಲಿ ಎಂದು ಹೃದಯದಿಂದ ಹಾರೈಸುತ್ತೇನೆ.

-ವೀರಬ್ಯಾತಯ್ಯ, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಸರಳವಾಗಿ ಮತ್ತು ಚಿಕ್ಕದಾಗಿ SMS ಕಳುಹಿಸಬಹುದು.

ಹೆಣ್ಣು ಮಾನಸಿಕವಾಗಿ ಗಂಡಿಗಿಂತಲೂ ಬಲಶಾಲಿ: ಸತ್ಯಜಿತ್ ರೇ



'ಪಥೇರ್ ಪಾಂಚಾಲಿ', 'ಅಪರಾಜಿತೋ', 'ಅಪುರ್ ಸಂಸಾರ್', 'ಕಾಂಚನ್ ಜಂಘ', 'ಮಹಾನಗರ್', 'ಚಾರುಲತಾ' ತರಹದ ಅನೇಕ ಚಿತ್ರಗಳನ್ನು ನಿರ್ದೇಶಿಸಿದ್ದಲ್ಲದೆ ಭಾರತ ಚಿತ್ರರಂಗದ ಗೌರವವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದ ಪ್ರತಿಭಾವಂತ ಸಿನಿಮಾ ನಿರ್ದೇಶಕ, ಬರಹಗಾರ ಸತ್ಯಜಿತ್ ರೇ ಹಂಚಿಕೊಂಡಿರುವ ಮಾತುಗಳನ್ನು ಇಲ್ಲಿ ಕನ್ನಡಕ್ಕೆ ತರಲಾಗಿದೆ...

ಪ್ರಶ್ನೆ: ಬಂಗಾಳಿ ಭಾಷೆಯಲ್ಲಿ ಚಿತ್ರಗಳು ತಯಾರಾಗಲು ಆರಂಭವಾದದ್ದು ಯಾವಾಗ?

ಸತ್ಯಜಿತ್ ರೇ: ಮೂಕಿಚಿತ್ರಗಳಿದ್ದ ಕಾಲದಿಂದಲೂ ಬಂಗಾಳಿಯಲ್ಲಿ ಸಿನಿಮಾಗಳು ತಯಾರಾಗುತ್ತಿವೆ. ನನಗೆ ಗೊತ್ತಿರುವಂತೆ ಭಾರತದ ಮೊಟ್ಟಮೊದಲ ಸಿನಿಮಾ ತಯಾರಾದದ್ದು 1913ರಲ್ಲಿ, ಬಾಂಬೆಯಲ್ಲಿ, ಹಾಲಿವುಡ್ ಸಿನಿಮಾಗಳು ನಿರ್ಮಾಣವಾಗಲು ಶುರುವಾದ ಕಾಲಕ್ಕೆ ಹೋಲಿಸಿದರೆ ಇದೇನೂ ತೀರಾ ತಡವೇನಲ್ಲ. ಆ ಕಾಲಕ್ಕೆ ಬಂಗಾಳಿಯಲ್ಲಿ ಕೆಲವೇ ಕೆಲವು ನಿರ್ದೇಶಕರು ಮತ್ತು ನಿರ್ಮಾಪಕರಿದ್ದರು. ಬಾಂಬೆಯಿಂದ ಬಂದ ಪಾರಸಿಗರು ಕೊಲ್ಕತ್ತದಲ್ಲಿ ಬಂಗಾಳಿ ಚಿತ್ರರಂಗ ಆರಂಭಿಸಿದರು. ಅದು ಚೈತನ್ಯ ಪಡೆದದ್ದು ಮಾತ್ರ ಬಂಗಾಳಿಗರಿಂದ. ಮೊದಮೊದಲಿಗೆ ಒಂದಿಷ್ಟು ಮೂಕಿಚಿತ್ರಗಳು ಬಂಗಾಳಿಯಲ್ಲಿ ಬಂದವು. ಸೌಂಡ್ ಚಿತ್ರಗಳು ಆಮೇಲಷ್ಟೇ ಬಂದದ್ದು. ಬಂಗಾಳಿ ಚಿತ್ರಗಳಿಗೆ ತನ್ನದೇ ಆದ ಸಂಸ್ಕೃತಿ, ಪರಂಪರೆ ಇದೆ. ಇದಕ್ಕೆ ಕಾರಣ ಬಂಗಾಳಿ ಭಾಷೆಯಲ್ಲಿ ಹೇರಳವಾಗಿ ಲಭ್ಯವಿರುವ ಕಥೆಗಳು ಮತ್ತು ಕಾದಂಬರಿಗಳು. ರವೀಂದ್ರನಾಥ್ ಟ್ಯಾಗೋರ್ ಸುಮಾರು ಒಂದೂವರೆ ಸಾವಿರದಷ್ಟು ಕತೆಗಳನ್ನು ಬರೆದಿದ್ದಾರೆ. ಆ ಪೈಕಿ ಮುನ್ನೂರರಿಂದ ನಾನೂರು ಕತೆಗಳು ಮಾಸ್ಟರ್ ಪೀಸ್‌ಗಳು ಹಾಗೂ ಸಿನಿಮಾ ಮಾಡಬಹುದಾದಂಥವು. ನಾನೇ ಅರ್ಧ ಡಜನ್ನಿಗೂ ಹೆಚ್ಚು ಟ್ಯಾಗೋರ್ ಕತೆಗಳನ್ನು ಸಿನಿಮಾ ಮಾಡಿದ್ದೇನೆ.

ಪ್ರಶ್ನೆ: ಬಂಗಾಳಿ ಚಿತ್ರಗಳಿಗೂ ಹಿಂದಿ ಚಿತ್ರಗಳಿಗೂ ವ್ಯತ್ಯಾಸವೇನು?

ಸತ್ಯಜಿತ್ ರೇ: ಬಾಂಬೆ ಇಂಡಸ್ಟ್ರಿ ಹಣದ ಮೇಲೆ ನಿಂತಿದೆ. ಅಲ್ಲಿ ಮೊದಲೆಲ್ಲಾ ಸರಿಯಾದ ರೀತಿಯಲ್ಲಿ ಸಿನಿಮಾ ನಿರ್ಮಾಣವಾಗುತ್ತಿತ್ತು. ಈಗ ಕಾಲ ಬದಲಾಗಿದೆ. ಅಲ್ಲಿರುವ ನಿರ್ದೇಶಕರಿಗೆ ತಮ್ಮದೇ ಆದ ಸ್ಟೈಲ್ ಇಲ್ಲ. ಎಲ್ಲರೂ ಟ್ರೆಂಡ್ ಹಿಂದೆ ಬಿದ್ದಿದ್ದಾರೆ. ಹಣ ಉತ್ಪಾದಿಸಬಹುದಾದ ಚಿತ್ರಗಳನ್ನು ಮಾಡುವತ್ತ ಅವರ ಗಮನವಿದೆ.

ಪ್ರಶ್ನೆ: ಸಿನಿಮಾ ನಿರ್ಮಾಪಕರಿಗೆ ನಿಮ್ಮ ಬಗ್ಗೆ ಅಸಮಾಧಾನವಂತೆ, ಯಾಕೆ?

ಸತ್ಯಜಿತ್ ರೇ: ನನ್ನ ಎಷ್ಟೋ ಚಿತ್ರಗಳು ಹಾಕಿದ ಬಂಡವಾಳವನ್ನು ವಾಪಸ್ ತಂದಿಲ್ಲ ಅದಕ್ಕೆ ಇರಬಹುದು. ನನಗೆ ಮೊದಲು ಯಾವ ನಿರ್ಮಾಪಕರೂ ಸಿಕ್ಕಲಿಲ್ಲ, ಕಡೆಗೆ ನಾನೇ ಕೈಯಿಂದ ಸ್ವಲ್ಪ ಹಣ ಹಾಕಿ ಒಂದಿಷ್ಟು ಶೂಟ್ ಮಾಡಿದೆ. ಹಾಗೆ ಶೂಟ್ ಮಾಡಿರುವ ಫೂಟೇಜಸ್ ತೋರಿಸಿ ನಿರ್ಮಾಪಕರನ್ನು ಹಿಡಿಯಬಹುದು ಅನ್ನುವುದು ನನ್ನ ಪ್ಲಾನ್ ಆಗಿತ್ತು, ಆದರೆ ಫೂಟೇಜಸ್ ನೋಡಿದ ಯಾವೊಬ್ಬ ನಿರ್ಮಾಪಕನೂ ಹಣ ಹಾಕಲು ಮುಂದೆ ಬರಲಿಲ್ಲ, ಅವರ್‍ಯಾರಿಗೂ ನಾನು ತೆಗೆದದ್ದು ಇಷ್ಟವಾಗಲಿಲ್ಲ, ನನ್ನ ಅಭಿರುಚಿ ಅವರಿಗೆ ಹಿಡಿಸಿರಲಿಲ್ಲ, ಸುಮಾರು ನಲವತ್ತು ನಿಮಿಷದಷ್ಟು ಇದ್ದಂತಹ ಆ ಫೂಟೇಜಸ್ ಅನ್ನು ಒಂದು ಡಜನ್ನಿಗೂ ಹೆಚ್ಚು ನಿರ್ಮಾಪಕರಿಗೆ ತೋರಿಸಿದೆ. ಯಾರೂ ಇಷ್ಟಪಡಲಿಲ್ಲ, ಕಡೆಗೆ ಇನ್ನಷ್ಟು ಹಣ ಹೊಂದಿಸಿ ಇನ್ನಷ್ಟು ಶೂಟ್ ಮಾಡಿದೆ. ಎರಡು ವರ್ಷಗಳ ನಂತರ ಪಶ್ಚಿಮ ಬಂಗಾಳ ಸರ್ಕಾರ ಆರ್ಥಿಕ ನೆರವು ನೀಡಿ ಸಿನಿಮಾ ಕಂಪ್ಲೀಟ್ ಆಗಲು ಸಹಕರಿಸಿತು.

ಪ್ರಶ್ನೆ: ನಿಮ್ಮ ಚಿತ್ರಗಳಲ್ಲಿನ ಸ್ಕ್ರಿಪ್ಟ್ ವರ್ಕ್ ಚೆನ್ನಾಗಿರುತ್ತೆ... ಇದರ ಹಿಂದಿನ ಗುಟ್ಟೇನು?

ಸತ್ಯಜಿತ್ ರೇ: ಸ್ಕ್ರಿಪ್ಟ್ ಪ್ರತಿ ಬಾರಿ ಇಂಪ್ರೂವೈಸ್ ಆಗುತ್ತಲೇ ಇರುತ್ತದೆ. ಶೂಟಿಂಗ್ ಸ್ಪಾಟ್‌ನಲ್ಲಿ ಒಂದಿಷ್ಟು ಹೊಸ ಹೊಸ ಐಡಿಯಾಗಳು ಹೊಳೆಯುವುದುಂಟು. ಆದರೆ ಸ್ಪಾಟ್‌ನಲ್ಲಿ ಹೊಳೆಯುವ ಎಲ್ಲಾ ಐಡಿಯಾಗಳನ್ನು ಕಾರ್ಯರೂಪಕ್ಕೆ ತರಲು ಎಷ್ಟೋ ಸಲ ಹಣಕಾಸು ಅಡ್ಡಿಯಾಗುತ್ತದೆ.

ಪ್ರಶ್ನೆ: ನಿಮ್ಮ ಚಿತ್ರ ಹೀಗೆ ಬರಬೇಕು, ಆ ಚಿತ್ರ ಸಾಗುವ ರಿದಂ ಹೀಗೆ ಇರಬೇಕು ಅನ್ನುವುದರ ಬಗ್ಗೆ ನಿಮಗೆ ಸ್ಪಷ್ಟತೆ ಇರುವುದು ಸುಳ್ಳಲ್ಲ... ಹೌದು ತಾನೇ?

ಸತ್ಯಜಿತ್ ರೇ: ಅದೆಲ್ಲವೂ ಎಡಿಟಿಂಗ್ ರೂಂನಲ್ಲಿ ಗೊತ್ತಾಗುತ್ತದೆ!

ಪ್ರಶ್ನೆ: ಎಡಿಟಿಂಗ್ ಸಂದರ್ಭದಲ್ಲಿ ನೀವು ಅಲ್ಲೇ ಇರುತ್ತೀರ?


ಸತ್ಯಜಿತ್ ರೇ: ಖಂಡಿತವಾಗಿ ಇರುತ್ತೇನೆ. ನನ್ನ ಉಪಸ್ಥಿತಿ ಇಲ್ಲದೆ ನನ್ನ ಚಿತ್ರದ ಎಡಿಟಿಂಗ್ ಕೆಲಸ ಕೂಡದು. ಪರದೆ ಮೇಲೆ ತನ್ನ ಚಿತ್ರ ಹೇಗೆ ಮೂಡಿಬರಬೇಕು ಎಂಬ ಕಲ್ಪನೆ ನಿರ್ದೇಶಕನೊಬ್ಬನಿಗೆ ಮಾತ್ರ ಗೊತ್ತಿರುತ್ತದೆ.

ಪ್ರಶ್ನೆ: ನೀವು ಅಂದಂದು ಶೂಟ್ ಮಾಡಿದ್ದನ್ನು ಅಂದಂದೇ ಎಡಿಟ್ ಮಾಡಿದ್ದುಂಟಾ?

ಸತ್ಯಜಿತ್ ರೇ: ನೋ... ಇಟ್ಸ್ ಟೂ ಮಚ್! ಹಾಗೆ ಮಾಡಿದರೆ ಗುಣಮಟ್ಟ ಸರಿಯಾಗಿ ಬರುವುದಿಲ್ಲ.

ಪ್ರಶ್ನೆ: ಶೂಟಿಂಗ್ ಇರುವ ದಿನಗಳಲ್ಲಿ ರಜೆಯ ಅಗತ್ಯದ ಬಗ್ಗೆ ಹೇಳ್ತೀರಾ?

ಸತ್ಯಜಿತ್ ರೇ: ರಜೆಯ ಅಗತ್ಯವಿರುವುದಿಲ್ಲ. ಭಾನುವಾರವೂ ಸೇರಿದಂತೆ ವಾರದ ಅಷ್ಟೂ ದಿನಗಳ ಕಾಲ ಶೂಟಿಂಗ್‌ನಲ್ಲಿ ಬ್ಯುಸಿ ಇರಲು ನನಗಿಷ್ಟ. ಎಲ್ಲವೂ



ಹವಾಮಾನದ ಮೇಲೆ ನಿಂತಿರುತ್ತದೆಯಷ್ಟೇ. ಒಳ್ಳೆಯ ವಾತಾವರಣವಿದ್ದ ಪಕ್ಷದಲ್ಲಿ ಯಾವತ್ತು ಬೇಕಾದರೂ ಶೂಟಿಂಗ್ ಮಾಡಬಹುದು. ಬಾಂಬೆಯಲ್ಲಿ ಈ ರೀತಿಯ ಬದ್ಧತೆ ಇರುವುದಿಲ್ಲ. ಅಲ್ಲಿ ಪ್ರಸಿದ್ಧ ನಟ ಅಥವಾ ನಟಿ ಏಕಕಾಲಕ್ಕೆ ಹತ್ತಾರು ಚಿತ್ರಗಳಲ್ಲಿ ನಟಿಸುತ್ತಿರುತ್ತಾರೆ. ಬೆಳಗ್ಗೆ ಬಾಂಬೆಯಲ್ಲಿ ಶೂಟಿಂಗ್, ಸಂಜೆ ಮದ್ರಾಸ್‌ನಲ್ಲಿ ಶೂಟಿಂಗ್! ಅಲ್ಲಿಯ ನಿರ್ದೇಶಕರೂ ಹಾಗೇನೆ. ಏಕಕಾಲಕ್ಕೆ ಮೂರ್ನಾಲ್ಕು ಚಿತ್ರಗಳನ್ನು ನಿರ್ದೇಶನ ಮಾಡುತ್ತಾರೆ. ಬೆಳಗ್ಗೆ ಬಾಂಬೆಯಲ್ಲಿ ಶೂಟಿಂಗ್ ಮಾಡಿ, ಸಂಜೆ ಮದ್ರಾಸಿಗೆ ಹೋಗಿ ಶೂಟಿಂಗ್ ಮಾಡಿ ಮುಗಿಸಿ ಬರುತ್ತಾರೆ. ಒಂದು ವೇಳೆ ಹೋಗಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಬೇಕಾದರೆ ಫೋನಿನಲ್ಲೇ ಡೈರೆಕ್ಷನ್ ಮಾಡಿಬಿಡುತ್ತಾರೆ... ಹ್ಹಹ್ಹಹ್ಹ!

ಪ್ರಶ್ನೆ: ನೀವು ಒಂದು ಸಿನಿಮಾದಲ್ಲಿ ತೊಡಗಿಕೊಂಡಿದ್ದ ಸಂದರ್ಭದಲ್ಲಿ ಇನ್ನೊಂದು ಚಿತ್ರದಲ್ಲೂ ತೊಡಗಿದ್ದು ಉಂಟಾ?

ಸತ್ಯಜಿತ್ ರೇ: ಅಂತ ಕೆಲಸ ಒಂದೇ ಒಂದು ಸಲ ಮಾಡಿದ್ದೇನೆ. 'ಪಥೇರ್ ಪಾಂಚಾಲಿ'ಯ ನಂತರ ನಾನು 'ಅಪರಾಜಿತೋ' ಮಾಡಿದೆ. ಹಾಗೆ ನೋಡಿದರೆ 'ಪಥೇರ್ ಪಾಂಚಾಲಿ'ಯ ನಂತರ ನಾನು ಅದೇ ಚಿತ್ರದ ಎರಡನೇ ಭಾಗವನ್ನು ಮಾಡಬೇಕು ಅಂತ ನಿರ್ಧರಿಸಿದ್ದೆ, ಅದೇ ರೀತಿ ಒಂದೇ ಬಗೆಯ ಚಿತ್ರವನ್ನು ಒಂದರ ಹಿಂದೆ ಮಾಡುವುದು ಬೇಡ ಎಂದೂ ಅಂದುಕೊಂಡಿದ್ದೆ, ಆ ಕಾರಣದಿಂದ ಒಂದು ಸಂಗೀತಮಯ ಸಿನಿಮಾ ಮಾಡಿದೆ. 'ಅಪರಾಜಿತೋ' ನಂತರ ನಾನು ಮಾಡಿದ್ದು 'ಪರಶ್ ಪಥರ್' ಚಿತ್ರವನ್ನು, ಆ ಚಿತ್ರದಲ್ಲಿ ಕಾಮಿಡಿಯೂ ಇತ್ತು, ಆ ಚಿತ್ರವನ್ನು ಮಾಡುವಾಗ ನಾನೂ ತುಂಬಾ ಎಂಜಾಯ್ ಮಾಡಿದೆ. ಆ ಚಿತ್ರ ಅಷ್ಟೇನೂ ಗ್ರೇಟ್ ಸಕ್ಸಸ್ ಅನ್ನಿಸಿಕೊಳ್ಳದಿದ್ದರೂ ಹಾಕಿದ್ದ ದುಡ್ಡಿಗೇನೂ ಮೋಸವಾಗಲಿಲ್ಲ.

ಪ್ರಶ್ನೆ: ನಿಮ್ಮ ತಂಡದ ಬಗ್ಗೆ ಹೇಳಿ...

ಸತ್ಯಜಿತ್ ರೇ: ನನ್ನ ಕ್ಯಾಮೆರಾಮ್ಯಾನ್ ಮತ್ತು ನನ್ನ ಎಡಿಟರ್ ನನ್ನ ಚಿತ್ರಗಳ ಜೊತೆಗೆ ಬೇರೆಯವರ ಚಿತ್ರಗಳಲ್ಲೂ ಕೆಲಸ ಮಾಡುತ್ತಾರೆ. ಇದಕ್ಕೆ ಕಾರಣ ನಾನು ಒಂದೂವರೆ ವರ್ಷಕ್ಕೆ ಒಂದು ಸಿನಿಮಾ ಮಾಡುವುದು! ಆದರೆ ನನ್ನ ಅಸಿಸ್ಟೆಂಟ್‌ಗಳು ನನ್ನ ಚಿತ್ರ ಬಿಟ್ಟು ಬೇರೊಬ್ಬ ನಿರ್ದೇಶಕರ ಚಿತ್ರಗಳಿಗೆ ಕೆಲಸ ಮಾಡಿಲ್ಲ.

ಪ್ರಶ್ನೆ: ನಿಮ್ಮ ಚಿತ್ರದಲ್ಲಿನ ಲೈಟಿಂಗ್ ಬಗ್ಗೆ ಹೇಳಿ...

ಸತ್ಯಜಿತ್ ರೇ: ನನಗೂ ನನ್ನ ಕ್ಯಾಮೆರಾಮ್ಯಾನ್‌ಗೂ ಹೊಂದಾಣಿಕೆ ಇದೆ. ಹಗಲಿನಲ್ಲಿ ಚಿತ್ರೀಕರಣ ಮಾಡಬೇಕಾದ ಸಂದರ್ಭದಲ್ಲಿ ನಾವು ಡೈರೆಕ್ಟ್ ಲೈಟ್ ಬಳಸುವ ಬದಲು ಬೌನ್ಸಿಂಗ್ ಲೈಟ್‌ಗೆ ಆದ್ಯತೆ ನೀಡುತ್ತೇವೆ. ಕಲರ್ ಬಂದ ಮೇಲೂ ಅಷ್ಟೇ, ಇಂಟೀರಿಯರ್ ಸೀನ್ ಶೂಟ್ ಮಾಡಬೇಕಾಗಿ ಬಂದಾಗ ಒಂದಿಷ್ಟು ಕನ್ನಡಿಗಳನ್ನು ಬಳಸಿ ಸೂರ್ಯನ ಬೆಳಕು ಅದರ ಮೇಲೆ ಬಿದ್ದು ಅದರ ಪ್ರತಿಬಿಂಬ ಕಿಟಕಿಗಳ ಮೂಲಕ ಕಲಾವಿದರ ಮೇಲೆ ಬೀಳುವಂತೆ ಮಾಡಿದ್ದೆವು. ಇದು ತುಂಬಾ ತೃಪ್ತಿದಾಯಕ ಕೆಲಸ.

ಪ್ರಶ್ನೆ: ನೀವೊಬ್ಬ ಶ್ರೀಮಂತ ಆಗಬೇಕೆಂದು ಯಾವಾಗಲಾದರು ಬಯಸಿದ್ದಿರಾ?

ಸತ್ಯಜಿತ್ ರೇ: ನಾನು ಯಾವಾಗಲೂ ಶ್ರೀಮಂತನೇ ಹ್ಹಹ್ಹಹ್ಹ... ನಾನು ಒಂದಿಷ್ಟು ಹಣ ಗಳಿಸಿದ್ದರೆ ಅದು ನನ್ನ ಪುಸ್ತಕಗಳಿಂದ ಮಾತ್ರ, ಸಿನಿಮಾದಿಂದಲಂತೂ ಖಂಡಿತ ಅಲ್ಲ, ನಾನು ಬಾಂಬೆಯ ನಟರಷ್ಟು ಶ್ರೀಮಂತನಲ್ಲದಿದ್ದರೂ ಚೆಂದದ ಬದುಕಿಗೆ ಬೇಕಾಗುವಷ್ಟು ಹಣ ನನ್ನ ಹತ್ತಿರವಿದೆ. ನನಗೆ ಬೇಕಾದ ಪುಸ್ತಕಗಳನ್ನು, ಸಂಗೀತವನ್ನು ಕೊಂಡುಕೊಳ್ಳುವಷ್ಟು ಹಣವಂತೂ ನನ್ನಲ್ಲಿದೆ.

ಪ್ರಶ್ನೆ: ನಿಮ್ಮ ಒಟ್ಟು ಚಿತ್ರಜೀವನವನ್ನು ಗಮನಿಸಿದಾಗ ಹೆಣ್ಣು ಮಾನಸಿಕವಾಗಿ ಗಂಡಿಗಿಂತಲೂ ಶಕ್ತಿಶಾಲಿ ಎಂಬುದನ್ನು ನೀವು ಪ್ರತಿಪಾದಿಸಿದ್ದೀರಿ ಅನ್ನುವ ಅಂಶವನ್ನು ಗಮನಿಸಬಹುದು. ನನ್ನ ಊಹೆ ನಿಜವೇ?

ಸತ್ಯಜಿತ್ ರೇ: ನನ್ನ ಪ್ರಕಾರ ಹೆಣ್ಣು ಮಾನಸಿಕವಾಗಿ ಗಂಡಿಗಿಂತಲೂ ಯಾವತ್ತಿಗೂ ಬಲಶಾಲಿ. ಹೆಣ್ಣು ದೈಹಿಕವಾಗಿ ಗಂಡಿಗಿಂತ ಬಲಹೀನಳಾದರೂ ಆಕೆ ಮಾನಸಿಕವಾಗಿ ವೆರಿ ಸ್ಟ್ರಾಂಗ್. ನಾನು ಹೇಳುತ್ತಿರುವುದು ಕೇವಲ ಬಂಗಾಳದ ಸಮಾಜದ ಬಗ್ಗೆ ಅಲ್ಲ, ಒಟ್ಟಾರೆಯಾಗಿ ಹೆಣ್ಣಿನ ಬಗ್ಗೆ.

ಪ್ರಶ್ನೆ: ಹಾಗೆಯೇ ನಿಮ್ಮ ಚಿತ್ರಗಳಲ್ಲಿ ಭಾವನಾತ್ಮಕ ಸಂಬಂಧಗಳ ಬಗ್ಗೆ ಹೆಚ್ಚು ಒತ್ತಿ ಹೇಳುತ್ತೀರಿ, ಅಲ್ಲವೇ?

ಸತ್ಯಜಿತ್ ರೇ: ಖಂಡಿತವಾಗಿ... ನನಗೆ ಗೊತ್ತಿರುವಂತೆ ನಾನು ಮನುಷ್ಯನ ಸೈಕಾಲಜಿಯನ್ನು ಬಲ್ಲೆ. ಒಂದು ಸಂಬಂಧವನ್ನು ಪರದೆಯ ಮೇಲೆ ಸಮರ್ಥವಾಗಿ ತೆರೆದಿಡುವುದು ಕಷ್ಟದ ಕೆಲಸ. ಯಾಕೆಂದರೆ ಸಿನಿಮಾ ಅನ್ನೋದೇ ಕಷ್ಟದ ಮಾಧ್ಯಮ. ಅದಕ್ಕಾಗಿ ಸೂಕ್ಷ್ಮ ಅವಲೋಕನ, ಲೆಕ್ಕಾಚಾರ ಮತ್ತು ಅಂಡರ್ ಸ್ಟ್ಯಾಂಡಿಂಗ್ ಮುಖ್ಯವಾಗುತ್ತದೆ. ಇಷ್ಟಕ್ಕೂ ಭಾವನೆಗಳಿಲ್ಲದ ಸಿನಿಮಾ ಉಂಟೆ?

● ಹೃದಯಶಿವ

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 25-02-2015 RNI No.



ಲವ್ ಯೂ ಆಲಿಯ ಶೂಟಿಂಗ್ ಮುಗೀತು

'ತುಂಟಾಟ' ತರಹದ ಯೂಥ್ ಫುಲ್ ಚಿತ್ರವನ್ನು, 'ಮೊನಾಲಿಸ'ದಂತಹ ಅಪ್ಪಟ ಕಮರ್ಷಿಯಲ್ ಚಿತ್ರವನ್ನು, 'ಐಶ್ವರ್ಯ'ದಂತಹ ಸ್ವಮೇಕ್-ರಿಮೇಕ್ ಚಿತ್ರವನ್ನೂ ನೀಡಿದ್ದ ಸ್ಟೈಲಿಶ್ ಡೈರೆಕ್ಟರ್ ಇಂದ್ರಜಿತ್ ಲಂಕೇಶ್ ಈ ಬಾರಿ ರವಿಚಂದ್ರನ್ ಹಾಕಿಕೊಂಡು 'ಲವ್ ಯೂ ಆಲಿಯ' ಅನ್ನುವ ಒಂದು ಚಿತ್ರವನ್ನು ಸದ್ದಿಲ್ಲದೇ ಮುಗಿಸಿದ್ದಾರೆ. ಚಿತ್ರಕ್ಕಾಗಿ ಒಟ್ಟು ಅರವತ್ತು ದಿನಗಳ ಚಿತ್ರೀಕರಣ ನಡೆಸಿದ್ದು ಆ ಪೈಕಿ ಹದಿನಾಲ್ಕು ದಿನಗಳ ಚಿತ್ರೀಕರಣವನ್ನು ಥಾಯ್ಲೆಂಡ್‌ನಲ್ಲಿ ಮಾಡಿದ್ದಾರೆ. ಅಲ್ಲಿ ಚಿತ್ರೀಕರಿಸಿದ ಸೂರ್ಯೋದಯ ಮತ್ತು ಸೂರ್ಯಾಸ್ತದ ಸೀನುಗಳ ಬಗ್ಗೆ ಇಂದ್ರಜಿತ್ ಅವರಿಗೆ ಹೆಮ್ಮೆ ಇದೆ. ಚಿತ್ರದ ಒಟ್ಟು ಚಿತ್ರೀಕರಣ ಮುಗಿದಿದ್ದು ಮುಂದಿನ ಎರಡು ಮೂರು ವಾರಗಳಲ್ಲಿ ಆಡಿಯೋ ಬಿಡುಗಡೆ ಮಾಡುವ ಯೋಜನೆ ಹೊಂದಿದ್ದಾರೆ. ಚಿತ್ರದಲ್ಲಿ ಸಾಕಷ್ಟು ಮನರಂಜನೆ ಇದ್ದು ಇದೂ ಕೂಡ ಟಿಪಿಕಲ್ ಇಂದ್ರಜಿತ್ ಲಂಕೇಶ್ ಶೈಲಿಯ ಸಿನಿಮಾವಾಗಲಿದೆಯಂತೆ.

ರವಿಚಂದ್ರನ್ ಅವರಿಗೆ ಜೋಡಿಯಾಗಿ ಭೂಮಿಕಾ, ಚಂದನ್‌ಗೆ ಜೋಡಿಯಾಗಿ ಸಂಗೀತಾ, ಧ್ಯಾನ್‌ಗೆ ಜೋಡಿಯಾಗಿ ನಿಕಿಷಾ ಪಟೇಲ್ ಇದ್ದು ಚಿತ್ರವು ಇವತ್ತಿನ ಯುವಜನರಿಗೆ ಇಷ್ಟವಾಗುವ ಲಕ್ಷಣಗಳು ಇವೆ ಎಂಬ ಮಾತುಗಳೂ ಕೇಳಿಬರುತ್ತಿವೆ.

ಕಲಾಸಾಮ್ರಾಟ್ ಮಗಳಿಗೆ ಕಂಕಣಭಾಗ್ಯ

ಕಲಾಸಾಮ್ರಾಟ್ ಎಂದು ತಮಗೆ ತಾವೇ ಘೋಷಿಸಿಕೊಂಡಿರುವ ಖ್ಯಾತ ರಿಮೇಕ್ ಸಿನಿಮಾ ಡೈರೆಕ್ಟರ್ ಎಸ್.ನಾರಾಯಣ್ ಕಳೆದ ಸೋಮವಾರ ತಮ್ಮ ಹಿರಿಯ ಮಗಳು ವಿದ್ಯಾಗೆ ಮದುವೆ ಮಾಡಿದ್ದಾರೆ. ಬೆಂಗಳೂರಿನಲ್ಲಿ ನಡೆದ ಈ ಮದುವೆಗೆ ಪಾರ್ವತಮ್ಮ ರಾಜಕುಮಾರ್, ಅಂಬರೀಶ್, ಸುಮಲತಾ, ಭಾರತಿ ವಿಷ್ಣುವರ್ಧನ್, ಲೀಲಾವತಿ, ಬಿ.ಸರೋಜಾದೇವಿ, ರಾಜೇಶ್, ಜಯಮಾಲ,



ಶಿವರಾಜ್ ಕುಮಾರ್ ಸೇರಿದಂತೆ ಚಿತ್ರರಂಗದ ಅನೇಕ ಗಣ್ಯರು ಆಗಮಿಸಿದ್ದರು.

ಅಂದಹಾಗೆ ಕಳೆದ ಕೆಲವು ತಿಂಗಳುಗಳ ಹಿಂದೆಯಷ್ಟೇ ವಿದ್ಯಾ-ಶ್ರೀನಿವಾಸ್ ಜೋಡಿ ಪರಸ್ಪರ ಉಂಗುರ ಬದಲಾಯಿಸಿಕೊಂಡು ನಿಶ್ಚಿತಾರ್ಥ ಮಾಡಿಕೊಂಡಿದ್ದರು. ಎಸ್.ನಾರಾಯಣ್ ತಮ್ಮ ಪತ್ನಿ ಭಾಗ್ಯವತಿ ಜೊತೆ ಸಂಭ್ರಮದಿಂದ ಓಡಾಡುತ್ತಿದ್ದರೆ ಮಕ್ಕಳಾದ ಪಂಕಜ್ ಮತ್ತು ಪವನ್ ಆಗಮಿಸುತ್ತಿದ್ದ ಅತಿಥಿಗಳನ್ನು ಅಕ್ಕರೆಯಿಂದ ಬರಮಾಡಿಕೊಳ್ಳುತ್ತಿದ್ದರು.

ರೀಮೇಕೋ, ಸ್ವಮೇಕೋ ಎಸ್.ನಾರಾಯಣ್ ಒಂದು ಹಿಟ್ ಸಿನಿಮಾ ಕೊಟ್ಟಿದ್ದು ಯಾವಾಗ ಎಂದು ನೆನಪಿಸಿಕೊಳ್ಳಲಾಗದಷ್ಟು ಕಾಲ ಉರುಳಿಹೋಗಿರುವಾಗ ಮಕ್ಕಳ ಮದುವೆ ಮಾಡುವುದರಲ್ಲಿ ಬ್ಯುಸಿಯಾಗಿರುವ ಇವರು ಹೀಗೇ ಆರಾಮಾಗಿರಲೆಂದು ಹಾರೈಸೋಣ ಅಲ್ಲವೇ?

ಜ್ವಲಂತಂ ಎಂಬ ಹೊಸಬರ ಚಿತ್ರ

'ಜ್ವಲಂತಂ' ಎಂಬುದೊಂದು ಹೊಸಬರ ಚಿತ್ರ ಬರುತ್ತಿದೆ. ಈಗಾಗಲೇ ಚಿತ್ರತಂಡವು ಹೊನ್ನಾವರ, ಕನಕಪುರ, ರಾಮನಗರ, ಚನ್ನಪಟ್ಟಣ ಮುಂತಾದ ಕಡೆಗಳಲ್ಲಿ ಚಿತ್ರದ ಮಾತಿನ ಭಾಗದ ಚಿತ್ರೀಕರಣ ಮುಗಿಸಿಕೊಂಡು ಬಂದಿದೆ. ಹಾಡುಗಳ ಚಿತ್ರೀಕರಣವಷ್ಟೇ ಬಾಕಿ ಉಳಿದಿರುವ ಈ ಚಿತ್ರಕ್ಕೆ ಬಿ.ಎಂ.ಅಂಬರೀಶ್ ಅನ್ನುವವರು ನಿರ್ದೇಶಕರು. ರೈತರು ಮತ್ತು ಬಂಡವಾಳಶಾಹಿಗಳ ಸುತ್ತ



ಹೆಣೆಯಲ್ಪಟ್ಟಿರುವ ಈ ಚಿತ್ರದ ಕಥೆಯಲ್ಲಿ ಇನ್ನೂ ಒಂದಿಷ್ಟು ಸಮಾಜಪರ ಚಿಂತನೆಗಳು ಇವೆಯಂತೆ. ಚಿತ್ರದ ಹೀರೋ ಜ್ವಾಲಾ ಇದೇ ಮೊದಲಬಾರಿ ನಟಿಸುತ್ತಿದ್ದು ಈತ ಮೂಲತಃ ಇಂಜಿನಿಯರ್. ಇನ್ನು ಈ ಚಿತ್ರದ ನಾಯಕಿಯ ಹೆಸರು ದೀಪಾಗೌಡ ಅಂತ. ಈಕೆ ಇದಕ್ಕೂ ಮೊದಲು 'ಕ', 'ಜಸ್ಟ್ ಮದ್ವೇಲಿ' ತರಹದ ಚಿತ್ರಗಳಲ್ಲಿ ಅಭಿನಯಿಸಿದ್ದರಂತೆ, 'ಜ್ವಲಂತ'ದಲ್ಲಿ ಈಕೆಯದು ಪತ್ರಕರ್ತೆಯ ಪಾತ್ರ. ಅನು ರಾವ್ ಈ ಚಿತ್ರದ ನಿರ್ಮಾಪಕಿ.


ಬೆಂಕಿಪಟ್ಣ ಮುಂದಿನ ವಾರ ತೆರೆಗೆ

ಸಣ್ಣಕಥೆಗಳನ್ನು ಬರೆದು ಒಂದಿಷ್ಟು ಜನರ ಗಮನ ಸೆಳೆದಿರುವ ಟಿ.ಕೆ.ದಯಾನಂದ್ 'ಬೆಂಕಿಪಟ್ಣ' ಎನ್ನುವ ಚಿತ್ರವೊಂದನ್ನು ನಿರ್ದೇಶಿಸಿರುವ ವಿಚಾರ ನಿಮಗೆ ಗೊತ್ತಿದೆ ಅಂದುಕೊಳ್ಳಬಹುದು. ಕರ್ನಾಟಕ ರಕ್ಷಣಾ ವೇದಿಕೆಯ ಟಿ.ಎ.ನಾರಾಯಣಗೌಡರ ಶಿಷ್ಯ ಮಾಸ್ತಿ ಜಾಕೀರ್ ಈ ಚಿತ್ರಕ್ಕೆ ಹಣ ಹಾಕಿರುವ ವಿಷಯ ನಿಮಗೆ ಗೊತ್ತಿರಲಿಕ್ಕಿಲ್ಲ ಅಂತಲೂ ಅಂದುಕೊಳ್ಳಬಹುದು. ಈಗಾಗಲೇ ಈ ಚಿತ್ರದ ಟ್ರೈಲರ್‌ಗಳು ಸಿನಿಪ್ರೇಮಿಗಳ ಗಮನ ಸೆಳೆದಿದ್ದು, ಚಿತ್ರದ ಹಾಡುಗಳೂ ಒಂದು ಮಟ್ಟಿಗೆ ಸೌಂಡ್ ಮಾಡಿದ್ದು ಚಿತ್ರದ ಬಗ್ಗೆ ಮತ್ತಷ್ಟು ನಿರೀಕ್ಷೆ ಹುಟ್ಟಿಕೊಳ್ಳಲು ಕಾರಣವಾಗಿದೆ. ಸ್ಟೀವ್ ಕೌಶಿಕ್ ಸಂಗೀತ ನೀಡಿರುವ 'ಬೊಗಸೆಯಲ್ಲಿ ಮಳೆ ಹಿಡಿದಂತೆ' ಹಾಗೂ 'ಇರಲಿ ಹೇಗೆ ನೀನಿರದೇನೆ' ಹಾಡುಗಳು ಈಗಾಗಲೇ ಈ ವರ್ಷದ ಹಿಟ್ ಲಿಸ್ಟ್‌ನಲ್ಲಿವೆ. ಇನ್ನು 'ದೂರಿ ದೂರಿ' ಹಾಡನ್ನು ಕೇಳಿದವರು ತಲೆದೂಗಿದ್ದಾರೆ.

ಹಾಗೆ ನೋಡಿದರೆ ಈ ಚಿತ್ರವನ್ನು ಬೇರೆ ಯಾರೋ ನಿರ್ದೇಶಿಸಬೇಕಿತ್ತು, ಟಿ.ಕೆ.ದಯಾನಂದ್ ಬರೀ ಕಥೆ, ಚಿತ್ರಕತೆ, ಸಂಭಾಷಣೆ ಬರೆಯಬೇಕಿತ್ತು. ಈ ಚಿತ್ರದ ಸ್ಕ್ರಿಪ್ಟ್ ರೆಡಿಯಾದ ಮೇಲೆ ಯಾರೋ ಒಬ್ಬ ನಿರ್ದೇಶಕನನ್ನು ನೇಮಿಸಲಾಗಿತ್ತಂತೆ. ಮೊದಲಿಗೆ ಆ ನಿರ್ದೇಶಕ ಈ ಚಿತ್ರವನ್ನು ನಿರ್ದೇಶಿಸಲು ಒಪ್ಪಿಕೊಂಡಿದ್ದು ಕ್ರಮೇಣ ತನ್ನ ಜಾತಕದ ಪ್ರಕಾರ ಇನ್ನೂ ಮೂರ್ನಾಲ್ಕು ತಿಂಗಳುಗಳ ಕಾಲ ಸಿನಿಮಾ ನಿರ್ದೇಶನ ಮಾಡಬಾರದು ಅಂತ ತಿಳಿಸಿದಾಗ ಅನಿವಾರ್ಯವಾಗಿ ದಯಾನಂದ್ ಈ ಚಿತ್ರದ ನಿರ್ದೇಶಕ ಆಗಬೇಕಾಯಿತು.

ಇದೀಗ ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆಗಳು ಹುಟ್ಟಿಕೊಂಡಿದ್ದು ಚಿತ್ರವು ಮುಂದಿನ ವಾರ ತೆರೆಗೆ ಬರುತ್ತಿದೆ. ದಿನಕರ್ ತೂಗುದೀಪ ತಮ್ಮ ಸಂಸ್ಥೆಯ ಮೂಲಕ ಈ ಚಿತ್ರವನ್ನು ರಾಜ್ಯಾದ್ಯಂತ ನೂರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುತ್ತಿದ್ದಾರೆ.

ಕಥೆಗಾರನಾಗಿ ಪ್ರತಿಭಾವಂತ ಅನ್ನಿಸಿಕೊಂಡಿರುವ ದಯಾನಂದ್ ಒಬ್ಬ ನಿರ್ದೇಶಕನಾಗಿ ಹೇಗೆ ತಮ್ಮ ಪ್ರತಿಭೆ ತೋರಿಸಿದ್ದಾರೆ ಅನ್ನುವುದು ಗೊತ್ತಾಗಲು ಸಿನಿಮಾ ಬಿಡುಗಡೆಯಾಗಬೇಕು.



ಬೆಂಕಿಪಟ್ಣ
ಅನುಶ್ರೀ-ಕೌಶಿಕ್


ಮಳೆ ಹಾಡು ಮಾರುಕಟ್ಟೆ



'ತಾಜ್ ಮಹಲ್', 'ಪ್ರೇಮ್ ಕಹಾನಿ', 'ಚಾರ್‌ಮಿನಾರ್', 'ಮೈಲಾರಿ' ತರಹದ ಸಿನಿಮಾಗಳನ್ನು ನಿರ್ದೇಶಿಸಿದ ಆರ್.ಚಂದ್ರು ಈ ಸಿನಿಮಾಗಳು ಗುಣಮಟ್ಟದ ವಿಷಯದಲ್ಲಿ ಎಷ್ಟರಮಟ್ಟಿಗೆ ವೋಟ್ ಪಡೆಯುತ್ತವೋ ಇಲ್ಲವೋ ಗೊತ್ತಿಲ್ಲ, ಆದರೆ ಹಾಡುಗಳ ವಿಷಯದಲ್ಲಿ ಈ ಸಿನಿಮಾಗಳ ಹಾಡುಗಳು ಪರವಾಗಿಲ್ಲ ಅಂತ ಒಪ್ಪಿಕೊಳ್ಳಬಹುದು.

ಹಾಗೆ ನೋಡಿದರೆ ಚಂದ್ರು ನಿರ್ದೇಶಿಸಿದ ಚಿತ್ರಗಳ ಪೈಕಿ ಗುರುಕಿರ
ಸಂಗೀತ ನೀಡಿದ್ದ 'ಬ್ರಹ್ಮ' ಚಿತ್ರದ ಹಾಡುಗಳೇ ಅತಿ ಕೆಟ್ಟದಾಗಿದ್ದದ್ದು. 'ಪೆಸೆಲ
ಹೇಳ್ತೀನ್ ಕೇಳು...' ಎನ್ನುವ ಅಷ್ಟೇನೂ ಸ್ಪೆಷಲ್ಲಾಗಿರದ ಓಕೆ ಎನ್ನಬಹುದಾ
ಹಾಡು ಬಿಟ್ಟರೆ 'ಬ್ರಹ್ಮ' ಚಿತ್ರದ ಇತರ ಯಾವೊಂದು ಹಾಡು ಕೂ
ನೆನಪಿನಲ್ಲಿ ಉಳಿಯುವಂತಹ, ಹೃದಯಕ್ಕೆ ತಟ್ಟುವಂತಹ ಹಾಡಾಗಿರಲಿಲ್ಲ

ಇಷ್ಟೆಲ್ಲಾ ಯಾಕೆ ಹೇಳಬೇಕಾಯಿತು ಅಂದರೆ ತಮ್ಮ ಸಾಮಥ
ಪ್ರತಿಭೆಗಿಂತಲೂ ಗಿಮಿಕ್‌ಗಳನ್ನೇ ನೆಚ್ಚಿಕೊಂಡಿರುವ ಆರ್.ಚಂದ್ರು ಅಂತ



ಹೇಳಿಕೊಳ್ಳುವಂತಹ ಡೈರೆಕ್ಟರ್ ಅಲ್ಲದಿದ್ದರೂ ಹೀಗೆ ಹಾಡುಗಳ ಬಗ್ಗೆ ಒಂದಿ
ಅಭಿರುಚಿ ಇರುವ ವ್ಯಕ್ತಿ; ಈ ವ್ಯಕ್ತಿ ಈಗ 'ಮಳೆ' ಎನ್ನುವ ಒಂದು ಸಿನಿಮ
ಮಾಡಿದ್ದಾರೆ ಎನ್ನುವ ವಿಷಯವನ್ನು ಹೇಳಬೇಕಾಗಿರುವುದರಿಂದ.

ಈ ಚಿತ್ರಕ್ಕೆ ಇವರು ನಿರ್ದೇಶಕರಲ್ಲ, ಬದಲಾಗಿ ನಿರ್ಮಾಪಕರ
ಕಳೆದ ಐದಾರು ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿರು
ಚಂದ್ರು ಇದೇ ಮೊದಲಬಾರಿಗೆ 'ಮಳೆ' ಚಿತ್ರ
ಮೂಲಕ ನಿರ್ಮಾಪಕರಾಗಿದ್ದಾರೆ. 'ನೆನಪಿರಲಿ' ನಂತ
ಒಂದೇ ಒಂದು ಹಿಟ್ ಕೊಡಲಾಗದೆ ತತ್ತರಿ
ಹೋಗಿರುವ ನಟನೆಯ ಗಂಧಗಾಳಿಯೇ ಗೊತ್ತಿಲ್ಲ
ಪ್ರೇಮ್ ಈ ಚಿತ್ರದ ಹೀರೋ ಅಂತೆ. ಅಮೂ
ಎಂಬ ಹೆಣ್ಣುಮಗಳು ಪ್ರೇಮ್
ಹೀರೋಯಿನ್.

ಈಗಾಗಲೇ ಬಿಡುಗಡೆ
ರೆಡಿಯಾಗಿರುವ ಈ ಚಿತ್ರದ ಹಾಡುಗ
ಮೊನ್ನೆಯಷ್ಟೇ ರಿಲೀಸಾದವ
'ಹುಡುಗಾಟ', 'ಸಂಜು ವೆಡ್ಸ್ ಗೀ
ತರಹದ ಚಿತ್ರಗಳಿಗೆ ಹಾ
ಮಾಡಿಕೊಟ್ಟಿದ್ದ ಜೆಸ್ಸಿ ಗಿಫ್ಟ್
ಬಾರಿ 'ಮಳೆ'ಗೆ ಮ್ಯೂಸಿ
ಮಾಡಿದ್ದಾರೆ. ಹಾಡುಗ
ಪರವಾಗಿಲ್ಲ. 'ಮಳೆ' ಚಿತ್ರ ಚೆನ್ನಾಗಿ
ಬೋರೆದ್ದುಹೋಗಿರುವ ಪ್ರೇ
ಮುಖವನ್ನು ಜನ ಸಹಿಸಿಕೊಂ
ಒಂದೆರಡು ವಾರ ಥಿಯೇಟರುಗ
ಚಿತ್ರ ಭದ್ರವಾಗಿ ನಿಂತರೆ ಹಾಡುಗ
ನಾಲ್ಕು ಜನರ ಕಿವಿಗೆ ಬೀಳಬಹು
ಗಿಮಿಕ್ ಡೈರೆಕ್ಟರ್ ಚಂದ
ಪ್ರೊಡ್ಯೂಸರ್ ಆಗಿ ಕೂ
ಗೆಲ್ಲಬಹುದು!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427.
Fax : 26604536, E-mail :lankesh70@rediffmail.com